ಕಾರ್ಯ ಆರಂಭಿಸಿದ ಜಿಲ್ಲಾ ಪರಿಷತ್ತು ಇವರ ಬಳಿಗೆ ಈ ಸಿಬ್ಬಂದಿಗಳನ್ನು ನೇಮಿಸಬೇಕಿತ್ತು. ಇದರಿಂದಾಗಿ ಎಲ್ಲಾ ಇಲಾಖೆಗಳ ಕೆಲಸ ಕಾರ್ಯಗಳು ಕುಂಠಿತಗೊಂಡಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಕೆಲಸಗಳಿಗೆ ಅಡಚಣೆಯಾಗಿದೆ. ಸರ್ಕಾರ ತಕ್ಷಣವೇ ಪರಿಶೀಲಿಸಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಪರಿಷತ್ತಿನ ಎಲ್ಲಾ ಇಲಾಖೆಗಳಲ್ಲಿ ಸಿಬ್ಬಂದಿಗಳನ್ನು ನೇಮಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರಿಗೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.— ಸ್ವಾಮಿ ಇವರು ಯಾವುದಕ್ಕೆ ಉತ್ತರ ತರಿಸಿಕೊಟ್ಟಿದ್ದಾರೆ ?

ಉಪಾಧ್ಯಕ್ಷರು.— ಉತ್ತರ ತರಿಸಿಕೊಡುತ್ತಾರೆ, ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.— ಸರಕಾರಿ ನೌಕರರು ಯಾರು, ನಿಮ್ಮ ಮಾತನ್ನು ಕೇಳುವುದಿಲ್ಲ.

ಉಪಾಧ್ಯಕ್ಷರು.— ದಯಮಾಡಿ ಕುಳಿತುಕೊಳ್ಳಿ. ತರಿಸಿ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಮ್ಮ ಪ್ರೊಫೆಸರ್ ಮಾತು ಯಾರು ಕೇಳುವುದಿಲ್ಲ ಅಂದರೆ ಏನು ಸ್ವಾಮಿ,

## 1988-89ರ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—(ಗುರುಮಿಟ್ಕಲ್) ಸನ್ಮಾನ್ಯ ಅಧ್ಯಕ್ಷರೆ, ನಾನು ನಿನ್ನೆಯ ದಿವಸ ಭಾಷಣವನ್ನು ಸ್ವಲ್ಪ ಪ್ರಾರಂಭ ಮಾಡಿದ್ದೆ ಅಷ್ಟರಲ್ಲಿ ಮಾನ ಮುಖ್ಯ ಮಂತ್ರಿಗಳು ಬಾರ್ಡರ್ ಇಷ್ಯು ಮೇಲೆ ಒಂದು ರೆಸಲ್ಯೂಷನ್ ತಂದು ಮಾತನಾಡುತ್ತೇನೆಂದು ಹೇಳಿದಾಗ ನನ್ನ ಭಾಷಣವನ್ನು ಮೊಟಕುಗೊಳಿಸಲಾಯಿತು. ಈಗ ಪ್ರಾರಂಭ ಮಾಡುತ್ತಿದ್ದೇನೆ. ೧೯೮೮-೮೯ನೇ ಸಾಲಿನ ಬಡ್ಜೆಟ್ಟನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಂದೆ ಮಂಡಿಸಿದ್ದಾರೆ. ಈ ಬಡ್ಜೆಟ್ಟಿನಲ್ಲಿ ಏನಾದರೂ ವಿಶೇಷವಾದಂಥ ಸವಲತ್ತುಗಳಾಗಲಿ, ಅಥವಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಸಹಾಯ ಮಾಡತಕ್ಕದ್ದು ಆಗಲಿ, ಬಡವರ ಬಗ್ಗೆ ಅನುಕಂಪವಿಟ್ಟು ಕೆಲಸ ಮಾಡತಕ್ಕದ್ದು ಆಗಲಿ ರೈತರ, ಹಿಂದುಳಿದ ಏಳಿಗೆಗಾಗಿ ಯಾವುದಾದರೂ ಹೊಸ ಯೋಜನೆಗಳು ಇದೆಯೇ ಎಂದು ಆಸೆ ಇಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರತಕ್ಕ ಬಡ್ಜೆಟ್ ನೋಡಿದರೆ ಅವರ ೩೦ ಪುಟದ ಭಾಷಣದಲ್ಲಿ ೧೫ ಪುಟ ಕೇಂದ್ರ ಸರ್ಕಾರವನ್ನು ದೂರುವುದರಲ್ಲಿ, ಅವರಿಗೆ ಹಿಯ್ಯಾಳಿಸಿ ಮಾತನಾಡುವುದರಲ್ಲಿಯೇ ಮುಗಿದಿದೆ. ಇನ್ನು ನಮ್ಮ ರಾಜ್ಯದ ಅನೇಕ ಸೆಕ್ಟಾರ್ಸ್‌ನಲ್ಲಿ ಮತ್ತು ಅನೇಕ ಡೆವಲಪ್‌ಮೆಂಟ್ಸ್ ಕಾರ್ಯಕ್ರಮಗಳಲ್ಲಿ ವಿಫಲರಾಗಿರುವುದನ್ನು ಮುಚ್ಚಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ತಮ್ಮ ಸಂಪೂರ್ಣವಾದಂಥ ಜವಾಬ್ದಾರಿಯನ್ನು ಮರೆತು ಆ ರೀತಿ ಕೇಂದ್ರ ಸರ್ಕಾರವನ್ನು ದೂರುವಂತಾದ್ದು ಈ ಸದನದ ಮುಂದೆ ಬಂದಿದೆ ಅದರ ಜೊತೆಯಲ್ಲಿ ತಮ್ಮ ವಿಫಲತೆಯನ್ನು ವೈಫಲ್ಯಗಳನ್ನು ತೋರಿಸಿಕೊಡಬಾರದು. ಎಷ್ಟೋ ರೀತಿಯಲ್ಲಿ ಕೆಲವು ಪದಗಳನ್ನು ಇದರಲ್ಲಿ ಉಪಯೋಗ ಮಾಡಿದ್ದಾರೆ ಇವರು ಹಿಂದೆ ಅರ್ಥ ಸಚಿವರಾಗಿದ್ದಾಗ ಅಂದರೆ ೧೯೬೮-೬೯ ೧೯೬೯-೭೦ ೧೯೭೧-೭೨ರ ಅಂದರೆ ಸುಮಾರು ಐದಾರು ವರ್ಷ ಅರ್ಥಸಚಿವರಾಗಿ ತಮ್ಮ ಬಜೆಟ್ ಭಾಷಣ ಯಾವರೀತಿ ಮಾಡಿದ್ದಾರೆ ಎಂದು ನೋಡಿದೆ ಅವರು ಮಾಡಿರತಕ್ಕ ಬಡ್ಜೆಟ್ ಭಾಷಣ ಯಾವರೀತಿ ಮಾಡಿದ್ದಾರೆ ಎಂದು ನೋಡಿದೆ ಅವರು ಹಿಂದೆ ಮಾಡಿರತಕ್ಕ ಬಡ್ಜೆಟ್ ಭಾಷಣದಲ್ಲಿ ಒಂದು ಚಕಾರ ಶಬ್ದ ಕೂಡ ಕೇಂದ್ರಸರ್ಕಾರದ ಬಗ್ಗೆಯಾಗಲಿ. ಅಥವಾ ಕೇಂದ್ರಸರ್ಕಾರದಿಂದ ನಮಗೆ ಈ ರೀತಿಯಾಗಿ ಅನ್ಯಾಯವಾಗುತ್ತಿದೆ ಎಂದಾಗಲಿ, ಹೇಳಿಲ್ಲ. ಕೇಂದ್ರ ಸರ್ಕಾರದ ಇನ್‌ಕಮ್‌ಟ್ಯಾಕ್ಸ್ ವಿಚಾರದಲ್ಲಿಯಾಗಲಿ ವೆಲ್ತ್ ಟ್ಯಾಕ್ಸ್ ವಿಚಾರದಲ್ಲಿಯಾಗಲಿ, ಎಕ್ಸೈಸ್ ಡ್ಯೂಟಿ ವಿಚಾರದಲ್ಲಿಯಾಗಲಿ, ಇನ್ನಿತರೆ ಯಾವುದೇ ಟ್ಯಾಕ್ಸ್ ವಿಚಾರದಲ್ಲಿಯಾಗಲಿ, ನಮಗೆ ಕೇಂದ್ರಸರ್ಕಾರದವರು ಅನ್ಯಾಯ ಮಾಡುತ್ತಿದ್ದಾರೆ ಎನ್ನುವಂಥ ಶಬ್ದವನ್ನು ಅವರ ೬ ವರ್ಷಗಳ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಭಾಷಣದಲ್ಲಿ ಎಲ್ಲಿಯೂ ಹೇಳಿಲ್ಲ. ಆದರೆ ಈಗ ಮಾತ್ರ ಅವರ ಧಾಟಿ ಬದಲಾಯಿಸಿದೆ. ೧೯೭೧-೭೨ರಲ್ಲಿ ಯಾವಾಗ ಕಾಂಗ್ರೆಸ್ ಇಬ್ಭಾಗವಾಯಿತು ಅನಂತರ ಕೆಲವು ಮಾತುಗಳನ್ನು ಹೇಳಿದ್ದಾರೆ ಮೊದಲು ಅವರು ಒಪ್ಪಿಕೊಂಡಿದ್ದಾರೆ, ಈ ದೇಶದಲ್ಲಿ ರಾಜಕೀಯ ಪರಿಸ್ಥಿತಿ ಏನು ಬದಲಾವಣೆ ೧೯೬೯ರಲ್ಲಿ ಆಯಿತು. ಅದು ಅದನಂತರ ಅಂದರೆ ೧೫ನೇ ಮಾರ್ಚಿ ೧೯೭೧ರಲ್ಲಿ ಬಜೆಟ್ ಭಾಷಣ ಮಾಡಿದ್ದಾರೆ. ೧೯೭೧-೭೨ರ ಬಜೆಟ್ ಭಾಷಣದಲ್ಲಿ ಏನು ಹೇಳಿದ್ದಾರೆ ಅಂದರೆ...

"The Fifth General Election to the Lok Sabha are just over and the Prime Minister Smt. Indira Gandhi has scored an epoch-making victory from the People of this country, including the people of Mysore, testifies that she is the undisputed leader of this country. Every democrat must respect the verdict of the people. The uncertainty that clouded the Central Leadership and its dependence on ceratin undesirable political foaces must now come to an end and we should now be able to look forward for a period of stability..."

ಈ ರೀತಿಯಲ್ಲಿ ಹೇಳಿಕೊಂಡು ಹೋಗಿದ್ದಾರೆ.

೧-೦೦ ಪಿ. ಎಂ.

ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಒಂದು ಕಡೆ ಆ ಕಾಲದಲ್ಲಿ ಆರೀತಿ ಭಾಷಣವನ್ನು ಮಾಡಿರತಕ್ಕದ್ದು ಇದೆ ಇವರು ರಿಸೋರ್ಸಸ್ ರಿಸೋರ್ಸಸ್ ಮೊಬಿಲೈಸೇಷನ್ ಬಗ್ಗೆ ಕೂಡ ದೂಷಣೆಯನ್ನು ಮಾಡತಕ್ಕದ್ದು ಇರಲಿಲ್ಲ. ಆದರೆ ಇವತ್ತು ಇವರು ಮಾಡಿರತಕ್ಕ ಬಜೆಟ್ ಭಾಷಣದಲ್ಲಿ ಸರ್ಕಾರಿಯಾ ಕಮಿಷನ್‌ನಿಂದ ಬಗ್ಗೆ ಹಿಡಿದು ಕೇಂದ್ರ ಸರ್ಕಾರದವರು ಹಾಕಿದಂಥ ಟ್ಯಾಕ್ಸ್‌ಗಳ ಬಗ್ಗೆ ಅವರ ರಿಸೋರ್ಸಸ್ ಮೇಲೆ ಇನ್ನಿತರ ವಿಚಾರಗಳ ಬಗ್ಗೆ ಸುಮಾರು ೧೨-೧೩ ಪುಟಗಳಷ್ಟು ಕೇವಲ ಟೀಕೆ ಟಿಪ್ಪಣಿಗಳನ್ನು ಮಾಡತಕ್ಕ ಕೆಲಸವನ್ನು ಮಾಡಿದ್ದಾರೆಯೇ ಹೊರತು ನಮ್ಮ ರಾಜ್ಯದಲ್ಲಿ ನಾವು ಏನು ಗುರಿಯನ್ನು ಇಟ್ಟುಕೊಂಡಿದ್ದೇವೆ. ನಾವು ಏನು ಸಾಧನೆಯನ್ನು ಮಾಡಿದ್ದೇವೆ, ಎಂಬುದನ್ನು ಹೇಳುವ ಪ್ರಯತ್ನವನ್ನು ಇವರು ಮಾಡಿಲ್ಲ. ಅದು ಇರಿಗೇಷನ್ ವಿಚಾರದಲ್ಲಿರಬಹುದು, ಪವರ್ ವಿಚಾರದಲ್ಲಿ ಇರಬಹುದು, ಇಂಡಸ್ಟ್ರೀಸ್ ವಿಚಾರದಲ್ಲಿ ಇರಬಹುದು ಸೋಷಿಯಲ್ ವೆಲ್‌ಫೇರ್ ಸ್ಕೀಂ ಬಗ್ಗೆ ಇರಬಹುದು, ಬ್ಯಾಕ್ ವರ್ಡ್ ಕ್ಲಾಸ್ ಬಗ್ಗೆ ಇರಬಹುದು. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವಿಚಾರದಲ್ಲಿ ಇರಬಹುದು ಅಥವಾ ಬೇರೆ ಇನ್ನಾವುದೇ ವಿಚಾರದಲ್ಲಿ ಇರಬಹುದು, ನಾವು ಏನು ಸಾಧನೆಯನ್ನು ಮಾಡಿದ್ದೇವೆ, ನಾವು ಏನು ಕೊಡುಗೆಯನ್ನು ಕೊಟ್ಟಿದ್ದೇವೆ. ನಮ್ಮ ಗುರಿ ಏನಿತ್ತು ಎನ್ನತಕ್ಕ ಯಾವುದೇ ವಿಚಾರವನ್ನೂ ಕೂಡ ಇಲ್ಲಿ ಹೇಳಿಲ್ಲ.

ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ ಇವತ್ತು ಇವರು ಸುಮಾರು ೧೫ ಪುಟಗಳಷ್ಟು ಕೇವಲ ರಾಜಕೀಯ ಭಾಷಣವನ್ನು ಮಾತ್ರ ಈ ಮೂಲಕ ಮಾಡಿದ್ದಾರೆ. ಇದು ಇವರ ಸ್ವಂತವಾದ ಪಾಂಪ್ಲೆಟ್. ಇದು ಜನತಾ ಪಕ್ಷದ ಒಂದು ಹ್ಯಾಂಡ್ ಬಿಲ್ ಆಗಿದೆ. ಮಾನ್ಯ ಉಪಾಧ್ಯಕ್ಷರೆ, ತಾವೂ ಕೂಡ ಇದನ್ನು ಓದಿದ್ದೀರಿ ಇದರಲ್ಲಿ ಯಾವ ಬಾಬಿಗೆ ಹಣವನ್ನು ಎಷ್ಟು ಒದಗಿಸಿದ್ದೇವೆ, ನಮ್ಮ ಗುರಿ ಏನು, ನಮ್ಮ ಸಾಧನೆ ಎಷ್ಟಾಗಿದೆ ಎನ್ನತಕ್ಕ ಬಗ್ಗೆ ಯಾವುದೇ ಸ್ಪಷ್ಟವಾದ ಅಂಕಿಅಂಶಗಳಿಲ್ಲ. ಸ್ವಾಮಿ, ತಮಗೆ ನಾನು ಒಂದೇ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಕೇಂದ್ರ ಸರ್ಕಾರದವರು ಹಿಂದೆ ಎಷ್ಟು ಹಣವನ್ನು ಕೊಟ್ಟಿದ್ದರು ಈಗ ಎಷ್ಟು ಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರ ಇದ್ದಾಗ ಎಷ್ಟು ಕೊಟ್ಟಿದ್ದರು, ನಂತರ ಜನತಾ ಸರ್ಕಾರ ಅಲ್ಲಿದ್ದಾಗ ನಮ್ಮ ರಾಜ್ಯಕ್ಕೆ ಏನು ಸಹಾಯ ಮಾಡಿದೆ ಎನ್ನತಕ್ಕ ವಿಚಾರವನ್ನೆಲ್ಲಾ ನಾನು ತಮ್ಮ ಮುಂದಿಡುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರವನ್ನು ಪ್ರತಿಯೊಂದು ಬಾಬಿನಲ್ಲೂ ದೂರಿ, ದೂರಿ ನಿಮ್ಮ ಕರ್ತವ್ಯದಿಂದ, ನಿಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಾರದೆಂದು ನಾನು ಹೇಳಬಯಸುತ್ತೇನೆ.

ಮಾನ್ಯ ಉಪಾಧ್ಯಕ್ಷರೇ, ಈ ಒಂದು ಹೊಸ ಬಜೆಟ್‌ನಲ್ಲಿ ಇವರು ಕೊಟ್ಟಿರತಕ್ಕದ್ದು ಏನೆಂದರೆ ಈ ಸರ್ಕಾರದವರು ಹೊಸದಾಗಿ ಅನೌನ್ಸ್ ಮಾಡಿದ್ದು ಸುಮಾರು ೩೫ ಹೊಸ ಪ್ರಪೋಸಲ್ಸ್‌ನ್ನು ಈ ೩೫ ಪ್ರಪೋಸಲ್ ಬಗ್ಗೆ ತಮಗೆ ಹೇಳಬೇಕೆಂದರೆ ಯಾವ ವ್ಯಕ್ತಿಗೂ ಕೂಡ ಈ ಬೆಂಗಳೂರಿನ ಸುತ್ತಮುತ್ತ ಇರುವವರನ್ನು ಬಿಟ್ಟು ಬೇರೆ ಕಡೆ ಇರುವವರಿಗೆ ಒಂದು ಕಿಂಚಿತ್ತೂ ಕೂಡ ಪ್ರಯೋಜನವಾದಂಥ ಯಾವುದೇ ಒಂದು ಯೋಜನೆಯೂ ಇದರಲ್ಲಿಲ್ಲ. ಈ ಎಲ್ಲಾ ಪ್ರಪೋಸಲ್‌ಗಳೂ ಕೂಡ ಕೇವಲ ಬೆಂಗಳೂರು ಸಿಟಿ ಮತ್ತು ಇದರ ಸುತ್ತಮುತ್ತ ಇರತಕ್ಕವರಿಗೆ ಅನುಕೂಲಕರವಾದಂಥದ್ದು. ಆದರೆ ರಾಜ್ಯದಲ್ಲಿ ಅತೀ ಹಿಂದುಳಿದಿರತಕ್ಕ ಭಾಗವಾದ ಉತ್ತರ ಕನ್ನಡಕ್ಕೆ ಅಂದರೆ ಆ ಭಾಗದ ಜನರಿಗೆ ಅನುಕೂಲವಾಗುವಂಥ ಯಾವ ಯೋಜನೆಗಳೂ ಇದರಲ್ಲಿಲ್ಲ. ಈ ೩೫ ಸ್ಕೀಂಗಳ ಪೈಕಿ ಬೀದರ್‌ಗಾಗಲಿ, ಗುಲ್ಬರ್ಗಾಕ್ಕಾಗಲಿ, ರಾಯಚೂರಿಗಾಗಲಿ, ಬಳ್ಳಾರಿಗಾಗಲಿ, ಬಿಜಾಪುರಕ್ಕಾಗಲಿ ಈ ಭಾಗದ ಜನರಿಗೆ ಅನುಕೂಲವಾಗತಕ್ಕ ಯಾವುದೇ ಒಂದು ಯೋಜನೆಯೂ ಕೂಡ ಇದರಲ್ಲಿಲ್ಲ. ಇದನ್ನು ನೋಡಿದರೆ ಇವರು ಕೇವಲ ಈ ಸಿಟಿ ಕಾರ್ಪೊರೇಷನ್‌ನ್ನು ಮಾತ್ರ ಆಳುತ್ತಿದ್ದಾರೇನೋ ಎಂದು ಅನ್ನಿಸುತ್ತದೆ. ಸರ್ಕಾರದ ಆಡಳಿತ ಕೇವಲ ಬೆಂಗಳೂರು ಸಿಟಿ ಕಾರ್ಪೊರೇಷನ್‌ಗೆ ಮಾತ್ರ ಎಂದು ನಾವು ತಿಳಿದುಕೊಳ್ಳಬೇಕೆ ? ಸ್ವಾಮಿ, ಇಲ್ಲಿ Opening of 100 Hostels for S,C., and S T., students ಎಂದು ತೋರಿಸಿದ್ದಾರೆ, ಏಕೆಂದರೆ ಎಸ್.ಸಿ, ಎಸ್.ಟಿ, ಯವರ ಹೆಸರನ್ನು ಹೇಳಿಕೊಂಡು ಹಾಸ್ಟೆಲ್ ತೆರೆದರೆ ನಮಗೆ ಖಂಡಿತ ಹಣ ಸಿಕ್ಕುತ್ತದೆಂದು ಇವತ್ತು ಇವರು ತಿಳಿದುಕೊಂಡು ಇದನ್ನು ಸೇರಿಸಿದ್ದಾರೆ.

೧೯೮೭-೮೮ರ ಬಜೆಟ್‌ನಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ಎಸ್.ಟಿ. ಎಸ್.ಸಿ, ಹಾಸ್ಟೆಲ್‌ನ್ನು ತೆರೆಯುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಬಸವಣ್ಣಪ್ಪನವರು ಕೂಡ ಪೇಜ್ ನಂಬರ್ ೧೮, ಐಟಮ್ ನಂಬರ್ ೧೬ರಲ್ಲಿ ಪ್ರತಿಯೊಂದು ತಾಲೂಕು ಕೇಂದ್ರದಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದರು. ಇಡೀ ನಮ್ಮ ರಾಜ್ಯದಲ್ಲಿ ಇರುವ ತಾಲ್ಲೂಕುಗಳು ಎಂದರೆ ೧೭೫ ಆದರೆ ಇವತ್ತಿನವರೆಗೂ ೧೭೫ ಹಾಸ್ಟೆಲ್‌ಗಳನ್ನು ತೆರೆದು ಪೂರ್ಣಗೊಳಿಸಿಲ್ಲ. ಇವತ್ತು ಇವರು ಏನಾದರೂ ಅಚೀವ್‌ಮೆಂಟ್ ಮಾಡಿರುತ್ತಾರೆಯೋ ಎಂಬುದನ್ನು ಎಕನಾಮಿಕ್ಸ್ ಸರ್ವೆಯು ೧೯೮೮ರಲ್ಲಿ ನೋಡಿದೆ. ಅದರಲ್ಲಿ ೧೭೫ ಹಾಸ್ಟೆಲ್‌ಗಳನ್ನು ಓಪನ್ ಮಾಡುತ್ತೇವೆಂದು ಕೊಟ್ಟಿರುವುದನ್ನು ನೋಡಿದೆ. ಆದರೆ ಈವತ್ತು ಮತ್ತೆ ಅದೇ ಮಾತನ್ನು ತಮ್ಮ ಬಜೆಟ್ ಸ್ಪೀಚ್‌ನಲ್ಲಿ ಅದೇ ಪೇಜ್ ನಂಬರ್ ೧೮ರಲ್ಲಿ ಅಂದರೆ ಹೋದ ವರ್ಷ ಯಾವ ಪೇಜ್‌ನಲ್ಲಿ ಪ್ರಿಂಟ್ ಮಾಡಿದ್ದರೋ ಅದೇ ಪೇಜ್‌ನಲ್ಲಿ ಪುನಃ ಹೊಸದಾಗಿ ೧೦೦ ಹಾಸ್ಟೆಲ್‌ಗಳನ್ನು ಕೊಡುತ್ತೇವೆಂದು ಹೇಳಿರುತ್ತಾರೆ. ಇದರಿಂದ ಇವರು ಯಾವ ಕನ್‌ವಿಕ್ಷನ್ ಇಟ್ಟುಕೊಂಡು ಕೆಲಸ ಮಾಡುತ್ತಾರೆ ಎನ್ನುವ ಪ್ರಶ್ನೆಯನ್ನು ನಾವು ಮಾಡಬೇಕಾಗುತ್ತದೆ. ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ ಜನಾಂಗವನ್ನು ನಾವು ಮುಂದುವರಿಸಿದಷ್ಟು ನೀವು ಮುಂದುವರಿಸಿಲ್ಲ ಎನ್ನುವ ಮಾತನ್ನು ಪದೇ ಪದೇ ಹೇಳುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಈ ಮಾತನ್ನು ಇವರು ಹೇಳಲು ನೈತಿಕ ಹಕ್ಕಿದೆಯೆ ಎಂದು ನಾವು ವಿಚಾರ ಮಾಡಬೇಕಾಗುತ್ತದೆ. ಈ ಜನಾಂಗಕ್ಕೆ ಸಹಾಯ ಮಾಡುತ್ತೇವೆಂದು ೧೭೦ ಹಾಸ್ಟೆಲ್‌ಗಳನ್ನು ತೆಗೆಯುತ್ತೇವೆಂದು ಮೊದಲು ಹೇಳಿ ಈಸಲ ಮತ್ತೆ ಅದನ್ನೇ ಹೇಳುತ್ತಿದ್ದಾರೆ. ನಿನ್ನೆ ಮಾನ್ಯ ಪ್ರೊಫೆಸರ್ ಲಕ್ಷ್ಮೀಸಾಗರ್‌ರವರು ಹೇಳಿದರು "ಹೇಳಿದ್ದೇ ಹೇಳಿದ ಕಿಸುಬಾಯಿ ದಾಸಯ್ಯ" ಎಂದು ಹೇಳುವುದು ಇವರಿಗೆ ಅಪ್ಲೆಯಾಗುತ್ತದೆ, ಪ್ರಿಂಟ್ ಮಾಡಿದ್ದೇ ಮಾಡಿದ್ದು. ಇದು ಸರ್ಕಾರವನ್ನು ನಡೆಸುವ ರೀತಿಯೇ ? ಕಮಿಟ್‌ಮೆಂಟ್ ಇಲ್ಲದ ಸರ್ಕಾರವನ್ನು ಜನ ನಂಬುವುದಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಇವತ್ತು ತಾವು ಅಧಿಕಾರದಲ್ಲಿ ಬಂದು ಕುಳಿತಿದ್ದೀರಿ. ಹೇಳಿದ ರೀತಿಯಲ್ಲಿ ನಡೆದುಕೊಳ್ಳುತ್ತೇವೆಂದು ಹೇಳತಕ್ಕಂಥ ಕನ್‌ವಿಕ್ಷನ್ ನಿಮಗೆ ಇಲ್ಲದಿದ್ದರೆ ನೀವು ಇಲ್ಲಿರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬೇಕಾಗುತ್ತದೆ. ಹೋದ ವರ್ಷದಲ್ಲಿ ಒಂದು ಹೇಳಬಹುದು. ಈ ವರ್ಷ ಇನ್ನೊಂದು ಹೇಳುವಂತಾಗಬಾರದು ಬಜೆಟ್‌ನಲ್ಲಿ ಹೇಳಿದ್ದನ್ನು ಮಾಡುವಂತಿರಬೇಕು. ಮಾನ್ಯ ಮುಖ್ಯಮಂತ್ರಿಗಳು ಅಡ್ಮಿನಿಸ್ಟ್ರೇಷನ್, ಹಣಕಾಸು ಮುಂತಾದ ಎಲ್ಲಾ ಖಾತೆಗಳನ್ನು ಇಟ್ಟುಕೊಂಡಿದ್ದರೂ ಕೂಡ ಇಂಥ ಒಂದು ಯೋಜನೆಗಳನ್ನು ಜಾರಿಗೆ ತರುವುದಕ್ಕೆ ಆಗುತ್ತಿಲ್ಲವಾದರೆ ಏತಕ್ಕೆ ಈ ಸರ್ಕಾರ ಇರಬೇಕೆಂದು ನಾನು ಕೇಳಬೇಕಾಗುತ್ತದೆ, ಎಲ್ಲಾ ಸೌಲಭ್ಯವನ್ನು ಒದಗಿಸಿ ಕೊಡುತ್ತೇವೆಂದು ಹೇಳಿ ಒಂದು ಕೋಟಿ ಷೆಡ್ಯೂಲ್‌ಕ್ಯಾಸ್ಟ್ ಜನಾಂಗಕ್ಕೆ ಮೋಸ ಮಾಡುತ್ತಿದ್ದಾರೆ. ಅದೇರೀತಿಯಲ್ಲಿ ಹಿಂದುಳಿದ ಜನಾಂಗಕ್ಕೂ ಕೂಡ ಹೇಳಿದ್ದಾರೆ. ಅವರಿಗೂ ಕೂಡ ಇದೇರೀತಿಯಾದ

ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಬ್ಯಾಕ್‌ವರ್ಡ್‌ಕ್ಲಾಸ್ ನವರಿಗೆ 100 ಹಾಸ್ಟೆಲ್‌ಗಳನ್ನು ತೆಗೆಯುತ್ತೇವೆಂದು ಹೇಳಿದ್ದಾರೆ. 30 ಆಶ್ರಮ ಶಾಲೆಗಳನ್ನು ತೆಗೆಯುತ್ತೇವೆಂದು ಹೇಳಿದ್ದಾರೆ. ಒಂದು ಕಾಲದಲ್ಲಿ ನಾಲ್ಕುನೂರು ಐದುನೂರು ಆಶ್ರಮ ಶಾಲೆಗಳನ್ನು ತೆರೆದರೂ ಬಜೆಟ್‌ನಲ್ಲಿ ಮೆನ್‌ಷನ್ ಮಾಡುತ್ತಿರಲಿಲ್ಲ. ಆದರೆ ಇಲ್ಲಿ ಪ್ರಾವಿಷನ್ ಮಾಡಿರುವುದನ್ನು ಕೂಡ ಹೇಳಿದ್ದಾರೆ. ಈ ರೀತಿ ಕೆಲಸ ಮಾಡತಕ್ಕಂಥ ಪದ್ಧತಿಯನ್ನು ಅನುಸರಿಸಿದರೆ ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಇದು ಒಂದು ಕಡೆಯಾದರೆ ಹೋದಸಾರಿ ಅನೇಕ ಮಾತುಗಳನ್ನು ಬಡ್ಜೆಟ್ಟಿನಲ್ಲಿ ಹೇಳಿದ್ದೀರಿ. ಅವುಗಳಲ್ಲಿ ಎಷ್ಟನ್ನು ಫುಲ್‌ಫಿಲ್ ಮಾಡಿದ್ದೀರಿ ? ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ನಿವೇಶನ ರಹಿತ ವ್ಯಕ್ತಿಗಳಿಗೆ ಮನೆ ನಿವೇಶನಗಳ ಮಂಜೂರಾತಿ ಎಂದು ನಿವೇಶನಗಳನ್ನು ಕೊಟ್ಟಿದ್ದೀರಿ. ಎಲ್ಲೆಲ್ಲಿ ಮನೆ ನಿವೇಶನಗಳನ್ನು ಕೊಟ್ಟಿದ್ದೀರೋ ಅಲ್ಲೆಲ್ಲಾ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೋದ ಸಾರಿ ಘೋಷಣೆ ಮಾಡಿದ್ದೀರಿ. ಈಗ ನೀವು ಎಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ ? ನಿವೇಶನಗಳನ್ನು ಕೊಟ್ಟ ಕಡೆಗಳಲ್ಲೆಲ್ಲಾ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಾ ? ಜನರನ್ನು ದಿಕ್ಕು ತಪ್ಪಿಸತಕ್ಕ, ನಂಬಿಕೆಗೆ ದ್ರೋಹ ಬಗೆಯುತಕ್ಕ ಹೇಳಿಕೆಗಳನ್ನು ಏತಕ್ಕೆ ಕೊಡುತ್ತಿದ್ದೀರಿ? ಇದೆಲ್ಲಾ ನೀವು ಹೇಳಿರತಕ್ಕದ್ದೇ ಹೊರತು ನಾನು ಹೇಳುತ್ತಿರುವುದಲ್ಲ. ಇದು ನಿಮ್ಮ ಹೋದ ಸಾರಿಯ ಆಯುವ್ಯಯದ ಭಾಷಣ. ನಂತರ, ಪ್ರತಿಯೊಂದು ಮಂಡಲದಲ್ಲಿ ಒಂದು ಗ್ರಂಥಾಲಯವನ್ನು ತೆರೆಯುತ್ತೇವೆಂದ ಹೇಳಿದ್ದೀರಿ. ತಮಗೆಲ್ಲಾ ಗೊತ್ತಿರುವ ಹಾಗೆ ಶೇಕಡ 60–70ರಷ್ಟು ಮಂದಿ ಹಳ್ಳಿಗಳಿಂದ ಬಂದಿರತಕ್ಕ ಶಾಸಕರಿದ್ದೇವೆ. ಎಷ್ಟು ಮಂಡಲಗಳಲ್ಲಿ ಗ್ರಂಥಾಲಯಗಳ ಸ್ಥಾಪನೆಯಾಗಿದೆ ? ಇದು ನಿಮ್ಮ ಸಾಧನೆಯೇ ? ಒಂದು ಕಡೆ ಹೇಳುತ್ತೀರಿ ಇನ್ನೊಂದು ಕಡೆ ನಿಮಗೆ ಮಾಡತಕ್ಕ ಶಕ್ತಿ ಇಲ್ಲ. ಮೊದಲು ಹೇಳಿದ್ದನ್ನು ಮಾಡದೆ ಇನ್ನೊಂದು ಕಡೆ ಇನೊಂದು ಭರವಸೆ ಕೊಡುತ್ತೀರಿ. ಅದೇ ರೀತಿ, ಉರ್ದು ನಿರ್ದೇಶನಾಲಯವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಅದಕ್ಕೆ ದುಡ್ಡಿಲ್ಲವೆಂದು ಈಗ ಕೇಳುತ್ತಿದ್ದೇವೆ.

ಶ್ರೀ ಎಂ. ರಘುಪತಿ.—ಉರ್ದು ಡೈರೆಕ್ಟರೇಟ್ ಸ್ಥಾಪನೆಯಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಮೈನಾರಿಟೀಸ್ ಡೈರೆಕ್ಟರೇಟ್ ಆಗಿದೆಯೇ ಹೊರತು ಉರ್ದು ಡೈರೆಕ್ಟರೇಟ್ ಆಗಿಲ್ಲ. ದಯವಿಟ್ಟು ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಗೆ ಕೊಡತಕ್ಕ ಸೌಲಭ್ಯಗಳು ಅಲ್ಲೇ ನಿಂತಿವೆ.

SRI MOHAMMED LIQUIDDIN.—It was promised by Hon. Chief Minister on the floor of the House.

ಉಪಾಧ್ಯಕ್ಷರು.—ತಾವು ಮಾತನಾಡುವಾಗ ಹೇಳಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೆಳಗಾಂನಲ್ಲಿ ಟೆಕ್ನಿಕಲ್ ಎಜುಕೇಷನ್ ಯೂನಿವರ್ಸಿಟಿಯನ್ನು ಮಾಡುತ್ತೇವೆಂದು ಹೇಳಿದ್ದಿರಲ್ಲ ಅದು ಆಯಿತೆ ? ಬೆಂಗಳೂರಿನಲ್ಲಿ ಮೆಡಿಕಲ್ ಸೈನ್ಸ್ ಯೂನಿವರ್ಸಿಟಿ ಮಾಡುತ್ತೇವೆಂದು ಹೇಳಿದ್ದಿರಲ್ಲ ಅದು.

ಆಯಿತೆ? ನೀವೇ ಕೊಟ್ಟ ಭರವಸೆಗಳನ್ನು ಈಡೇರಿಸತಕ್ಕ ಶಕ್ತಿ ನಿಮಗೆ ಇಲ್ಲ. ಆದರೂ ಮತ್ತೆ ಏತಕ್ಕೆ ಇದರಲ್ಲಿ ಹೇಳಿದ್ದೀರಿ? ನಿಮಗೆ ಹೊಸದಾಗಿ ಮಾಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಹೋದಸಾರಿಯ ಕಾರ್ಯಕ್ರಮಗಳಿಗೆ ಯಾವ ರೀತಿ ಸ್ಟ್ರೆಂಗ್ತನ್ ಮಾಡಬೇಕೋ ಅದನ್ನು ಮಾಡುತ್ತೇವೆಂದು ಹೇಳಬೇಕಾಗಿತ್ತು. ಎರಡೇ ಪುಟದ ಬಡ್ಜೆಟ್ ಇದ್ದರೂ ಪರವಾಗಿರಲಿಲ್ಲ. ಸುಮ್ಮನೆ ಇಷ್ಟೊಂದು ಪುಟಗಳನ್ನು ಜನರಿಗೆ ತೋರಿಸುವುದಕ್ಕೋಸ್ಕರ ಪ್ರಿಂಟ್ ಮಾಡಿ ಓದಿ ಹೇಳಿ ಏತಕ್ಕೆ ಮೋಸ ಮಾಡುತ್ತಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. ಹೀಗಾಗಿ ದಿವಾಳಿತನದ ಸರ್ಕಾರದಿಂದ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಿಮಗೆ ಸುಳ್ಳು ಹೇಳಿ ಹೇಳಿ ಅಭ್ಯಾಸವಾಗಿದೆ, ಜನರಿಗೆ ಮೋಸ ಮಾಡಿ ಮಾಡಿ ಅಭ್ಯಾಸವಾಗಿದೆ ಎಂಬ ಮಾತನ್ನು ಹೇಳಬೇಕಾಗುತ್ತದೆ. ಈ ಮಾತನ್ನು ನಾನು ಅವರ ಬಡ್ಜೆಟ್ ಭಾಷಣದ ಆಧಾರದ ಮೇಲೆಯೇ ಹೇಳುತ್ತಿದ್ದೇನೆಯೇ ಹೊರತು ನಾನು ನನ್ನ ಬಾಯಿಂದ ಹೇಳುತ್ತಿಲ್ಲ. ಜನರಿಗೆ ಹಲವಾರು ಭರವಸೆಗಳನ್ನು ಕೊಟ್ಟು ಒಂದು ಕೆಲಸವನ್ನೂ ಮಾಡುವುದಕ್ಕೆ ನಿಮಗೆ ಶಕ್ತಿ ಇಲ್ಲವೆಂದರೆ ಇಂಥ ದುರ್ಬಲ ಸರ್ಕಾರವನ್ನು ನಾನು ಈ ಮನೆಯ ಸದಸ್ಯನಾಗಿ 18 ವರ್ಷಗಳಿಂದ ನೋಡಿರಲಿಲ್ಲ. ನಾವೇನಾದರೂ ಈ ರೀತಿ ಮಾಡಿದ್ದರೆ ಬೊಮ್ಮಾಯಿಯವರು ನಮ್ಮನ್ನು ಹರಾಜು ಹಾಕುತ್ತಿದ್ದರು

ಶ್ರೀ ಎಂ. ರಘುಪತಿ.—ತಾವು ಈಲ್ಡ್ ಆದರೆ ಒಂದು ಉದಾಹರಣೆ ಹೇಳುತ್ತೇನೆ, ತಾವು ಸಚಿವರಾಗಿದ್ದಾಗ, ಶಿವಮೊಗ್ಗದಲ್ಲಿ ಕುವೆಂಪು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುತ್ತೇವೆಂದು ಕ್ಯಾಬಿನೇಟ್ ಮೀಟಿಂಗ್‌ನಲ್ಲಿ ತೀರ್ಮಾನ ಮಾಡಿದಿರಿ. ಆದನ್ನು ನಾವು ಬಂದಮೇಲೆ ಮಾಡಿದೆವು. ನಾನು ವಿದ್ಯಾ ಸಚಿವನಾಗಿದ್ದಾಗ ಆ ಕೆಲಸ ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ನಿರ್ಣಯ ತೆಗೆದುಕೊಂಡದ್ದನ್ನು ನೀವು ಮಾಡಿದ್ದೀರಿ. ನಮ್ಮ ಸರ್ಕಾರ ಬಿದ್ದುಹೋಗದಿದ್ದರೆ ನಾವೇ ಮಾಡುತ್ತಿದ್ದೆವು. ೧೯೮೩ರಲ್ಲಿ ನಮ್ಮ ಸರ್ಕಾರ ಹೋದದ್ದರಿಂದ ಮಾಡುವುದಕ್ಕಾಗಲಿಲ್ಲ, ನೀವು ನಮ್ಮ ಕಡೆ ಇದಿದ್ದರೆ ಖಂಡಿತವಾಗಿ ಮಾಡುತ್ತಿದ್ದೆವು. ನೀವು ಹತ್ತು ಹೇಳಿದ್ದರಲ್ಲಿ ಒಂದನ್ನೂ ಸರಿಯಾಗಿ ಮಾಡುವುದಿಲ್ಲವಲ್ಲ. ನೀವು ಹೇಳಿದ ಪ್ರಕಾರ ಅದು ಒಂದನ್ನು ನಾವು ಮಾಡಲಿಲ್ಲವೆಂದು ಒಪ್ಪಿಕೊಳ್ಳೋಣ. ಆದರೆ ನಾವು ನೂರು ಒಳ್ಳೆಯ ಕೆಲಸಗಳನ್ನು ಮಾಡಿರುವುದನ್ನು ತೋರಿಸುತ್ತೇನೆ. ನಿಮ್ಮ ಕಣ್ಣಿಗೆ ಏನಾಗಿದೆ ಎಂದರೆ ಎಲ್ಲಾ ಹಳದಿ ಬಣ್ಣವೇ ಕಾಣುತ್ತದೆ. ನಮ್ಮ ಕಡೆ ಒಂದು ಮಾತು ಹೇಳುತ್ತಾರೆ, ಕಾಮಾಲೆ ಆಗಿದೆ ಎಂದು. ಆ ರೀತಿ ಆಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮಗೆ ಅಲ್ಲ, ಜನರ ಕಣ್ಣಿಗೆ ಕಾಣಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನರೂ ರಿಯಲೈಸ್ ಮಾಡಿಕೊಂಡಿದ್ದಾರೆ. ನಮ್ಮ ಪೈಕಿ ಹೇಳುತ್ತಾರೆ, 'ಕೋಳಿ ತಿನ್ನುವವರು ಹೋಗಿ ಕೋಣ ತಿನ್ನುವವರು ಬಂದಿದ್ದಾರೆ' ಎಂದು ಹೇಳುತ್ತಾರೆ. ಈ ಮಾತನ್ನು ಹೇಳುತ್ತಿದ್ದಾರೆ. ನೀವೂ ಕೇಳಿಕೊಳ್ಳಬೇಕಾದರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಕೇಳಿದ್ದೇವೆ ಏನು ಹೇಳುತ್ತಾರೆ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಮಾತನ್ನು ಕೇಳುತ್ತೇನೆ, ನಿಮಗೆ ಸಮಾಧಾನ ಇದೆಯೆ ? ನೀವು ಕೊಟ್ಟಂಥ ಮಾತುಗಳನ್ನು ಉಳಿಸಿಕೊಳ್ಳತಕ್ಕ ಶಕ್ತಿ ನಿಮಗಿಲ್ಲದಿದ್ದರೆ ಪುನಃ ಏತಕ್ಕೆ ಹೇಳುತ್ತೀರಿ? ಹಿಂದೆ ಹೇಳಿದ ಕಾರ್ಯಕ್ರಮಗಳನ್ನೇ ಇದರಲ್ಲಿ ರಿಪೀಟ್ ಮಾಡಬಹುದಾಗಿತ್ತಲ್ಲ. ಇದಕ್ಕೆ ಹಣ ಒದಗಿಸತಕ್ಕ ಶಕ್ತಿ ಇಲ್ಲ ಎಂದಮೇಲೆ ನೀವು ಏತಕ್ಕೆ ಸುಮ್ಮಸುಮ್ಮನೆ ಬೇರೆ ಬೇರೆ ಕೆಲಸಗಳನ್ನು ತೆಗೆದುಕೊಳ್ಳುತ್ತೀರಿ? ಇದು ಮೊದಲನೆಯದು. ಶ್ರೀಮತಿ ನಾಗರತ್ನಮ್ಮನವರು ಪದೇ ಪದೇ ಹೇಳುತ್ತಿದ್ದರು. ಮಹಿಳೆಯರಿಗೆ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡಬೇಕು ಎಂದು ಹೋದ ಸಾರಿ ಮಹಿಳೆಯರಿಗೆ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುತ್ತೇವೆ ಎಂಬ ಭರವಸೆಯನ್ನಾದರೂ ಕೊಟ್ಟಿದ್ದರು. ಈ ಸಾರಿ ಅದರ ಪ್ರಸ್ತಾಪವೇ ಇಲ್ಲ. ಇದೊಂದು ಸಣ್ಣ ಕೆಲಸ. ಹಳ್ಳಿಯ ಹೆಣ್ಣು ಮಕ್ಕಳಿಗೆ ಅನುಕೂಲ ಆಗತಕ್ಕ ಕೆಲಸ. ಅನೇಕ ಹಳ್ಳಿಗಳಲ್ಲಿ ನೀರಾವರಿ ಆದಮೇಲೆ ಜಾಗಗಳೇ ಇಲ್ಲ. ಈ ರೀತಿ ಹತ್ತಾರು ನೀವು ಕೊಟ್ಟಿದ್ದಂಥ ವಾಗ್ದಾನಗಳನ್ನು ಈಡೇರಿಸಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಮಾತನ್ನು ಬೊಮ್ಮಾಯಿಯವರು ಹೇಳಿದ್ದಾರೆ. ಅದು ಎಲ್ಲಿಗೆ ಬಂತೋ ಗೊತ್ತಿಲ್ಲ. ಬರಗಾಲಪೀಡಿತ ಪ್ರದೇಶಗಳಲ್ಲಿ ಮೇವು ಅಭಿವೃದ್ಧಿ ಕಾರ್ಪೊರೇಷನ್ ಮಾಡುತ್ತೇವೆ ಎಂದು ಹೇಳಿದ್ದರು. ಬಜೆಟ್‌ನಲ್ಲಿ ಅದೂ ಕೂಡ ಬಂದಿತ್ತು. ಐಟಂ ನಂಬರ್ ೨೫ರಲ್ಲಿ ಅದು ಎಗ್ಸಿಸ್ಟೆನ್ಸ್‌ನಲ್ಲಿ ಬಂತೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಬೆಳೆದಂಥ ಮೇವನ್ನು ತೆಗೆದುಕೊಳ್ಳುವವರು ಇಲ್ಲ. ಗುಜರಾತಿಗೆ ಕಳುಹಿಸುತ್ತಿದ್ದೇವೆ. ಏಕೆಂದರೆ ನಮ್ಮಲ್ಲಿ ಸಮೃದ್ಧಿಯಾಗಿದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಅಂದರೆ ನಮಗೆ ಸಮಾಧಾನ ಮಾಡುವುದಕ್ಕೆ ಆ ಕಾಲಕ್ಕೆ ಏನು ಬೇಕಾಗಿತ್ತೋ ಅದನ್ನು ಮಾಡಿದಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಮೇವು ಬೆಳೆಸಿದ್ದೇವೆ. ಡಿಮ್ಯಾಂಡ್ ಇಲ್ಲದಿದ್ದುದಕ್ಕೆ ಗುಜರಾತಿಗೆ ಕಳುಹಿಸುತ್ತಿದ್ದೇವೆ. ಅಲ್ಲಿ ಸ್ಕೇರ್ಸಿಟಿ ಇರುವುದರಿಂದ ಅವರು ಕೇಳುತ್ತಿದ್ದಾರೆ. ನನ್ನ ಬೇಡಿಕೆ ಬಂದಾಗ ನಾನು ಈ ಬಗ್ಗೆ ವಿವರವಾದ ಉತ್ತರವನ್ನು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೀಗೆ, ಅಧ್ಯಕ್ಷರೆ, ಒಂದಲ್ಲ ಎರಡಲ್ಲ ಅನೇಕ ಉದಾಹರಣೆಗಳನ್ನು ನಾನು ಕೊಡಬಹುದು. ಇವರು ಕೊಟ್ಟಂಥ ವಾಗ್ದಾನವನ್ನು ನಿಭಾಯಿಸತಕ್ಕ ಕೆಲಸ ಮಾಡಿಲ್ಲ. ಪದೇ ಪದೇ ಇವರು ಏನು ಹೇಳುತ್ತಾರೆ? ಕೇಂದ್ರ ಸರ್ಕಾರ ನಮಗೆ ಸಹಾಯ ಮಾಡುತ್ತಿಲ್ಲ ಕೇಂದ್ರ ಸರ್ಕಾರ ನಮಗೆ ಸಪೋರ್ಟ್ ಮಾಡುತ್ತಿಲ್ಲ, ನಾವು ಇಷ್ಟು ಹಣ ಕೇಳಿದ್ದರೆ ಅವರು ಕಡಿಮೆ

ಕೊಟ್ಟರು. ನಾವು ಡ್ರಾಟ್‌ಗೆ ಕೇಳಿದರೆ ಅಸಿಸ್ಟೆನ್ಸ್ ಕೊಡಲಿಲ್ಲ ಎಂದು ಹೇಳಿದ್ದಾರೆ, ಡ್ರಾಟ್ ಪೀರಿಯಡ್‌ನಲ್ಲಿ ಯಾವ ಸರ್ಕಾರಕ್ಕೆ ತಾರತಮ್ಯ ಮಾಡಿದ್ದಾರೆ? ಕಾಂಗ್ರೆಸ್ ಸರ್ಕಾರ ಇರತಕ್ಕ ಮಹಾರಾಷ್ಟ್ರವನ್ನೇ ತೆಗೆದುಕೊಳ್ಳಿ, ಯಾವುದೇ ತೆಗೆದುಕೊಳ್ಳಿ. ಅಲ್ಲಿ ಕೂಡ ಪ್ಲಾನ್ ಅಸಿಸ್ಟೆನ್ಸ್‌ನಲ್ಲಿ ಅಡ್ವಾನ್ಸ್ ಲೋನ್ ಎಂದು ಕೊಟ್ಟಿದ್ದಾರೆ. ಅವರಿಗೆ ಪುಕ್ಕಟೆ ಕೊಡುತ್ತಾರೋ? ಅದೇ ತತ್ವ ನಿಮಗೂ ಕೂಡ ಇದೆ. ಅವರ ಹೆಸರು ಹೇಳಿಕೊಂಡು ಬದುಕಬೇಕು ಎಂಬ ಆಸೆ ನಿಮಗಿದೆ. ನಿಮ್ಮ ಸಾಮರ್ಥ್ಯ ತೋರಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬರಗಾಲದ ವಿಚಾರದಲ್ಲಿ ಕೇಂದ್ರಸರ್ಕಾರದ ಸಹಾಯ ನಮಗೆ ಸಿಕ್ಕಿಲ್ಲ ಎಂದು ಹೇಳುವುದಿಲ್ಲ. ಬೇರೆ ರಾಜ್ಯದ ಜೊತೆ ನೋಡಿದಾಗ ನಮಗೂ ಸರಿಯಾಗಿ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ರಾಜ್ಯಾಂಗದಲ್ಲಿ ರಾಜ್ಯ ಸರ್ಕಾರಕ್ಕೆ ಯಾವ ಯಾವ ಹಣ ಬರಬೇಕಾಗಿದೆಯೋ ಅದು ಮೊಟಕುಗೊಳ್ಳುತ್ತಿದೆ ಎಂದು. ನಮ್ಮ ರಾಜ್ಯ ಮಾತ್ರವಲ್ಲ, ಮಹಾರಾಷ್ಟ್ರ, ಮುಖ್ಯಮಂತ್ರಿಗಳಾದ ಶ್ರೀ ಚವಾಣ್ ಅವರು ಕೂಡ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೮೬-೮೭, ೧೯೮೭-೮೮ ಮತ್ತು ೧೯೮೮-೮೯ರಲ್ಲಿ ನಿಮ್ಮ ಮುಖ್ಯಮಂತ್ರಿಗಳು ಹೇಗೆ ಹೇಗೆ ಹೇಳಿದ್ದಾರೆ ಎಂಬುದನ್ನೂ ಹೇಳಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಖ್ಯವಾಗಿ ಅಡ್ಮಿನಿಸ್ಟ್ರೇಟೀವ್ ಪ್ರೈಸಸ್ ಬಗ್ಗೆ ಹೇಳಿದ್ದಾರೆ ಎಕ್ಸೈಜ್ ಹೆಚ್ಚು ಮಾಡಿದರೆ ರಾಜ್ಯ ಸರ್ಕಾರಕ್ಕೆ ಬರುತ್ತದೆ. ೧೮ ಸಾವಿರ ಕೋಟಿ ರೂಪಾಯಿಗಳನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯದ್ದೂ ಹೋಗುತ್ತಿದೆ, ಈ ರೀತಿ ರಾಜ್ಯಾಂಗಬದ್ಧವಾಗಿ ರಾಜ್ಯಸರ್ಕಾರಕ್ಕೆ ಬರತಕ್ಕ ಹಣಕಾಸಿನ ವಿಷಯದಲ್ಲಿ ಮೊಟಕುಗೊಳಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಬರಗಾಲದ ವಿಚಾರದಲ್ಲಿ ಕೇಂದ್ರ ಸರ್ಕಾರ ಕೊಟ್ಟಿದೆ. ನಾನು ಅನೇಕ ಸಾರಿ ಹೇಳಿದ್ದೇನೆ, ಅದಕ್ಕೆ ಕಾಂಪ್ಲಿಮೆಂಟ್ ಕೂಡ ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇವತ್ತು ಸಮರ್ಥವಾಗಿ ಕೆಲಸ ಮಾಡತಕ್ಕ ಅಥವಾ ವ್ಯವಸ್ಥಿತವಾಗಿ ಪ್ಲಾನ್ ಸ್ಕೀಮ್‌ಗಳಲ್ಲಿ, ನಾನ್ ಪ್ಲಾನ್‌ಗಳಲ್ಲಿ, ಅಭಿವೃದ್ಧಿ ಯೋಜನೆಗಳಲ್ಲಿ ಯಾವ ಯಾವ ರೀತಿಯಲ್ಲಿ ಕೆಲಸ ಮಾಡಬೇಕಾಗಿತ್ತು ಅದರಲ್ಲಿ ಇವರು ವಿಫಲರಾಗಿದ್ದಾರೆ. ಏಕೆ? ಪದೇ ಪದೇ ಒಬ್ಬೊಬ್ಬರು ಒಂದೊಂದು ರೀತಿಯ ಸ್ಟೇಟ್‌ಮೆಂಟ್ ಕೊಡುತ್ತಾರೆ. ಪ್ರತಿ ಸಲ ಈ ರಾಜ್ಯಕ್ಕೆ ಬೇರೆ ಬೇರೆ ರಾಜ್ಯಗಳಿಗೆ ಯಾವ ಯಾವ ಫಾರ್ಮುಲ ಪ್ರಕಾರ ಹಣವನ್ನು ಕೊಡಲಾಗುತ್ತಿದೆ ಅದೇ ಪ್ರಮಾಣದಲ್ಲಿ ಹಣವನ್ನು ಕೇಂದ್ರ ಸರ್ಕಾರ ಕೊಡುತ್ತಿದೆ, ಕಾಂಗ್ರೆಸ್ ಸರ್ಕಾರ ಇಲ್ಲಿ ಇದ್ದಾಗ ಯಾವ ರೀತಿ ಹಣ ಬರುತ್ತಿತ್ತು ಅದೇ ಪ್ರಮಾಣದಲ್ಲಿ ಜನತಾ ಸರ್ಕಾರ ಇರುವಾಗಲೂ ಬರುತ್ತಾ ಇದೆ. ಜನತಾ ಸರ್ಕಾರ ಎಂದು ಹೇಳಿ ಕೇಂದ್ರ ಏನೂ ತಾರತಮ್ಯ ಮಾಡಿಲ್ಲ. ಈ ಮಾತನ್ನು ಪದೇ ಪದೇ ತಾವು ಹೇಗೆ ತಪ್ಪಿಸಿಕೊಳ್ಳಬಾರದೆಂದು ಹೇಳುತ್ತೇನೆ. ತಾವು ಹೇಳದೇ ಇರಬಹುದು, ಆದರೆ ಅನೇಕರು ಹೇಳುತ್ತಾರೆ. ನಿಮ್ಮ ಶಾಸಕರೇ ಹೇಳುತ್ತಾರೆ. ನಾವೇನು ಮಾಡೋಣ, ಕೇಂದ್ರ ಸರ್ಕಾರ ಅವರ ಕೈಯಲ್ಲಿ ಇದೆ, ರಾಜ್ಯ ಸರ್ಕಾರ ನಮ್ಮದು ಎಂದು, ನಾವು ಏನು ಮಾಡುವುದಕ್ಕಾಗುತ್ತದೆ ಎಂದು ಹೇಳುತ್ತಾರೆ. ನಾನು ಕೆಲವು ಅಂಕಿಅಂಶಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಹೋದ ಸಲ ನಮ್ಮ ಅಪ್ರೂವ್ಡ್ ಪ್ಲಾನ ೧೯೮೭-೮೮ರಲ್ಲಿ ೮೮೦ ಕೋಟಿ ಇತ್ತು. ಅದು ಪ್ಲ್ಯಾಷ್ ಡೌನ್ ಆಗಿ ೮೭೦ ಕೋಟಿಗೆ ಬಂತು. ೧೯೮೭-೮೮ರಲ್ಲಿ ೯೧೭ ಕೋಟಿ ಇದ್ದುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಈ ಪ್ಲಾನ್ ಔಟ್‌ಲೇನಲ್ಲಿ ಸುಮಾರು ೨೫೦-೩೦೦ ಕೋಟಿ ರೂಪಾಯಿ ವರೆಗೆ ಶ್ಲ್ಯಾಷ್ ಡೌನ್ ಮಾಡಲಾಗಿದೆ. ನಿಮಗೆ ಸಿಕ್ಕ ಯೋಜನೆಗಳನ್ನು ಸಮರ್ಥವಾಗಿ ಉಪಯೋಗಿಸಿಕೊಂಡಿಲ್ಲ. ಈ ಬಗ್ಗೆ ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎಂದು ಇದು ತೋರಿಸುತ್ತದೆ. ಇದರಿಂದ ತೊಂದರೆ ಯಾರಿಗೆ ಆಗುತ್ತದೆ ? ಯಾವ ಯಾವ ಯೋಜನೆಗಳಿಗೆ ಹಣ ಒದಗಿಸಬೇಕೆಂದು ಇತ್ತು ಆ ಯೋಜನೆಗಳಿಗೆ ಇವತ್ತು ಹಣ ಇಲ್ಲದ ರೀತಿಯಲ್ಲಿ ತಾವು ಮಾಡಿ ಈ ಕರ್ನಾಟಕ ರಾಜ್ಯದ ಪ್ರಗತಿಯನ್ನು ತಾವು ನಿಲ್ಲಿಸಿದ್ದೀರಿ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಪ್ಲಾನ್‌ನಲ್ಲಿ ಕಳೆದ ನಾಲ್ಕೈದು ವರ್ಷಗಳಲ್ಲಿ ಸುಮಾರು ೨೪೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆದರೆ ನಿಮಗೆ ಕೇಂದ್ರದವರು ಮಂಜೂರಾತಿ ಕೊಟ್ಟಿದ್ದು ೨೬೪೧ ಕೋಟಿ ರೂಪಾಯಿಗಳು. ಎಂದರೆ ಸುಮಾರು ೨೦೦ ಕೋಟಿ ರೂಪಾಯಿಗಳಷ್ಟು ಲ್ಯಾಪ್ಸ್ ಆದಹಾಗೆ ಆಯಿತು. ಇಷ್ಟು ನೀವು ಖರ್ಚು ಮಾಡಿಲ್ಲ. ಏಕೆ ಖರ್ಚು ಮಾಡಿಲ್ಲ ? ಇದಕ್ಕೆ ಉತ್ತರ ಏನು ? ಒಂದು ಕಡೆ ರಿಸೋರ್ಸ್ ಮೊಬಲೈಸ್ ಆಗಿಲ್ಲ ಎಂದು ಹೇಳುತ್ತೀರಿ, ಅದಕ್ಕೆ ಅಂಕಿ

ಸಂಖ್ಯೆ ಕೊಡಂತ್ತೀರಿ. ಅಧ್ಯಕ್ಷರಿಗೆ ಇವತ್ತು ನಾವು ಮಂದಿಸಬೇಕಾಗುತ್ತದೆ. ಡಿಸೆಂಬರ್‌ವರೆಗೆ ಎಷ್ಟರ ಮಟ್ಟಿಗೆ ಹಣವನ್ನು ಸಂಗ್ರಹಣೆ ಮಾಡಿದ್ದಾರೆ ಹಾಗೂ ಎಷ್ಟು ಖರ್ಚು ಮಾಡಿದ್ದಾರೆಂಬುದನ್ನು ಮಾಹಿತಿಯನ್ನು ನಮಗೆ ಕೊಟ್ಟಿದ್ದಾರೆ. ಈ ವಿವರದ ಪ್ರತಿ ನಿನ್ನೆ ತಮಗೂ ಬಂದಿರಬಹುದು. ರಿಸೋರ್ಸಸ್ ಮೊಬಲೈಸ್ ಮಾಡುವಾಗ, ರಿಕವರಿ ಮಾಡುವುದಕ್ಕೆ ಹಿಂದೆ ಹೋಗಿದ್ದೀರಿ. ಹೋದವರ್ಷ ವಿಪರೀತ ಟ್ಯಾಕ್ಸ್ ಹಾಕಿದಿರಿ. ಈ ವರ್ಷ ೨೮ ಕೋಟಿ ರೂಪಾಯಿ ಹಾಕಿ ಸ್ವಲ್ಪ ನಿಂತುಬಿಟ್ಟಿದ್ದೀರಿ. ಕಾರಣ ಒಂದೇ ಸಲ ಹಾಕಿದರೆ ಜನ ಏಳುವುದಿಲ್ಲ ಎಂದು ಅಷ್ಟಕ್ಕೆ ಫುಲ್‌ಸ್ಟಾಪ್ ಮಾಡಿದ್ದೀರಿ. ಆದರೆ ಸಾಧನೆ ಏನು ಮಾಡಿದ್ದೀರಿ ? ಎಂದು ನಾನು ಕೇಳುತ್ತೇನೆ ? ಪ್ರತಿ ವರ್ಷ ತಾವು ಇದೇ ರೀತಿ ಮಾಡುತ್ತಾ ಹೋಗಿದ್ದೀರಿ. ಒಂದೇ ಸಾರಿ ಮಾಡಿದ್ದೀರಿ ಎಂದು ಅಲ್ಲ. ಮೊಬಲೈಸ್ ಮಾಡುವಾಗ ಕೂಡಾ ಹೋದ ಸಲ ೧೯೮೩–೮೪ರಲ್ಲಿ ೧೫೧ ಕೋಟಿ ರೂಪಾಯಿಂಗಳು, ೧೯೮೪–೮೫ರಲ್ಲಿ ೨೬೧ ಕೋಟಿ ರೂಪಾಯಿಂಗಳು. ೧೯೮೫–೮೬ರಲ್ಲಿ ೫೦ ಕೋಟಿ. ೧೯೮೬–೮೭ರಲ್ಲಿ ೧೨೯ ಕೋಟಿ ರೂಪಾಯಿಂಗಳು. ಮತ್ತು ೧೯೮೭–೮೮ರಲ್ಲಿ ೧೪೫ ಕೋಟಿ ರೂಪಾಯಿಗಳು ಈ ರೀತಿ ತೆರಿಗೆಯನ್ನು ಹಾಕಿದ್ದೀರಿ. ಇಷ್ಟಾಗಿದ್ದರೂ ಕೂಡ ಇವತ್ತಿನ ದಿವಸ ಏನಾಗಿದೆ ಎಂದರೆ ಪ್ರತಿಯೊಂದು ಭಾಗಕ್ಕೂ ನ್ಯಾಯವಾಗಿ ಸಹಾಯ ಮಾಡತಕ್ಕಂತಹದ್ದು, ಅಭಿವೃದ್ಧಿ ಮಾಡತಕ್ಕಂತಹ ಪ್ರವೃತ್ತಿಯನ್ನು ನೀವು ಬೆಳೆಸಿಕೊಂಡಿಲ್ಲ ಒಂದು ಕಡೆ ಹೆಚ್ಚಿನ ಟ್ಯಾಕ್ಸ್‌ನ್ನು ಹಾಕಿ ಜನರಿಂದ ರಿಸೋರ್ಸಸ್ ಮೊಬಲೈಜೇಷನ್ ಮಾಡಬೇಕೆಂಬ ದೃಷ್ಟಿ ಆದರೆ ಅದನ್ನು ಸದುಪಯೋಗ ಮಾಡಬೇಕಾದರೆ ಯಾವ ಜನ ಹಿಂದುಳಿದ ಭಾಗದವರು ಇದ್ದಾರೆ ಅವರಿಗೆ ಸಹಾಯ ಮಾಡಬೇಕು ಎನ್ನತಕ್ಕ ಭಾವನೆಯಿಂದ ಈ ಬಡ್ಜೆಟ್ಟನ್ನು ತಯಾರು ಮಾಡಿಲ್ಲ. ಪ್ರತಿಯೊಂದು ಬಡ್ಜೆಟ್ಟಿನಲ್ಲೂ ಇದೇ ಕೆಲಸವನ್ನು ಇವರು ಮಾಡಿದ್ದಾರೆ. ಅಂದರೆ ಸುಮ್ಮನೆ ಇವರಿಗೆ ಎಲ್ಲಿ ಖುಷಿ ಬರುತ್ತದೆಯೋ ಆ ಕೆಲಸವನ್ನು ಮಾಡುವುದು ಬಾಕಿಯನ್ನು ಬಿಟ್ಟುಬಿಡೋದು. ಎಲ್ಲಿ ನೀರಾವರಿ ಕೆಲಸಗಳನ್ನು ಮಾಡಬೇಕೋ ಅಲ್ಲಿ ಮಾಡುವುದಿಲ್ಲ. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಹಣವನ್ನು ಖರ್ಚು ಮಾಡುವುದಿಲ್ಲ. ಆದರೆ ಎಲ್ಲಿ ಅವಶ್ಯಕತೆ ಇಲ್ಲವೋ ಅಂತಹ ಕಡೆ ಹಣವನ್ನು ಖರ್ಚು ಮಾಡುವುದು. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ, ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ಕೊಟ್ಟಿರತಕ್ಕ ವರದಿಯನ್ನು ಮಾನ್ಯ ಬೊಮ್ಮಾಯಿಯವರೂ ಕೂಡ ನೋಡಿರಬಹುದು. ನನಗೂ ಬಂದಿದೆ. ಶ್ರೀಮಾನ್ ಕೆ.ಎಚ್. ಶ್ರೀನಿವಾಸ್ ರವರು ಆ ವರದಿಯನ್ನು ಕೊಟ್ಟಿದ್ದಾರೆ. ಇದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ೨೪ನೇ ವರದಿ. ೪೦ ಲಕ್ಷ ರೂಪಾಯಿಗಳನ್ನು ಒಬ್ಬ ಕಂಟ್ರಾಕ್ಟ್‌ದಾರರಿಗೆ ಮುಂಗಡವಾಗಿ ಕೊಟ್ಟಿದ್ದಾರೆ ಇದರ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ವರದಿಯನ್ನು ಕೊಟ್ಟಿದೆ. ಆದರೆ ಇದುವರೆವಿಗೂ ಸರ್ಕಾರ ಆ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

> "In para 4 of the report of the Committee, they have concluded that the advance was paid in a hurry and the officers did not make efforts to expedite the execution of works on schedule. Penalty was not levied on the shortfall of the progress from time to time as per agreement particularly even after agreeing to the conditions putforth by contractor in regard to payment of advance and release of 50% of the security deposit. The Committee recommended that the penalty for slow progress should be levied in terms of agreement by the anthority concerned. In reply Government stated that action to levy penalty is under consideration of the Government. The Committee are distressed to note that delay in taking action on their recommendations..."

ಎಂದು ಹೇಳಿ ಪಿ. ಎ. ಸಿ. ಯವರು ಖಂಡನೆ ಮಾಡಿದ್ದಾರೆ. ಈ ರೀತಿಯಾಗಿ ಅಡ್ವಾನ್ಸ್‌ನ್ನು ಕೆಲಸ ಇಲ್ಲದೆ ಇದ್ದರೂ ಕೊಟ್ಟುಬಿಡೋದು, ಎಲ್ಲಿ ಕೆಲಸವಾಗಿದ್ದು ಪೇಮೆಂಟ್ ಮಾಡಬೇಕೋ ಅಲ್ಲಿ ನಿಮಗೆ ಹಣ ಇಲ್ಲ. ಈಗಾಗಲೇ ಎಷ್ಟೋ ಪೇಮೆಂಟ್ ಮಾಡತಕ್ಕಂತಹ ಬಿಲ್ಲುಗಳು ಹಾಗೆಯೇ

ಬಿದ್ದಿವೆ ಅಂತಹ ಕಡೆ ದುಡ್ಡು ಕೊಡುವುದಕ್ಕೆ ನಿಮ್ಮಲ್ಲಿ ದುಡ್ಡು ಇಲ್ಲ. ಆದರೆ ಈ ರೀತಿ ಒಬ್ಬ ಕಂಟ್ರಾಕ್ಟ ದಾರನಿಗೆ ೪೦ ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಡುವುದಕ್ಕೆ ಮಾತ್ರ ನಿಮ್ಮಲ್ಲಿ ಹಣ ಇದೆ. ಇವರು ಶ್ರೀಮಾನ್ ಬೊಮ್ಮಾಯಿಯವರ ಭಾಗದ ಕಡೆಯವರು, ಕೊಡು ಎಂದು ಬೊಮ್ಮಾಯಿಯವರು ಹೇಳಿದರೆ ಕೊಟ್ಟುಬಿಡೋದು. ಯಾವ ಹೇಳಿಕೆಯ ಮೇಲೆ ಇಷ್ಟು ಹಣವನ್ನು ಕೊಟ್ಟಿದ್ದೀರೆಂಬುದನ್ನು ಇವತ್ತು ನಾನು ಕೇಳುತ್ತಿದ್ದೇನೆ. ಯಾರು ಇದಕ್ಕೆ ಕಾರಣರು ?

"Extra payment of Rs. 5.61 lakhs in Harangi Dam."

ಇದೂ ಪುಟ ೪ರಲ್ಲಿದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪಿ. ಎ. ಸಿ. ಯವರ ಇನ್ನೊಂದು ವಿಚಾರವನ್ನೂ ಹೇಳಿದ್ದಾರೆ.

"Irregularity in awarding a work costing over Rs. 15 crores in Hemavathi Project."

ಅದರ ಬಗ್ಗೆ ಪ್ರತ್ಯೇಕವಾದ ವರದಿಯನ್ನು ಈಗಾಗಲೇ ಕೊಟ್ಟಿದ್ದಾರೆ.

"Report relating to entrustment of the work of Bagur Naville tunnel work, Hemavathi Project. The Committee concluded that undue favour has been shown to the contractor by the Government and the MIPC Board and recommended that the matter should be examined by a Commission of Inquiry. Government in reply, argued and held that no undue favour has been shown to the contractors On the basis subsequent developments, Government in their notification appointed a Commission of Inquiry headed by Mr. Sadanandaswamy, Retired Chief Justice of Assam High Court."

ಅವರಿಂದ ವರದಿ ಬಂದಿದೆಯೋ ಅಥವಾ ಇಲ್ಲವೋ ಎಂಬುದು ಗೊತ್ತಿಲ್ಲ. ಇಂತಹ ಒಂದು ಇರ್ರೆಗ್ಯುಲಾರಿಟೀಸ್ ಮಾಡುವುದಕ್ಕೆ ನಿಮ್ಮಲ್ಲಿ ಹಣ ಇರುತ್ತದೆ. ಅವಶ್ಯಕವಾಗಿ ಎಲ್ಲಿ ಕೆಲಸ ಮಾಡಿದ್ದು ನ್ಯಾಯವಾಗಿ ಹಣವನ್ನು ಕೊಡಬೇಕೋ ಅಂತಹ ಕಡೆ ಹಣವನ್ನು ಕೊಡುವುದಕ್ಕೆ ನಿಮ್ಮಲ್ಲಿ ಹಣ ಇಲ್ಲ ಇದು ಯಾವ ನ್ಯಾಯ ? ಇದಕ್ಕಾಗಿಯೋ ನೀವು ಅಧಿಕಾರದಲ್ಲಿರಬೇಕೇ ? ಹೀಗೆ ಸಾರ್ವಜನಿಕ ಹಣವನ್ನು ಸ್ವಾರ್ಥಕ್ಕಾಗಿ ಯಾವ ರೀತಿ ದುರುಪಯೋಗ ಮಾಡುತ್ತಿದ್ದೀರೆಂಬುದನ್ನು ಹೇಳುತ್ತಿದ್ದೇನೆ. ಮೆಜಾರಿಟಿ ಇದೆ ಎಂಬುದಾಗಿ ಯಾವ ರೀತಿ ಹಣವನ್ನು ದುರುಪಯೋಗ ಮಾಡುತ್ತಿದ್ದಾರೆ ಎಂಬುದಕ್ಕೆ ಇದೊಂದು ಉದಾಹರಣೆ ಪ್ರತಿ ಸಲವೂ ಹೇಳುತ್ತಿರುತ್ತಾರೆ ಎರಡನೆಯದಾಗಿ ನಾವು ಹೇಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು

1.30 P. M.

Planning Commission approved by outlay of Rs. 870 crores for 1987-88 though the Government of Karnataka agreed only for Rs. 917 crores. ಕೇಂದ್ರ ಸರ್ಕಾರ ೮೭೦ ಕೋಟಿಗೆ ಅಪ್ರೂವ್ ಮಾಡಿದರೂ ನಮ್ಮ ಹತ್ತಿರ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವುದಕ್ಕಾಗುವುದಿಲ್ಲ ೯೧೭ ಕೋಟಿ ಮಾಡುತ್ತೇವೆಂದು ಹೇಳಿದರು, ಅದನ್ನು ಕೂಡ ಮಾಡತಕ್ಕ ಶಕ್ತಿಯಿಲ್ಲ. ೩೦೦ ಕೋಟಿ ಬಿಡಬೇಕಾಗುತ್ತದೆನ್ನುವ ಮಾತನ್ನು ಆಯವ್ಯಯ ಪತ್ರದಲ್ಲಿ ಹೇಳಿದ್ದಾರೆ, ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟು ಹೋಗಿದೆ. ಅದಕ್ಕೆ ಉತ್ತರ ಇವರದು ಬರಗಾಲ ಬಂತು ಎನ್ನುವುದನ್ನು ಬಿಟ್ಟರೆ ಮತ್ತೇನೂ ಇಲ್ಲ. ಒಂದು ಮಾತನ್ನು ಹೇಳಿದರೆ ಆಶ್ಚರ್ಯ ಎನಿಸುತ್ತದೆ. ೨೦ ವರ್ಷಗಳ ಹಿಂದೆ ೧೯೬೬–೬೭ರಲ್ಲಿ ಒಂದು ಮಾತು ಹೇಳಿದ್ದಾರೆ, ೧೯೬೬–೬೭ರಲ್ಲಿ ಆಯವ್ಯಯ ಪತ್ರವನ್ನು ಮಂಡಿಸುತ್ತಾ " ಅದರಲ್ಲಿ ಅನಾವೃಷ್ಟಿಯಿಂದ ಆಹಾರದ ಬೆಳೆಯಲ್ಲಿ ತೀವ್ರ ಕೊರತೆಯಿಂದಾಗಿ ದೇಶದ ಅನೇಕ ಕಡೆ ಅಭಾವ

ಪರಿಸ್ಥಿತಿ ತಲೆದೋರಿದೆ'', ಇದನ್ನು ಈಗಲೂ ಹೇಳಿಕೊಳ್ಳುತ್ತಾ ಬಂದಿದ್ದಾರೆ. ಇದನ್ನು ನೋಡಿದರೆ ನಮಗೆ ದುರ್ದೈವ ಅನಿಸುತ್ತದೆ. ಇವರು ಯಾವಾಗ ಫೈನಾನ್ಸ್ ಮಿನಿಸ್ಟರ್ ಆಗುತ್ತಾರೆ ಆಗ ಬರಗಾಲ ಬರುತ್ತದೆ. ಈ ಪುಣ್ಯಾತ್ಮ ಬಂದಮೇಲೆ ೫ ವರ್ಷಗಳಿಂದ ಬರಗಾಲ ಇದೆ. ಈಗ ಬರಗಾಲ ಅಂದರೆ ಆಗಲೂ ಬರಗಾಲ, ಬರಗಾಲಕ್ಕೂ ಇವರಿಗೂ ನಿರಂತರವಾದ ಸಂಬಂಧವಿದೆ. ಇವರ ಕಾಲದಲ್ಲಿ ರಾಜ್ಯದಲ್ಲಿ ಬರಗಾಲ, ಹಣಕ್ಕೆ ಬರಗಾಲ, ಬೆಳೆಗೆ ಬರಗಾಲ, ಮಾತಿಗೊಂದು ಬರಗಾಲವಿಲ್ಲ. ತದನಂತರ ಕರ್ನಾಟಕ ಸರ್ಕಾರದವರು ೯೧೭ ಕೋಟಿ ರೂಪಾಯಿಗಳಲ್ಲಿ ಪುನಃ ಇಳಿಸಿದ್ದೇವೆಂದು ಅವರೇ ಒಪ್ಪಿಕೊಂಡಿದ್ದಾರೆ. ೫೯೬ ಕೋಟಿ ರೂಪಾಯಿಗೆ ಬಂದರೂ ಅಂದರೆ ೩೨೩ ಕೋಟಿ ೭೪ ಲಕ್ಷ ಕಡಿಮೆಯಾಯಿತು. ಇವತ್ತು ಸಹ ಅದೇ ಮಾತನ್ನು ಹೇಳಿ ೩೦೦ ಕೋಟಿ ರೂಪಾಯಿಗೆ ಬಂದಿದ್ದಾರೆ. ಇಂತಹ ಫೈನಾನ್ಸಿಯಲ್ ಮಿಸ್‌ಮ್ಯಾನೇಜ್‌ಮೆಂಟ್ ಅನ್ನು ನಾನೆಂದೂ ಕೂಡ ನೋಡಿಲ್ಲ. ಇದು ಒಂದೇ ವರ್ಷ ಅಲ್ಲ, ಪ್ರತಿ ವರ್ಷ ಇದ್ದೇ ಇದೆ. ಅವರು ಕ್ಲೈಮ್ ಮಾಡತಕ್ಕದ್ದು ೯೧೭ ಕೋಟಿ ರೂಪಾಯಿ ಹೋಗಿ ಅದು ೫೯೬ ಕೋಟಿಗೆ ಬಂತು. ೧೯೮೪–೮೫ರಲ್ಲಿ ಅಪ್ರೂವ್ಡ್ ಪ್ಲಾನ್ ಔಟ್‌ಲೇ ಒಪ್ಪಿಕೊಂಡಿದ್ದುದು ೬೦೦ ಕೋಟಿ ರೂಪಾಯಿಗಳು ಇವರು ಕ್ರೋಢೀಕರಿಸಿದ್ದುದು ೬೩೦ ಕೋಟಿ ಎಂದರೆ ೩೦ ಕೋಟಿ ರೂಪಾಯಿಗಳು ಜಾಸ್ತಿ ಕ್ರೋಢೀಕರಣ ಮಾಡಿದರು. In 1983–84 actual plan outlay approved Rs. 628.53 crores as against the National Planning Commission's approval of Rs. 575 crores. 1984–85ರಲ್ಲಿ Rs. 737.32 crores against Rs. 650 crores. 1985–86ರಲ್ಲಿ Rs. 643.68 crores against Rs. 651 crores

೧೯೮೬–೮೭ ರದ್ದು ಈಗಾಗಲೇ ನಾನು ಹೇಳಿದ್ದೇನೆ. Rs. 636.32 crores as against Rs. 765 crores ೧೯೮೭–೮೮ ರದ್ದು ಈಗಾಗಲೇ ಹೇಳಿದ್ದೇನೆ. ಈಗ ೧೯೮೮–೮೯ರಲ್ಲಿ ಸುಮಾರು ೯೦೦ ಕೋಟಿ ರೂಪಾಯಿಗಳ ವೆಚ್ಚ ಕಡಿಮೆ ಮಾಡಬೇಕು. ಮುಂದೆ ಏನಾಗುತ್ತದೆಯೋ ಅದು ಮಳೆ ಬೆಳೆಯನ್ನು ಅವಲಂಬಿಸಿದೆ. ಈಗ ಹೇಳುವುದಕ್ಕೆ ಆಗುವುದಿಲ್ಲವೆಂದು ಅವರು ಬಜೆಟ್‌ನಲ್ಲಿ ಹೇಳಿದ್ದಾರೆ. ಈ ರೀತಿಯಾಗಿ ಒಂದು ಕಡಿತವನ್ನು ಅಥವಾ ಈ ಪ್ಲಾನ್‌ಔಟ್‌ಲೇನಲ್ಲಿ ಪ್ರೂವ್ ಆದರೂ ಕೂಡ ಹೆಚ್ಚು ಕೆಲಸ ಮಾಡುವುದಕ್ಕೆ ಇವರು ಅಸಮರ್ಥರಾಗಿದ್ದಾರೆ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಇವತ್ತಿನ ದಿವಸ ಹೇಳಬೇಕಾಗುತ್ತದೆ. ಆಮೇಲೆ ಪದೇ ಪದೇ ಹೇಳುತ್ತಾರೆ. ಏನೆಂದರೆ ಸೆಂಟ್ರಲ್ ಗವರ್ನಮೆಂಟ್‌ನವರು ಇವರನ್ನು ಡಿಸ್ಕ್ರಿಮಿನೇಟ್ ಮಾಡುತ್ತಿದ್ದಾರೆ ಎನ್ನತಕ್ಕ ವಿಚಾರ. ಹಿಂದೆ ಕೇಂದ್ರದಲ್ಲಿ ಜನತಾ ಸರ್ಕಾರ ಇತ್ತು, ಇಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ಕೇಂದ್ರದಲ್ಲಿ ಜನತಾ ಸರ್ಕಾರ ಇದ್ದಾಗ ಎಷ್ಟರಮಟ್ಟಿಗೆ ಇವರು ಸಹಾಯ ಮಾಡಿದ್ದಾರೆ, ಬರಗಾಲದಲ್ಲಾಗಲೀ ಯಾವುದೇ ಆಗಲಿ ಎಷ್ಟು ಪರ್ಸೆಂಟೇಜ್ ಇತ್ತು ಈಗ ಎಷ್ಟು ಇದೆಯೆಂದು ನೋಡೋಣ, ಇದರಲ್ಲಿ ಏನಾದರೂ ಅನ್ಯಾಯ ಆಗಿದೆಯೋ ? ಇದನ್ನು ನಾನು ತೋರಿಸುತ್ತೇನೆ State could get only 7 79% central assistance during Cong–I Government. ಆವಾಗ ಕೊಟ್ಟಿದ್ದು ೭.೭೯ ಅದು ೧೯೭೮ರಿಂದ ೮೩ರ ವರೆಗೆ ಅಲ್ಲಿ ಜನತಾ ಸರ್ಕಾರ ಇದ್ದಾಗ ನಮಗೆ ಸಹಾಯ ಮಾಡಿದ್ದುದು ೭.೭೯ ಪರ್ಸೆಂಟ್ ನಷ್ಟು. ಇಲ್ಲಿ ಜನತಾ ಸರ್ಕಾರ ಬಂದಮೇಲೆ ೧೯೮೩–೮೮ರವರೆಗೆ ಕೇಂದ್ರ ಸರ್ಕಾರ ೧೮.೨ರಷ್ಟು ಇವರಿಗೆ ಸಹಾಯ ಮಾಡಿದೆ. ಅಂದರೆ ಎರಡು ಪಟ್ಟು ಹೆಚ್ಚಾಯಿತು. ಏನು ತೊಂದರೆ ಇತ್ತು ? ಕೇಂದ್ರ ಸರ್ಕಾರದಿಂದ ಇವರಿಗೆ ತೊಂದರೆ ಇತ್ತೇ ? ಈ ರೀತಿ ಇದ್ದರೂ ಕೂಡ ಏಕೆ ಪದೇಪದೇ ಇದನ್ನೇ ಹೇಳಿಕೊಂಡು ನಿಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುತ್ತೀರೆಂದು ನಾನು ಕೇಳುತ್ತೇನೆ, ಜನತಾ ಸರ್ಕಾರದ ರಿಜೀಮ್‌ನಲ್ಲಿ ಇಲ್ಲಿ ನಮ್ಮ ಸರ್ಕಾರ ಇದ್ದಾಗ ನಾವು ಕೇಳಿದ್ದುದು ೩೭೦.೬೫ ಕೋಟಿ ಇದ್ದರೆ ನಮಗೆ ಕೊಟ್ಟಿದ್ದುದು ಎಷ್ಟು ಎಂದರೆ ೪೩ ಕೋಟಿ ರೂಪಾಯಿಗಳು. ಇದು ಸೆಂಟ್ರಲ್ ಗವರ್ನಮೆಂಟ್‌ನವರು ಡ್ರಾಟ್‌ಗೆ ರಿಲೀಸ್ ಮಾಡಿದ್ದುದು ಇಷ್ಟು. ಆದರೆ ನಮ್ಮ ಸರ್ಕಾರ ಕೇಂದ್ರದಲ್ಲಿದ್ದು ಜನತಾ ಸರ್ಕಾರ ಇಲ್ಲಿದ್ದಾಗ ಕೇಳಿದ್ದುದು ೧೯೫೪ ಕೋಟಿ ಆದರೆ ಸಿಕ್ಕಿದ್ದು ೧೯೧ ಕೋಟಿ ರೂಪಾಯಿಗಳು. ಅಂದರೆ ೧೮.೨ ಪರ್ಸೆಂಟ್ ಆಯಿತು. ಇಲ್ಲಿ ಅನ್ಯಾಯ ಏನು ಆಯಿತು ? ಇನ್ನೂ ಜಾಸ್ತಿ ಕೇಳೋಣ. ಆದರೆ ಇದನ್ನೇ ಏನು ಇವರು ಪದೇಪದೇ ಹೇಳುತ್ತಾರೆ ಇದು ಸರಿಯಲ್ಲ. ಆಮೇಲೆ ಇವರು ಎಷ್ಟರಮಟ್ಟಿಗೆ ತಮ್ಮ ಕೆಲಸವನ್ನು ಮಾಡಿದ್ದಾರೆ ಎನ್ನತಕ್ಕದ್ದು. ರಿಸೋರ್ಸ್ ಮೊಬಿಲೈಸೇಷನ್ ತೆಗೆದುಕೊಳ್ಳೋಣ. ಅಗ್ರೀಡ್ ಅಮೌಂಟ್ ನಾವು ೩೭೪ ಕೋಟಿ ೮೩–೮೪ರಲ್ಲಿ ಮಾಡುತ್ತೇವೆ ಎಂದು ಹೇಳಿ

ದ್ದರು. ಆದರೆ ಮೊಬಿಲೈಸೇಶನ್ ಮಾಡಿದ್ದುದು ಎಷ್ಟು ? ಎಂದರೆ ೩೨೭ ಕೋಟಿ. ಅಂದರೆ ರೌಂಡ್ ಅಬೌಟ್ ೫೦ ಕೋಟಿ ಡಿಫಿಸಿಟ್ ಬಂತು. ೮೪–೮೫ ರಲ್ಲಿ ೪೪೮ ಕೋಟಿ ಮೊಬಿಲೈಸೇಶನ್ ಮಾಡುತ್ತೇವೆ ಎಂದು ಹೇಳಿದ್ದರು. ಮೊಬಿಲೈಸ್ ಮಾಡಿದ್ದು ಎಷ್ಟು ಎಂದರೆ ೨೮೭ ಕೋಟಿ ಮಾತ್ರ.

ಆಮೇಲೆ ೧೯೮೫–೮೬ ರಲ್ಲಿ ೩೪೫ ಕೋಟಿ ರೂಪಾಯಿಗಳನ್ನು ರಿಸೋರ್ಸಸ್ ಮೊಬಲೈಸ್ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ನಿಜವಾಗಿಯೂ ಮೊಬಲೈಸ್ ಮಾಡಿದ್ದುದು ೧೬೫ ಕೋಟಿ ರೂಪಾಯಿಗಳು ಮಾತ್ರ. ೧೯೮೬–೮೭ ರಲ್ಲಿ ತಾವು ಹೇಳಿದ್ದುದು ೪೪೬ ಕೋಟಿ ರೂಪಾಯಿ ಮೊಬಲೈಸ್, ಆದರೆ ಮೊಬಲೈಸ್ ಮಾಡಿದ ಹಣ ೨೫೦ ಕೋಟಿ ರೂಪಾಯಿಗಳು ಮಾತ್ರ. ೧೯೮೭–೮೮ರಲ್ಲಿ ೫೦೧ ಕೋಟಿ ರೂಪಾಯಿ ಮೊಬಲೈಸ್ ಮಾಡುತ್ತೇವೆಂದು ಹೇಳಿದ್ದಿರಿ, ನಿಜವಾಗಿಯೂ ಮಾಡಿದ್ದುದು ೨೫೦ ಕೋಟಿ ರೂಪಾಯಿ ಮಾತ್ರ. ಹೀಗೆ ಎಲ್ಲಾ ಲೆಕ್ಕಕ್ಕೆ ತೆಗೆದು ಕೊಂಡರೂ ೮೪೨ ಕೋಟಿ ರೂಪಾಯಿಗಳು ಇವತ್ತಿನದಿವಸ ಷಾರ್ಟ್‌ಫಾಲ್ ಆಗಿದೆ. ನೀವು ವಾಗ್ದಾನ ಮಾಡಿದಂತೆ ರಿಸೋಸಸ್ ಮೊಬಲೈಸ್ ಮಾಡುವುದಕ್ಕಾಗಿಲ್ಲ, ನಿಜವಾಗಿಯೂ ೮೪೨ ಕೋಟಿ ರೂಪಾಯಿ ರಿಸೋರ್ಸಸ್ ಮೊಬಲೈಸ್ ಮಾಡುವುದಕ್ಕೆ ತಮಗೆ ಆಗಿಲ್ಲ. ಇದರಲ್ಲೂ ಫೇಲ್ಯೂರ್ ಆಗಿದೆ. ಅವಕ್ಕೆ ಈ ಪರಿಸ್ಥಿತಿ ಬಂದಿದೆ. ಇದರ ಕಡೆ ಯಾರ ಗಮನವೂ ಇಲ್ಲ. ಯಾವುದಕ್ಕೂ ಬರಗಾಲ ಮತ್ತು ಸೆಂಟ್ರಲ್ ಗವರ್ನಮೆಂಟ್ ಎಂದು ಹೇಳುತ್ತೀರಿ. ಇದನ್ನು ಕೇಂದ್ರಸರ್ಕಾರದವರು ಕಲೆಕ್ಟ್ ಮಾಡ ಬೇಕೇ ? ಇನ್ನು ಸೆಂಟ್ರಲ್ ಅಸಿಸ್ಟೆನ್ಸ್ ವರ್ಷೇ ವರ್ಷೇ ಯಾವರೀತಿ ಏರಿಕೊಂಡು ಹೋಗಿದೆ ಎನ್ನುವು ದಕ್ಕೆ ಉದಾಹರಣೆ ಕೊಡುತ್ತೇನೆ. ಯಾವರೀತಿ ಪ್ರತಿ ವರ್ಷ ಹೆಚ್ಚಿನ ಹಣವನ್ನು ಕೊಟ್ಟುಕೊಂಡು ಹೋಗುತ್ತಿದ್ದಾರೆ, ಇದನ್ನು ಗಮನಕ್ಕೆ ತೆಗೆದುಕೊಂಡಿದ್ದಾರೆಯೋ ಎಂಬುದರ ಬಗ್ಗೆ ಹೇಳಬೇಕಾಗಿದೆ. Central Assistance 1983-84 rupees 218.27 as against 279 crores, 1984-85 244.27 crores as against 238 crores, 1986-87 347.26 as against 347 crores. ಈ ವಿಚಾರಗಳು ಮುಖ್ಯಮಂತ್ರಿಗಳಿಗೆ ಚೆನ್ನಾಗಿ ಗೊತ್ತು. ಏಕೆಂದರೆ ಅವರು ಹಣಕಾಸಿನ ಮಂತ್ರಿಗಳಾಗಿ ೧೫–೧೬ ವರ್ಷಗಳ ಹಿಂದೆಯೇ ಕೆಲಸ ಮಾಡಿದ್ದಾರೆ. ೧೯೭೬ ರಲ್ಲಿಯೂ ಅವರು ಬಜೆಟ್ ಭಾಷಣ ಮಾಡಿದ್ದಾರೆ. ಆಗಲೂ ಕೂಡ ಬರಗಾಲದಿಂದ ಅವರ ಭಾಷಣ ವನ್ನು ಪ್ರಾರಂಭಮಾಡಿದ್ದಾರೆ. ಈಗಲೂ ಬರಗಾಲದಿಂದ ಪ್ರಾರಂಭ ಮಾಡಿದ್ದಾರೆ. ಈ ರೀತಿಯಾಗಿ, ಇಷ್ಟು ಮೊಬಲೈಸ್ ಮಾಡುತ್ತೇವೆಂದು ಒಂದುಕಡೆ ಹೇಳುತ್ತಾರೆ. ಇನ್ನೊಂದು ಕಡೆ ಮೊಬಲೈಸ್ ಮಾಡುವಂಥ ಸಾಮರ್ಥ್ಯವನ್ನು ತೋರಿಸಿಲ್ಲ, ಇದರಲ್ಲಿ ವಿಫಲರಾಗಿದ್ದಾರೆ ಎಂಬ ಮಾತನ್ನು ಹೇಳು ತ್ತೇನೆ. ಆಮೇಲೆ ಇವತ್ತು ಇನ್ನೊಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ, ಏಕೆಂದರೆ, ತಾವು ಇಲ್ಲಿ ಬಂದಿದ್ದೀರಿ, ಈಗ ಕೆಲವು ಭಾಗದಲ್ಲಿ ಕೆಲಸಗಳನ್ನು ತೆಗೆದುಕೊಂಡಿದ್ದೀರಿ. ಇದು ಪಿ.ಡಬ್ಲ್ಯು.ಡಿ. ಖಾತೆಗೆ ಸಂಬಂದಪಟ್ಟರೂ ಕೂಡ, ಈ ಬಜೆಟ್ ಪ್ರಾವಿಷನ್ ಮಾಡುವಾಗ ಇದನ್ನು ಗಮನಿಸಬೇಕಾ ಗಿತ್ತು. ಹೈದರಾಬಾದ್ ಕರ್ನಾಟಕದ ಶಾಸಕರು, ಆ ಭಾಗಕ್ಕೆ ಮುಖ್ಯಮಂತ್ರಿಗಳು ಬಂದಾಗ, ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ಭೇಟಿಯಾಗಿದ್ದೆವು. ಮಾನ್ಯ ದೇವೇಗೌಡರೂ ಬಂದಾಗಲೂ ಭೇಟಿ ಯಾಗಿದ್ದೆವು. ನಮ್ಮ ಭಾಗ ಹಿಂದುಳಿದ ಭಾಗ, ಹೈದರಾಬಾದ್ ಕರ್ನಾಟಕಕ್ಕೆ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಬೇಕು ಆದ್ದರಿಂದ ಹೆಚ್ಚಿನ ಸಹಾಯವನ್ನು ಕೊಡತಕ್ಕಂಥಾದ್ದನ್ನು ಮಾಡ ಬೇಕೆಂದು ಕೇಳಿಕೊಂಡಿದ್ದೆವು...

ಶ್ರೀ ಬಿ, ಬಸವಲಿಂಗಪ್ಪ —ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು, ಮೊದಲು ಮಂತ್ರಿ ಗಳಾಗಿದ್ದಾಗ, ಬೆಂಗಳೂರಿನಿಂದ ವ್ಯವಹಾರ ಮಾಡಿಬಿಟ್ಟು ಅಭಿವೃದ್ಧಿ ಕಾರ್ಯಗಳನ್ನು ಎಲ್ಲಾ ಪ್ರದೇಶ ಗಳಿಗೂ ವಿಸ್ತರಿಸುವುದಕ್ಕೆ ಆ ಗ ವುದಿಲ್ಲ, ನಾವು ನಾಲ್ಕು ಬೋರ್ಡ್‌ಗಳನ್ನು ಮಾಡಿಬಿಟ್ಟು, ಆಯಾ ಪ್ರದೇಶಗಳಲ್ಲಿ ಏನು ಅಭಿವೃದ್ಧಿ ಕಾರ್ಯಗಳು ಇರುತ್ತವೆಯೋ ಅದನ್ನು ಸಾಧನೆ ಮಾಡುತ್ತೇವೆಂದು ಹೇಳಿದರು. ಅದು ಯಾವ ತಾರೀಖು ಎಂದು ನನಗೆ ಗೊತ್ತಿಲ್ಲ ಇದರ ಬಗ್ಗೆ ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡುತ್ತಿದ್ದಾರೆ. ಇದನ್ನು ಅವರು ಬೇಕೆಂದೇ ಪ್ರಸ್ತಾಪ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅವರು ಹೇಳಿದ ಪ್ರಕಾರ ಮಾಡಿದ್ದರೆ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಆದರೆ ಇದುವರೆಗೆ ಅವರು ಮಾಡಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಇದನ್ನು ಇವರ ಗಮನಕ್ಕೆ ತರುತ್ತಿದ್ದೇನೆ. ಎಂದರೆ ಹಿಂದುಳಿದ ಭಾಗಕ್ಕೆ ಸಹಾಯ ಮಾಡುತ್ತೇವೆಂದು ಹೇಳಿ ನಮಗೆ ಆಶ್ವಾಸನೆ ಕೊಟ್ಟಿದ್ದೀರಿ. ಎಷ್ಟೋ ಸಲ ನಾವು ಇದರ ಬಗ್ಗೆ ಬರೆದು ಕೊಟ್ಟಿದ್ದೇವೆ. ಆದರೆ ಇವತ್ತು ಬಜೆಟ್ ನೋಡಿದರೆ ಅದು ಬೇರೆಯೇ ಆಗಿದೆ. ಡೀಟೈಲ್ಡ್ ಎಸ್ಟಿಮೇಟ್ಸ್ ಬುಕ್‌ನಲ್ಲಿ ೭೨ನೇ ನಂಬರ್ ಪೇಜ್ ನೋಡಿ. ನಮ್ಮ ಕಡೆ ರೋಡ್ಸ್, ಬ್ರಿಡ್ಜಸ್ ಮತ್ತು ಆಸ್ಫಾಲ್ಟಿಂಗ್ ಇಂತಹ ಸಣ್ಣ ಸಣ್ಣ ಕಲಸಗಳೂ ಕೂಡಾ ಆಗಿಲ್ಲ. ಗುಲಬರ್ಗಾ ಸರ್ಕಲ್‌ನಲ್ಲಿ ಬ್ರಿಡ್ಜಸ್ ಕೆಲಸ ನಾಲ್ಕೇ ನಾಲ್ಕು ತೆಗೆದುಕೊಂಡಿದ್ದಾರೆ. ಅದೂ ನಿಮ್ಮ ಜನತಾ ಪಕ್ಷದ ಸೆಕ್ರೆಟರಿಗಳು ಆಳಂದ್ ತಾಲ್ಲೂಕಿನಲ್ಲಿ ಎರಡು, ನಮ್ಮ ಚಿತಾಪುರ ತಾಲ್ಲೂಕಿನ ಗುಂಡ ಗುರ್ತಿಯಲ್ಲಿ ಒಂದು, ವಿಶ್ವನಾಥ್ ಪಾಟೀಲ್ ಹೆಬ್ಬಾಳ್ ಎಂ.ಎಲ್.ಎ. ಇವರ ಊರಿನ ಹತ್ತಿರ ಒಂದು ನಾಲ್ಕೇ ಕೆಲಸ. ಈ ನಾಲ್ಕು ಕೆಲಸ ಬಿಟ್ಟರೆ ಬೇರೆ ಯಾವ ಕೆಲಸ ಕೂಡಾ ಇಲ್ಲ. ಒಂದೆರಡು ವಿಚಾರ ಗಳನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ, ಹೆಚ್ಚು ಹೇಳುವುದರಲ್ಲಿ ಅರ್ಥ ಇಲ್ಲ. ಬೇರೆ ಬೇರೆ ಡಿವಿಜನ್‌ನವರಿಗೂ ನೀವು ಬ್ರಿಡ್ಜಸ್ ಕೆಲಸಕ್ಕೆ ಪ್ರಾವಿಜನ್ ಮಾಡಿರುತ್ತೀರಿ. ಅವರಿಗೆ ಮಾಡಬಾರ ದೆಂದು ನಾನು ಹೇಳುವುದಿಲ್ಲ. ಕೋಲಾರ ಡಿವಿಜನ್‌ಗೆ ೬೦ ಲಕ್ಷ ರೂಪಾಯಿಗಳ ಪ್ರಾವಿಜನ್ ಮಾಡಿ ರುತ್ತೀರಿ, ತುಮಕೂರು ಡಿವಿಜನ್‌ಗೆ ೨೫ ಲಕ್ಷ, ಬೆಂಗಳೂರು ಸರ್ಕಲ್‌ಗೆ ೨೪ ಲಕ್ಷ, ಮಂಡ್ಯ ಡಿವಿಜನ ಗೆ ೮೭ ಲಕ್ಷ. ಮೈಸೂರು ಡಿವಿಜನ್‌ಗೆ ೨೨ ಲಕ್ಷ ರೂಪಾಯಿಗಳನ್ನು ಪ್ರಾವಿಜನ್ ಮಾಡಿರುತ್ತೀರಿ. ಆದರೆ ನಮ್ಮ ಗುಲಬರ್ಗಾ ಡಿವಿಜನ್‌ಗೆ ಬಂದರೆ ೧೦ ಲಕ್ಷ ರೂಪಾಯಿ ಪ್ರಾವಿಜನ್ ಮಾಡಿರುತ್ತೀರಿ, ಸಣ್ಣ ಸಣ್ಣ ಜಿಲ್ಲೆಗಳಿಗೆ ೫೦-೬೦ ಲಕ್ಷ ರೂಪಾಯಿ ಪ್ರಾವಿಜನ್ ಮಾಡಿರುತ್ತೀರಿ, ಆದರೆ ಗುಲಬರ್ಗಾ ಡಿವಿಜನ್‌ಗೆ ೧೦ ಲಕ್ಷ, ಬೀದರ್ ಡಿವಿಜನ್‌ಗೆ ೧೦ ಲಕ್ಷ ಪ್ರಾವಿಜನ್ ಮಾಡಿರುತ್ತೀರಿ. ಇಡೀ ನಮ್ಮ ರಾಜ್ಯದಲ್ಲಿ ಬಿಜಾಪುರ ಬಿಟ್ಟರೆ ಎಲ್ಲದಕ್ಕಿಂತ ದೊಡ್ಡ ಜಿಲ್ಲೆ ಎಂದರೆ ಗುಲಬರ್ಗಾ ಜಿಲ್ಲೆ. ಅಂತಹದಕ್ಕೆ ೧೦ ಲಕ್ಷ ರೂಪಾಯಿ ಪ್ರಾವಿಜನ್ ಮಾಡಿರುತ್ತೀರಿ. ಸಣ್ಣ ಪುಟ್ಟ ಜಿಲ್ಲೆಗಳಿಗೆ ತಮಗೆ ಬೇಕಾದಂತ ಕಡೆಗಳಲ್ಲಿ ಜಾಸ್ತಿ ಮಾಡಿದ್ದೀರಿ, ನಾನು ಅವರಿಗೆ ಕೊಡಬಾರದೆಂದು ಹೇಳುವುದಿಲ್ಲ. ನ್ಯಾಯವಾಗಿ ಕೊಡಿ, ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಡಿ. ಅದನ್ನು ಬಿಟ್ಟು ನಿಮ್ಮ ಮನಸ್ಸಿಗೆ ಬಂದ ಹಾಗೆ ಸ್ವೇಚ್ಛಾಚಾರ ಮಾಡುವುದು ಸರಿಯಲ್ಲ. ಅಲ್ಲಿನ ಭಾಗ ಹಿಂದುಳಿದಿದೆ, ಅಲ್ಲಿನ ಜನ ಕರ್ನಾಟಕ ಭಾಗದವರೇ, ಅವರೇನು ಮಹಾರಾಷ್ಟ್ರದವರೇ ? ನಿಮಗೆ ಸೌಜನ್ಯ ಇಲ್ಲ, ಪದೇ ಪದೇ ನೂರಾರು ಸಲ ಈ ಸದನದಲ್ಲಿ ಹೇಳಿದರೂ ಕೂಡಾ ಒಂದು ಕೆಲಸವನ್ನು ಕೂಡಾ ತೆಗೆದುಕೊಳ್ಳುವ ಸೌಜನ್ಯ ತಮಗೆ ಇಲ್ಲ.

ತದನಂತರ ರೋಡ್ಸ್ ವಿಚಾರ ಹೇಳುತ್ತೇನೆ. ರೋಡ್ಸ್ ವಿಚಾರದಲ್ಲಿ ಕೂಡಾ ಇದೇ ರೀತಿಯಾಗಿದೆ ಗುಲಬರ್ಗಾ ಡಿವಿಜನ್‌ನಲ್ಲಿ ರೋಡ್ಸ್‌ಗೆ ೧೦ ಲಕ್ಷ ೫೦ ಸಾವಿರ ಪ್ರಾವಿಜನ್ ಮಾಡಿದ್ದೀರಿ. ಅದರಲ್ಲೂ ಹೇಗೆ ಮಾಡಿದ್ದೀರಿ ಎಂದರೆ ಒಂದು ಕಡೆ ೫ ಸಾವಿರ, ಇನ್ನೊಂದು ಕಡೆಗೆ ೦ ಸಾವಿರ. ಮ್ಯಾಕ್ಸಿಮಮ್ ಎಂದರೆ ೫೦ ಸಾವಿರ ಪ್ರಾವಿಜನ್ ಮಾಡಿರುತ್ತೀರಿ. ಹೀಗೆ ಮೈನರ್ ಇರಿಗೇಷನ್ ಹಾಗೂ ಇತರ ವಿಚಾರಗಳೂ ಇದೇ ರೀತಿಯಾಗಿವೆ. ಇದಕ್ಕೆ ಯಾರು ಕಾರಣಕರ್ತರು ? ಇದರ ಬಗ್ಗೆ ನಾವು ಪಿ.ಡಬ್ಲ್ಯು.ಡಿ. ಇಲಾಖೆ ವಿಚಾರ ಬಂದಾಗ ಮಾತನಾಡೋಣ. ಇದಕ್ಕೆ ಹಣ ಒದಗಿಸುವುದು ಇದನ್ನು ಜಸ್ಟಿಫೈ ಮಾಡುವುದು ತಮ್ಮ ಕೈಯಲ್ಲಿಗುವಾಗಲೂ ಕೂಡಾ ತಾವು ಇದನ್ನು ಸರಿಪಡಿಸುವುದಿಲ್ಲ. ಏತಕ್ಕೆ ಎಂದರೆ ಗುಲಬರ್ಗಾದಲ್ಲಿ ಎಲ್ಲಾ ಆಪೋಸಿಷನ್‌ನವರು ಆರಿಸಿಬಂದಿದ್ದಾರೆ ಅವರನ್ನು ಸಪ್ರೆಸ್ ಮಾಡಬೇಕು, ಅನ್‌ಪಾಪ್ಯುಲರ್ ಮಾಡಬೇಕು. ಅವರನ್ನು ತುಳಿಯಬೇಕು ಎಂಬ ಭಾವನೆ ನಿಮಗೆ ಇದೆಯೋ ಎಂದು ನಾನು ಕೇಳುತ್ತೇನೆ. ಒಂದು ಕೆಲಸ ಕೂಡಾ ಇಲ್ಲ. ಬೇರೆ ಕಡೆಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಾ ನಮ್ಮ ಕಡೆಗೆ ೧೦ ಲಕ್ಷ ರೂಪಾಯಿ ಪ್ರಾವಿಜನ್ ಮಾಡಿದ್ದೀರಿ ಎಂದರೆ ನನಗನ್ನಿಸುತ್ತದೆ. ಇದಕ್ಕಿಂತ ನಾಚಿಕೆಗೇಡು ಬೇರೆ ಇಲ್ಲ. ನಾವು ಅಸೆಂಬ್ಲಿಯಲ್ಲಿ ಮಾತನಾಡುವುದಕ್ಕಿಂತ ರಾಜೀನಾಮೆ ಕೊಟ್ಟು ಮನೆಯಲ್ಲಿ ಕೂಡುವುದು ಉತ್ತಮ ಎಂದು ನನಗನ್ನಿಸುತ್ತದೆ.

ಇವತ್ತು ಅಲ್ಲಿನ ಜನ ಚಳುವಳಿ ಮಾಡುತ್ತಿದ್ದಾರೆ. ಅನೇಕ ಸಲ ನಿಮ್ಮಲ್ಲಿಗೆ ಬಂದು ಹೇಳಿದ್ದಾರೆ. ಆದರೂ ಇವತ್ತು ಅವರ ನ್ಯಾಯವಾದ ಬೇಡಿಕೆಗಳನ್ನು ಸರಿ ಮಾಡಿ ಕೊಡುವುದಕ್ಕೆ ನೀವು ತಯಾರು ಇಲ್ಲ. ಇವತ್ತು ಅವರು ಏನು ಮಾಡಬೇಕು ? ನಾನು ಕೇಳುತ್ತಿದ್ದೇನೆ ತಾವೇಕೆ ಈ ರೀತಿ ನಿರ್ಲಕ್ಷ್ಯ ಮಾಡುತ್ತಿದ್ದೀರಿ ? ಇದು ಒಂದೇ ಅಲ್ಲ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಹೆಚ್ಚಿನ ಹಣ ಪ್ರಾವಿಜನ್ ಮಾಡಿ, ಖರ್ಚು ಮಾಡಿದುದ್ದು ಎಷ್ಟು? ಅದರಲ್ಲೂ ಕೂಡ ನಾನು ಪ್ರಾಜೆಕ್ಟ್ ವೈಜ್ ಹೇಳುತ್ತೇನೆ.

ಅಪ್ಪರ್ ಕೃಷ್ಣಾಗೆ ಪ್ರಾವಿಜನ್ ಮಾಡಿರತಕ್ಕಂಥದ್ದು ೮೫ ಕೋಟಿ ರೂಪಾಯಿಗಳು, ಇದರಲ್ಲಿ ಖರ್ಚು ಮಾಡಿರತಕ್ಕದ್ದು ಅಘ್ಟು ನವೆಂಬರ್. ೫೪ ಕೋಟಿ ರೂಪಾಯಿಗಳು ಮಾತ್ರ. ಇದಕ್ಕೆ ನಾವು ಯಾರನ್ನು ಜವಾಬ್ದಾರರನ್ನಾಗಿ ಮಾಡುವುದು ? ಸುಮಾರು ೮೫ ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿ ೫೪ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿದ್ದೀರಿ. ಇದು ನಾಚಿಕೆಗೇಡಿನ ವಿಷಯು ವಲ್ಲವೇ ? ಮೊದಲು ಪ್ರಾವಿಜನ್ ಮಾಡುವುದು ಪ್ರಾವಿಜನ್ ಮಾಡಿದ ಹಣವನ್ನು ಖರ್ಚು ಮಾಡು ವುದಿಲ್ಲ, ಪ್ರಾವಿಜನ್ ಇರದಿದ್ದರೆ ನಿಮಗೆ ಬೇಕಾದ ಕಡೆ ಹಣ ಹೆಚ್ಚು ಹೆಚ್ಚು ಖರ್ಚು ಮಾಡಿ ಇಲ್ಲಿ ಪೂರಕ ಬೇಡಿಕೆಗಳು ನಮ್ಮ ಮುಂದೆ ತರುವುದು. ಇಲ್ಲಿ ನೀವು ಬಡ್ಜೆಟ್ ವರ್ಕ್ಸ್ ತೆಗೆದುಕೊಳ್ಳಿ, ನಾನ್ ಪ್ಲಾನ್‌ನಲ್ಲಿ ಬರತಕ್ಕಂಥ ಹೇಮಾವತಿ, ಪಾರಂಗಿ ಅವು ಬಿಡಿ, ಬಡ್ಜೆಟ್ ವರ್ಕ್ಸ್ ತೆಗೆದುಕೊಳ್ಳ ದಿದ್ದರೆ ನಾವು ಯಾರನ್ನು ಜವಾಬ್ದಾರಿಯನ್ನಾಗಿ ಮಾಡಬೇಕು ? ಮಾನ್ಯ ದೇವೇಗೌಡರನ್ನು ಮಾಡ ಬೇಕೋ ಅಥವಾ ತಮ್ಮನ್ನೇ ಜವಾಬ್ದಾರರನ್ನಾಗಿ ಮಾಡಬೇಕೋ ಹೇಳಿ. ಆಮೇಲೆ ಘಟಪ್ರಭಾ ಯೋಜನೆಗೆ ಸುಮಾರು ೨೦ ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿ ೬ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿದ್ದೀರಿ. ಅದೇ ರೀತಿ ಮಲಪ್ರಭಾ ಯೋಜನೆಯನ್ನು ತೆಗೆದು ಕೊಳ್ಳಿ, ೨೩ ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿ ೬ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ, ಬೆಣ್ಣೆ ತೊರೆ ಯೋಜನೆಯಡಿಯಲ್ಲಿ ಕಂಡಿಯುಂವ ನೀರಿಗೆ ಅನುಕೂಲವಾಗತಕ್ಕಂಥ ಯೋಜನೆ ಇಲ್ಲಿ ೫ ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಿ ಒಂದು ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ ಆಮೇಲೆ ಅಮರ್ಜಾ ಯೋಜನೆಗೆ ೩ ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿ, ಕೇವಲ ೩೬ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ ? ಅಪ್ಪರ್ ಮುಲ್ಲಾಮಾರಿ ಯೋಜನೆಗೆ ಎರಡೂವರೆ ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿ ೮೬ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ, ಅದೇ ರೀತಿ ಲೋಯರ್ ಮುಲ್ಲಾ-ಮಾರಿ ಯೋಜನೆಗೆ ಒಂದೂವರೆ ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿ ೧೭ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಅದೇ ರೀತಿ ಸೌದಾಗರ ಪ್ರಾಜೆ-ಕ್ಟ್‌ಗೆ ೨೭ ಲಕ್ಷ ರೂಪಾಯಿಗಳ ಪ್ರಾವಿಜನ್ ಮಾಡಿ ೧೩ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ, ಮಸ್ಕಿನಾಲಾ ಯೋಜನೆ, ರಾಯಚೂರ್ ಈ ಯೋಜನೆಗೆ ಸುಮಾರು ಒಂದು ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿ ೩ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ, ಇನ್ನು ಅನೇಕವು ಇವೆ ಇಷ್ಟೊಂದು ಅನ್ಯಾಯವನ್ನು ಮಾಡುತ್ತಿದ್ದರೆ ಹೇಗೆ ? ಏಕೆ ಈ ಡಿಸ್‌ಕ್ರಿಮಿನೇಶನ್ ನಿಮ್ಮ ಮುಂದೆ ನಾನು ಇದನ್ನು ಉದಾಹರಣೆಯಾಗಿ ಹೇಳಿದೆ ಈ ಅಂಕಿಅಂಶಗಳನ್ನು ಕಳೆದ ಅಸೆಂಬ್ಲಿ ಯಲ್ಲಿ ಪ್ರಶ್ನೆ ಕೇಳಿದಾಗ ಕೊಟ್ಟ ಉತ್ತರ. ಇದೇ ರೀತಿ ಮುಂದುವರೆದರೆ ಆ ಭಾಗ್ಯದ ಜನ ನಮ್ಮನ್ನು ನಿಮ್ಮಿಂದ ಮುಕ್ತ ಮಾಡಿ ನಮ್ಮದು ನಮಗೆ ಕೊಟ್ಟು ಬಿಡಿ ಎಂದು ಹೇಳುವ ಕಾಲ ಬಂದರೂ ಬರ ಬಹುದು. ಅದಕ್ಕೆ ಅವಕಾಶ ಕೊಡಬೇಡಿ. ಮಾನ್ಯ ಮಂತ್ರಿಗಳು ಪ್ರಶ್ನೆಗೆ ಉತ್ತರ ಕೊಟ್ಟಿರುವುದು ನವೆಂಬರ್ ೮೭, ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರಿಗೆ ಕೊಟ್ಟಿರತಕ್ಕ ಉತ್ತರ. ಇರಿಗೇಶನ್ ಪ್ರಾಜೆಕ್ಟ್ಸ್ ಬಗ್ಗೆ.

ಈ ಉತ್ತರಗಳನ್ನೆಲ್ಲಾ ಲೇಟೆಸ್ಟ್ ಆಗಿಯೇ ಕೊಟ್ಟಿದ್ದಾರೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಅಭಿವೃದ್ಧಿ ಕೆಲಸಗಳನ್ನು ಮಾಡುವ ಕಡೆ ನೀವು ಗಮನ ಹರಿಸುತ್ತಿಲ್ಲ. You are not giving your kind attention to these problems. ಈ ಏರಿಯಾದಲ್ಲಿ ಸಫರಿಂಗ್ಸ್ ಇದೆ ನಮ್ಮ ಕಡೆ ಎಲ್ಲಾ ಕಾಂಗ್ರೆಸ್‌ನವರು ಹೆಚ್ಚಿಗೆ ಆರಿಸಿ ಬಂದಿದ್ದಾರೆ ಎಂದು ಆ ಕಡೆ ಕೆಲಸ ಮಾಡಬಾರದೆಂದು ಎಂದುಕೊಂಡಿದ್ದೀರಾ ? ರೋಡ್ಸ್ ಕೆಲಸ ಮಾಡುತ್ತಿಲ್ಲ, ಬ್ರಿಜ್ಜ್ ಕೆಲಸ ಮಾಡುವುದಕ್ಕೆ ತಯಾರಿಲ್ಲ. ನೀವು ಕೊಟ್ಟಿರುವ ಆನ್ಸರ್‌ನಲ್ಲೇ ಎಲ್ಲಾ ವಿಷಯಗಳು ಇವೆ ತಮಗೆ ಇದನ್ನು ಕಳುಹಿಸಿಕೊಡುತ್ತೇನೆ ತಾವು ನೋಡಿ ಸರ್ಕಾರ ಆನ್ಸರ್ ಕೊಟ್ಟಿದ್ದ ಪುಟಗಳನ್ನು ಮಾನ್ಯ ಮುಖ್ಯ ಮಂತ್ರಿಯವರಿಗೆ ಕಳುಹಿಸಿ ಕೊಡುತ್ತೇನೆ

ಶ್ರೀ ರಾಮಕೃಷ್ಣ ಹೆಗಡೆ.—ಗುಲ್ಬರ್ಗಾ ಜಿಲ್ಲೆಯಲ್ಲಿ ಕಾಂಗ್ರೆಸ್‌ನವರು ಹೆಚ್ಚು ಆರಿಸಿ ಬಂದಿರ ಬಹುದು. ಅದಕ್ಕಾಗಿ ಕೆಲಸ ಮಾಡಬಾರದೆನ್ನುವ ಉದ್ದೇಶ ನಮಗೆ ಇಲ್ಲ. ರಾಯಚೂರು, ಬಳ್ಳಾರಿ ಜಿಲ್ಲೆಗಳು ಗುಲ್ಬರ್ಗಾ ಡಿವಿಷನ್‌ಗೆ ಸೇರಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಕಡೆ ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಾ ಎಂಬುದನ್ನು ನೀವೇ ನೋಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ —ನಾನು ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರವಾಸ ಮಾಡುವುದಕ್ಕೆ ಅವಕಾಶ ಸಿಕ್ಕಿತ್ತು. ನಿಮ್ಮ ಕಡೆಯೇ ಎಷ್ಟೋ ಉತ್ತಮವಾಗಿದೆ. ನಮ್ಮ ಕಡೆ ಟಾರ್ ಹಾಕಿರುವ ರಸ್ತೆಗಳೆಲ್ಲಾ ಮಣ್ಣು ರಸ್ತೆಗಳಾಗುತ್ತಿವೆ. ಇದ್ದುದರಲ್ಲಿ ನೀವೇ ಉತ್ತಮ ಸ್ಥಿತಿಯಲ್ಲಿ ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನ್ಯಾಯವಾಗಿ ಏನು ಕೆಲಸ ಮಾಡಬೇಕೋ ಅದನ್ನು ಮಾಡಿ. ಇದ್ದಂಥ ಹಣವನ್ನೇ ಖರ್ಚು ಮಾಡುತ್ತಿಲ್ಲ ಎಂದರೆ ಹೇಗೆ ? ೮೫ ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿ ೨೪ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗಿದೆ ಎಂದರೆ, ಏತಕ್ಕೆ ಹಣ ಇಡಬೇಕು ? ಹಣವನ್ನು ಇಟ್ಟರೆ ಖರ್ಚು ಮಾಡುವುದಿಲ್ಲ. ಇರಿಗೇಷನ್‌ಗೆ ತಾವು ಹಣವನ್ನು ಇಟ್ಟಿದ್ದೀರಿ ಆದರೆ ಖರ್ಚು ಮಾಡುತ್ತಿಲ್ಲ. ಬೇರೆ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡಿಸಿ ಎಂದರೆ ಹಣ ಇಲ್ಲ ಎಂದು ಹೇಳುತ್ತೀರಿ ನಿಮಗೆ ಯಾವ ಯಾವ ಕೆಲಸಗಳು ಬೇಕಾಗುತ್ತವೆಯೋ ಆ ಕೆಲಸಗಳಿಗೆ ಮಾತ್ರ ಹಣವನ್ನು ಇಟ್ಟು ಫೈನಾನ್ಸ್ ಡಿಪಾರ್ಟ್‌ಮೆಂಟಿನ ಅಪ್ರೂವ್ ತೆಗೆದುಕೊಂಡು ಕೆಲಸಗಳನ್ನು ಮಾಡಿಸಿಕೊಂಡುಬಿಡುತ್ತೀರಿ ನೀವು ದೇಶವನ್ನು ಕಟ್ಟುತ್ತೀರಾ ? ಎಲ್ಲಾ ಜನಗಳನ್ನು ಜೊತೆಗೆ ಹಾಕಿಕೊಳ್ಳುತ್ತೀರಾ ? ನೀವು ಕೆಲಸಗಳನ್ನು ಮಾಡಿಸುವ ಬಗ್ಗೆ ಡಿಕ್ರಿಮಿನೇಷನ್ ಮಾಡುತ್ತಿದ್ದೀರೆಂದು ನಾವು ಪದೇ ಪದೇ ಹೇಳಬೇಕಾಗುತ್ತದೆ. ಈ ಮಾತನ್ನು ನನ್ನ ಬಾಯಿಂದ ಹೇಳುತ್ತಿಲ್ಲ. ನೀವು ಕೊಟ್ಟ ಉತ್ತರದಲ್ಲಿರುವ ಅಂಕಿ ಅಂಶಗಳನ್ನು ಆಧಾರವಾಗಿ ಇಟ್ಟುಕೊಂಡು ಹೇಳುತ್ತಿದ್ದೇನೆ. ನಾನು ಇದನ್ನು ಎಕ್ಸಾಜಿರೇಷನ್ ಮಾಡಿ ಹೇಳುತ್ತಿಲ್ಲ. ಇದೇ ರೀತಿ ನೀವು ಮಾಡುತ್ತಿದ್ದರೆ, ಖಂಡಿತವಾಗಿಯೂ ಜನ ಸಹಿಸುವುದಿಲ್ಲ ಅದಕ್ಕೂ ಟೈಮ್ ಬರುತ್ತದೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

MR. SPEAKER.—You have taken one hour...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂಬಂಧಪಟ್ಟಿರುವಂಥ ವಿಷಯಗಳನ್ನೇ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—ಮಾತನಾಡಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕಡೆ ಪ್ರಾವಿಷನ್ ಮಾಡುತ್ತೀರಿ, ಇನ್ನೊಂದುಕಡೆ ಹಣ ಇಲ್ಲವೆಂದು ಕೆಲಸ ಮಾಡುವುದಿಲ್ಲ. ಹಣ ಇಲ್ಲದೇ ಇದ್ದಮೇಲೆ ಪ್ರಾವಿಷನ್ ಏಕೆ ಮಾಡುತ್ತೀರಿ? ನಮಗೆ ತೋರಿಸುವುದಕ್ಕೆ ಪ್ರಾವಿಷನ್ ಮಾಡುತ್ತೀರಾ ? ಜನರಿಗೆ ತೋರಿಸುವುದಕ್ಕೆ ಪ್ರಾವಿಷನ್ ಮಾಡುತ್ತೀರಾ ? ಅಥವಾ ಪಬ್ಲಿಸಿಟಿಗೋಸ್ಕರ ಮಾಡುತ್ತೀರಾ ? ಇನ್ನೂ ಒಂದು ಏನು ಹೇಳುತ್ತಾರೆ ಎಂದರೆ, ಇದನ್ನು ದೇವೇಗೌಡರು ಹೇಳಿದ್ದಾರೆ, Funds Crisis hits project He said as against programme to spend total rupees 194.17 crores on all major, medium and minor irrigation projects, till the end of November actual expenditure of barely 98.21 crores was incurred ಇದನ್ನು ಅವರೇ ಹೇಳಿದ್ದಾರೆ. ಅಲ್ಲಿಗೆ ಏನಾಯಿತು ? ೧೯೪ ಕೋಟಿ ರೂಪಾಯಿಗಳ ಪ್ರೋಗ್ರಾಮ್ ಇದ್ದರೆ ೯೮ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುವುದಕ್ಕೆ ಸಾಧ್ಯವಾಗಿದೆ ಎನ್ನತಕ್ಕ ಮಾತನ್ನು ಮಾನ್ಯ ದೇವೇಗೌಡರೇ ಇದೇ ವರ್ಷದ ಜನವರಿ ೨೭ನೇ ತಾರೀಖು ಹೇಳಿದ್ದಾರೆ. ಇನ್ನೂ ನಿಮಗೆ ಯಾವ ಫಿಗರ್ಸ್ ಬೇಕು ? ಇದರ ಅರ್ಥ ಏನು ಎಂದರೆ ನೀವು ೫೦ ಪರ ಸೆಂಟಿನಷ್ಟು ಅಚೀವ್‌ಮೆಂಟ್ ಮಾಡುವುದಕ್ಕಾಗಲಿಲ್ಲ ನೀವು ಇರಿಗೇಷನ್‌ನಲ್ಲಿ ಅಚೀವ್‌ಮೆಂಟ್ ಮಾಡಿದ್ದೇವೆಂದು ಹೇಳುತ್ತೀರಾ ? ಫಿಸಿಕಲ್ ಅಚೀವ್‌ಮೆಂಟ್ ಕೂಡ ನೀವು ಮಾಡಿಲ್ಲ,

೨-೦೦ ಪಿ. ಎಂ.

ತಾವುಗಳು ಈ ಪುಸ್ತಕದಲ್ಲಿನ ಇರಿಗೇಷನ್ ಅಚೀವ್‌ಮೆಂಟ್ ನೋಡಿದ್ದೀರೋ ಇಲ್ಲವೋ ? ಏಕೆಂದರೆ ಇರಿಗೇಶನ್ ಮತ್ತು ಪವರ್ ಇವೆರಡೂ ದೇಶದ ಬೆನ್ನೆಲುಬು ಎಂದು ಹೇಳಬಹುದು, ಬಜೆಟ್‌ನಲ್ಲಿ ಇದು ಬಹಳ ಪ್ರಾಮುಖ್ಯತೆಯನ್ನು ಹೊಂದಿರಬೇಕಾಗುತ್ತದೆ. ಇಂಥಾದ್ದರಲ್ಲಿ ನಿಮ್ಮ ಅಚೀವ್‌ಮೆಂಟ್ ಏನಾಗಿದೆ ? ಇದರಲ್ಲಿ ಇಟ್ಟಂಥ ಟಾರ್ಗೆಟ್‌ಗಿಂತಲೂ ಬಹಳ ಕಡಿಮೆಯಾಗಿವೆ ಎಂದು ನೀವೇ ಒಪ್ಪಿಕೊಂಡಿದ್ದೀರಿ. ಅದರ ಬಗ್ಗೆ ಹೆಚ್ಚಿನ ವಿವರಗಳಿಗೆ ನಾನು ಆ ಮೇಲೆ ಬರುತ್ತೇನೆ.

ನೀವು ಈ ಪುಸ್ತಕದಲ್ಲಿ ಕೊಟ್ಟಿರುವ ಅಂಕಿಅಂಶಗಳ ಬಗ್ಗೆ ನಿಮಗೆ ಕಾಂಪ್ಲಿಮೆಂಟ್ಸ್ ಕೊಡಬೇಕು. ಅದರಲ್ಲಿ ತಾವುಗಳು, ೧೯೭೮ ರಿಂದ ೧೯೮೩ರ ವರೆಗೆ ಒಂದು ಬ್ಲಾಕ್ ಮಾಡಿ ಹಾಗೆಯೇ ೧೯೮೩ ರಿಂದ೧೯೮೮ ರವರೆಗೆ ಇನ್ನೊಂದು ಬ್ಲಾಕ್ ಮಾಡಿ ಅಂಕಿಅಂಶಗಳನ್ನು ಅದರಲ್ಲಿ ಕೊಟ್ಟಿದ್ದೀರಿ. ಇದರಲ್ಲಿ ಇನ್‌ವೆಸ್ಟ್‌ಮೆಂಟ್ ಮತ್ತು ಪೊಟೆನ್ಸಿಯಲ್ ಕ್ರಿಯೇಟ್‌ಡ್ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಈ ಎರಡು ಬ್ಲಾಕ್‌ನ ಅವಧಿಯ ಅಂಕಿಅಂಶಗಳನ್ನು ನಾವು ಹೋಲಿಸಿ ನೋಡಬೇಕಾಗುತ್ತದೆ. ಈ ಎರಡು ಬ್ಲಾಕ್‌ಗಳಿಗೆ ಒಂದು ಬಿಳಿ ಬಣ್ಣದಲ್ಲಿ ಮತ್ತೊಂದು ನೀಲಿ ಬಣ್ಣದಲ್ಲಿ ಕೊಟ್ಟಿದ್ದೀರಿ.

ಮೀಡಿಯಮ್ ಮತ್ತು ಮೇಜರ್ ಇರಿಗೇಶನ್‌ನಲ್ಲಿ ಐದು ವರ್ಷಗಳ ಎಂದರೆ ೧೯೭೮ರಿಂದ ೧೯೮೩ರವರೆಗೆ ಇದ್ದುದನ್ನು ಕೊಟ್ಟಿದ್ದಾರೆ. ಅದರಲ್ಲಿ ೧೯೭೮-೭೯ರಲ್ಲಿ ಇನ್‌ವೆಸ್ಟ್‌ಮೆಂಟ್ ೮೯.೧೯ ಕೋಟಿ ಇದ್ದರೆ, ಪೊಟೆನ್ಸಿಯಲ್ ಕ್ರಿಯೇಟೆಡ್ ೭.೨೩ ಲಕ್ಷ ಹೆಕ್ಟೇರ್‌ಗಳು. ೧೯೭೯-೮೦ರಲ್ಲಿ ೧೦೧.೫೩ಕೋಟಿ ಇನ್‌ವೆಸ್ಟ್‌ಮೆಂಟ್ ಇದ್ದರೆ, ೯.೭೫ಲಕ್ಷ ಹೆಕ್ಟೇರ್‌ಗೆ ಪೊಟೆನ್ಸಿಯಲ್ ಕ್ರಿಯೇಟೆಡ್ ಇದೆ. ಅದೇ ರೀತಿಯಲ್ಲಿ ೧೯೮೧-೮೨ರಲ್ಲಿ ೧೦೫.೩೫ಕೋಟಿ ಇನ್‌ವೆಸ್ಟ್‌ಮೆಂಟ್ ಇದ್ದುದು. ೧೦.೨೪ ಲಕ್ಷ ಹೆಕ್ಟೇರ್ಸ್ ಪೊಟೆನ್‌ಶಿಯಲ್ ಕ್ರಿಯೇಟೆಡ್ ಆಗಿದೆ. ಅದೇ ರೀತಿಯಲ್ಲಿ ೧೯೮೨-೮೩ರಲ್ಲಿ ೧೧೩.೯೫ಕೋಟಿ ಇನ್‌ವೆಸ್ಟ್‌ಮೆಂಟ್ ಇದ್ದು, ೯.೭೭ ಲಕ್ಷ ಹೆಕ್ಟೇರ್‌ಗಳ ಪೊಟೆನ್‌ಶಿಯಲ್ ಕ್ರಿಯೇಟೆಡ್ ಆಗಿದ್ದುದನ್ನು ಕೊಟ್ಟಿದ್ದಾರೆ. ಮೈನರ್ ಇರಿಗೇಷನ್ ೧೯೮೦-೮೧ರಲ್ಲಿ ಮತ್ತು ೧೯೮೧-೮೨ರಲ್ಲಿ ೧೯೮೨-೮೩ರಲ್ಲಿ ಇದೇ ರೀತಿಯಲ್ಲಿ ಇದೆ ಅದನ್ನು ಈ ಪುಸ್ತಕದಲ್ಲಿ ಕೊಟ್ಟಿದ್ದಾರೆ. ೧೯೮೦-೮೧ನೇ ಇಸವಿಯಲ್ಲಿ ೧೨.೪೦ಲಕ್ಷ ಹೆಕ್ಟೇರ್ ಪೊಟೆನ್‌ಶಿಯಲ್ ಕ್ರಿಯೇಟೆಡ್ ಇದ್ದರೆ, ೧೯೮೧-೮೨ನೇ ಇಸವಿಯಲ್ಲಿ ೧೦.೨೪ಲಕ್ಷ ಹೆಕ್ಟೇರ್‌ಗಳು, ೧೯೮೨-೮೩ರಲ್ಲಿ ೧೨.೭೮ಲಕ್ಷ ಹೆಕ್ಟೇರ್‌ಗಳು ಇವೆ.

ಇವರು ಆಡಳಿತಕ್ಕೆ ಬಂದಮೇಲೆ, ೧೯೮೩-೮೪ರಲ್ಲಿ ಜನತಾ ಸರ್ಕಾರ ನಮ್ಮ ರೈತರ ಬೆಂಬಲ ಪಡೆದು ರೈತರಿಗಾಗಿ ಸಹಾಯ ಮಾಡಲಿಕ್ಕೆ ಬಂದಂಥ ಸರ್ಕಾರ ಇರಿಗೇಷನ್ ಪೊಟೆನ್‌ಶಿಯಲ್ ಎಷ್ಟು ಮಾಡಿದೆ ಎಂದು ಹೇಳುತ್ತೇನೆ. ೧೯೮೪-೮೫ರಲ್ಲಿ ಮೇಜರ್ ಮತ್ತು ಮೀಡಿಯಮ್ ಇರಿಗೇಷನ್‌ನಲ್ಲಿ, ೧೧.೯೧ ಲಕ್ಷ ಹೆಕ್ಟೇರ್ಸ್: ೧೯೮೫-೮೬ರಲ್ಲಿ ೧೨.೩೩ ಲಕ್ಷ ಹೆಕ್ಟೇರ್ಸ್, ೧೯೮೬-೮೭ರಲ್ಲಿ ೧೨.೮೫ಲಕ್ಷ ಹೆಕ್ಟೇರ್ಸ್. ೧೯೮೭-೮೮ರಲ್ಲಿ ೧೩.೩೯ ಲಕ್ಷ ಹೆಕ್ಟೇರ್ಸ್ ಮಾಡಿದ್ದಾರೆ. ಮೈನರ್ ಇರಿಗೇಷನ್‌ನಲ್ಲಿ ೧೯೮೩-೮೪ರಲ್ಲಿ ೧೨.೯೩ಲಕ್ಷ ಹೆಕ್ಟೇರ್, ೧೯೮೪-೮೫ರಲ್ಲಿ ೧೩.೨೩ ಲಕ್ಷ ಹೆಕ್ಟೇರ್, ೧೯೮೫ ೮೬ರಲ್ಲಿ ೧೩.೨೩ ಲಕ್ಷ ಹೆಕ್ಟೇರ್ ೧೯೮೬-೮೭ರಲ್ಲಿ ೧೩.೯೮ಲಕ್ಷ ಹೆಕ್ಟೇರ್ ೧೯೮೭-೮೮ರಲ್ಲಿ ೧೩.೮೩ ಲಕ್ಷ ಹೆಕ್ಟೇರ್‌ಗಳು ಒಟ್ಟು ಪರ್ಸಂಟೇಜ್ ೧೨.೯೮, ಕಾಂಗ್ರೆಸ್‌ನವರು ಇದ್ದಾಗ ೫.೬೧ ಇತ್ತು, ಈಗ ಇವರು ಬಂದ ಮೇಲೆ ಮಾಡಿದ್ದು ೨.೯೮. Whereas in the Congress rule the percentage was 5.61. These are the actuals. ಅಂದರೆ ಎಷ್ಟರಮಟ್ಟಿಗೆ ಇರಿಗೇಷನ್‌ನಲ್ಲಿ ಇದರ ಸಾಧನೆಯಾಗಿದೆ ಎಷ್ಟು ಹಿಂದಕ್ಕೆ ಹೋಗಿದ್ದಾರೆಂದು ಗೊತ್ತಾಗುತ್ತದೆ. ಈ ಕಡೆ ಇದ್ದಾಗ ನೂರು ಸಲ ಕೇಳುತ್ತಿದ್ದರು ಎಂತಹ ಭಾಷಣ ಮಾಡುತ್ತಿದ್ದರು ? ನಾವು ಅಂದುಕೊಂಡೆವು ಕಾಂಗ್ರೆಸ್‌ನವರು ಮಾಡಿದ ಕೆಲಸಕ್ಕಿಂತ ಹತ್ತು ಪಟ್ಟು ಕೆಲಸವನ್ನು ಮಾನ್ಯ ಹೆಗಡೆಯವರು ಮಾಡುತ್ತಾರೆಂದು, ನಮಗೆ ಆ ಅತಿ ಆಸೆ ಇತ್ತು. ಆದರೆ ಈಗ, ಈ ಫಿಗರ್ಸ್ ಅನ್ನು ನೋಡಿದರೆ ಸರಿಯಾದ ಮಾಹಿತಿ ಸಿಗುತ್ತದೆ. ೫ ಈ ವೆಂಟ್ ಫುಲ್ ಇಯರ್ಸ್ ಜನತಾ ಎಕ್ಸ್‌ಪಿರಿಮೆಂಟ್ ಎಂದು ಏನು ಪುಸ್ತಕವನ್ನು ತಾವು ಪ್ರಿಂಟ್ ಮಾಡಿಸಿದ್ದೀರಿ ಅದರಲ್ಲಿಯೇ ಈ ಫಿಗರ್ಸ್ ಇದೆ. These are the physical acehivements. They have completely failed; ಯಾವ ರಂಗದಲ್ಲೂ ಕೂಡ ಇವತ್ತಿನ ದಿವಸ ಇವರು ಮುಂದೆ ಬರುವುದಕ್ಕೆ ಆಗಿಲ್ಲ. ಹೌಸಿಂಗ್ ಪ್ರೋಗ್ರಾಂ, ಹರಿಜನ ಗಿರಿಜನರ ಕಲ್ಯಾಣ ಕಾರ್ಯಕ್ರಮವನ್ನೇ ತೆಗೆದುಕೊಳ್ಳಿ ಇವತ್ತಿನ ದಿವಸ ಇಂತಹ ಕೆಲಸವನ್ನು ಮಾಡಿದ್ದೇವೆಂದು ಹೇಳತಕ್ಕಂತಹ ಕೆಲಸವನ್ನು ಮಾಡಿಲ್ಲ. ಒಂದನ್ನು ಮಾಡಿದ್ದಾರೇ ಜಿಲ್ಲಾ ಪರಿಷತ್ ಮಾಡಿದ ಮೇಲೆ ಹಳ್ಳಿ ಹಳ್ಳಿಗೆ ಜಗಳ ಹಚ್ಚತಕ್ಕಂತಹ ಕೆಲಸ ಮಾಡಿದ್ದಾರೆ. ಇದರಿಂದಾಗಿ ಎಷ್ಟು ಹಳ್ಳಿಗಳಲ್ಲಿ ದೌರ್ಜನ್ಯ ನಡೆದಿದೆ ಎನ್ನತಕ್ಕಂಥಾದ್ದರ ಬಗ್ಗೆ ಇವರಿಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಅವರು ಹಳ್ಳಿಯಲ್ಲಿ ಇರುವುದಿಲ್ಲ. ಅಟ್ರಾಸಿಟೀಸ್ ಯಾರ ಮೇಲಾಗುತ್ತದೆ. ಅವರಿಗೆ ನೋವಾಗುತ್ತದೆ. ಆ ನೋವನ್ನು ಹೇಗೆ ಮಾಯಿಸಿಕೊಳ್ಳಬೇಕೆಂಬುದು ಅವರಿಗೆಗೊತ್ತಾಗುತ್ತದೆಯೇ ಹೊರತು ಬೇರೆ

ಯಾವರಿಗೆ ಗೊತ್ತಾಗುತ್ತದಿಲ್ಲ. ಇವತ್ತು ಇರಿಗೇಷನ್ ಇಲ್ಲವೇ ಬೇರೆ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಅನ್ನು ತೆಗೆದುಕೊಂಡರೆ ಅದರಲ್ಲಿ ಮತ್ತು ಬೇರೆ ಯಾವ ಕಾರ್ಯಕ್ರಮದಲ್ಲೂ ಕೂಡ ಹೆಚ್ಚಿನ ಪ್ರಗತಿಯನ್ನು ಸಾಧಿಸಿಲ್ಲ. ಮತ್ತು ಮೊಬಿಲೈಸೇಷನ್ ಆಫ್ ರಿಸೋರ್ಸಸ್ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ ಅದರಲ್ಲೂ ಕೂಡ ಇವರು ವಿಫಲರಾಗಿದ್ದಾರೆ, ಕೇಂದ್ರ ಸರಕಾರ ಹಿಂದೆ ಏನು ಹಣ ಕೊಡುತ್ತಿತ್ತು ಈಗಲೂ ಕೂಡ ಅದೇ ಹಣವನ್ನು ಕೊಡುತ್ತಿದೆ. ಸೆಂಟ್ರಲ್ ಅಸಿಸ್ಟೆನ್ಸ್‌ಗೆ ಆಗ ಏನು ಕೊಡುತ್ತಿತ್ತು ಈಗಲೂ ಕೂಡ ಕೊಡುತ್ತಿದೆ. ನಾನು ಇರುವ ಅಂಕಿ ಅಂಶವನ್ನು ಕೊಟ್ಟಿದ್ದೇನೆ. ಕಾಂಗ್ರೆಸ್ ಸರಕಾರವಿದ್ದಾಗ ಯಾವ ರೀತಿ ಕೊಡುತ್ತಿದ್ದರು ಈಗ ಯಾವ ರೀತಿ ಕೊಡುತ್ತಿದ್ದಾರೆ ಎಂದು ಅದರ ಅಡಿಯಲ್ಲಿ ಹೇಳುವುದು ಮತ್ತು ಅದನ್ನು ಕೇಳಿಕೊಂಡು ಮುಂದುವರಿಸಿಕೊಂಡು ಹೋಗುವುದು ಬೇಡ. ನಮ್ಮ ತಪ್ಪು ಎಲ್ಲಿ ಇದೆ ಅದನ್ನು ಸರಿ ಪಡಿಸಬೇಕೇ ಹೊರತಾಗಿ ಕೇಂದ್ರ ಸರಕಾರ ಸಹಾಯ ಮಾಡುತ್ತಿಲ್ಲ ಎಂದು ಅವರನ್ನು ದೂರುವುದು ಬೇಡ, ಇದಕ್ಕಾಗಿಯೇ ನಾನು ಈ ಫ್ಯಾಕ್ಟ್ಸ್ ಅನ್ನು ಕೊಟ್ಟಿದ್ದೇನೆ. ಇನ್ನೂ ಇದೆ ಆದರೆ ಅದನ್ನೆಲ್ಲಾ ಹೇಳಲು ನನಗೆ ಸಮಯವಿಲ್ಲ. ಅಧಿಕಾರಿಗಳ ಮೇಲೆ ಎಷ್ಟು ಹಿಡಿತವಿದೆ ಎಂದು ನಾನು ಆಗಲೇ ಹೇಳಿದೆ, ನೀವು ಇರಲಿಲ್ಲ. ತಾವೂ ಕೂಡ ಒಂದು ಅಂಕಿ ಅಂಶವನ್ನು ಹಿಂದೆ ಕೊಟ್ಟಿದ್ದೀರಿ. ಡಿಸೆಂಬರ್ ಕೊನೆಯೊಳಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎನ್ನತಕ್ಕಂಥಾದ್ದನ್ನು ತಾವು ಕೊಟ್ಟಿದ್ದೀರಿ. ನಾನು ಒಂದು ಉದಾಹರಣೆ ಕೊಡುತ್ತೇನೆ ವರಮಾನದ ಮೇಲಿನ ತೆರಿಗೆ ೮೦೦ ಅಂದಾಜು ಇದ್ದರೆ ೮೮೬ ವಸೂಲು ಮಾಡಿದ್ದಾರೆ. ಇದು ರೈತರದ್ದು. ಭೂ ಕಂದಾಯ ೯ ಕೋಟಿ ಇದ್ದರೆ ೧೫ ಕೋಟಿ ವಸೂಲು ಮಾಡಿದ್ದಾರೆ. ಅಬಕಾರಿ ಯಲ್ಲಿ ೨೬ ಸಾವಿರ ಲಕ್ಷ ಇದ್ದರೆ ಕಲೆಕ್ಟ್ ಮಾಡಿದ್ದುದು ಇಲ್ಲಿಯವರೆಗೆ ಎಷ್ಟು ಎಂದರೆ ೧೭.೯೮೦ ಲಕ್ಷ ಏನು ಸ್ವಾಮಿ ಇವರೇನು ಬಡವರೇ ? ರೈತರಿಂದ ಟಾರ್ಗೆಟ್‌ಗಿಂತಲೂ ಜಾಸ್ತಿ ವಸೂಲಿ ಮಾಡಿದ್ದೀರಿ. ಆಮೇಲೆ ಅಗ್ರಿಕಲ್ಚರಲ್ ಟ್ಯಾಕ್ಸ್ ಟಾರ್ಗೆಟ್‌ಗಿಂತಲೂ ಹೆಚ್ಚು ಮಾಡಿದ್ದೀರಿ. ಇದನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲವೇ ? ಇವರೇನು ಬಡವರೇ ? ಇವರೇನು ಬಿಲೊ ಪಾವರ್ಟಿ ಲೈನ್‌ನಲ್ಲಿದ್ದಾರೇನು ? ಎಕ್ಸೈಸ್ ಕಂಟ್ರಾಕ್ಟರ್‌ಗೆ ಸ್ಪೆಷಲ್ ಆಗಿ ಅವರಿಗೆ ಅವರ ಮೇಲೆ ಪ್ರೀತಿ ಇದೆಯೇನೋ ಗೊತ್ತಿಲ್ಲ, ಮಾನ್ಯ ಮುಖ್ಯಮಂತ್ರಿಗಳಿಗಾಗಲೀ, ಎಕ್ಸೈಜ್ ಮಂತ್ರಿಗಳಿಗಾಗಲೀ ಇದೆಯೋ ಏನೋ ಗೊತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು),—ಅಧ್ಯಕ್ಷರೇ, ಈ ಅಂಕಿ ಏನು ನೀವು ಕೊಟ್ಟಿದ್ದಿರಿ. ನೀರಾವರಿ ಮೇಲೆ ಖರ್ಚು ಆದದ್ದು ಲೇಟೆಸ್ಟ್ ಪೂಜಿಷನ್ ಕೌನ್ಸಿಲ್‌ನಲ್ಲಿ ಶ್ರೀಮಾನ್ ಕೆ. ಎನ್. ನಾಗೇಗೌಡರ ಪ್ರಶ್ನೆಗೆ ಉತ್ತರ ಕೊಡುತ್ತಾ expenditure upto January 1988 ಒಟ್ಟು ೧೧೯ ಕೋಟಿ ೧೪ ಲಕ್ಷ ರೂಪಾಯಿ ಆಗಿದೆ. ಇದರಲ್ಲಿ ೪೮ ಕೋಟಿ ರೂಪಾಯಿ ಕೊಡತಕ್ಕಂಥ ಬಿಲ್ಸ್ ಇದೆ. ಅಂದರೆ ೧೬೭ ಕೋಟಿ ರೂಪಾಯಿ ಅಷ್ಟು ಖರ್ಚಾಗಿದೆ, out of Rs. 194 Crores. ಕೌನ್ಸಿಲ್‌ನಲ್ಲಿ ಕೊಟ್ಟಿರತಕ್ಕಂಥ ಉತ್ತರ ಇದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ದೇವೇಗೌಡರೇ ಈ ರೀತಿಯಾಗಿ ಹೇಳಿದ್ದಾರೆ.

" Replying to the question of Mr K. N Nage Gowda (Cong(I)' he said, as against programme to spend total Rs.194.17 Crores on all major, medium and minor irrigation projects, till the end of November, an actual expenditure of barely Rs. 98.21 Crores was incurred, He conceded that the achievement was just about 50% of the target and explained that the acute financial position of the State was the main reason. Sri Deve Gowda agreed that the Govt. had proposed to spend Rs. 200 Crores in Upper Krishna Project and Rs.100 Crores on Cauvery Basin Project this year but again the resources came in the way. "

**This is the statement made by Hon'ble Minister for Publie Works Sri H. D. DeveGowda on 17 th Jan'88**

ಶ್ರೀ ಎಸ್. ಬಂಗಾರಪ್ಪ.—ಮತ್ತೆ ಡಿಫರೆನ್ಸ್ ಹೇಗೆ ಬರುತ್ತದೆ, ಅದು ಜನವರಿಯೋ ಇದು ಜನವರಿಯೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ನಾನು ಹೇಳಿದ್ದುದು ಕೆ. ಹೆಚ್. ಶ್ರೀನಿವಾಸ್ ಅವರಿಗೆ ಕೊಟ್ಟಿರುವ ಅಂಕಿಅಂಶಗಳನ್ನು ಫಿಗರ್ಸ್‌ನಲ್ಲಿ ಏನಾದರೂ ವ್ಯತ್ಯಾಸ ಇರಬೇಕು. ಇದರಲ್ಲಿ ಏನಾದರೂ ಕನ್‌ಫ್ಯೂಷನ್ ಇರಬಹುದೇ ? ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್ ಅವರ ಆ ಪ್ರಶ್ನೆಗೆ ಉತ್ತರ ಕೊಟ್ಟಿದ್ದನ್ನು ನಾನು ಹೇಳುತ್ತಿದ್ದೇನೆ. ವಿಧಾನ ಪರಿಷತ್‌ನಲ್ಲಿ ಒಬ್ಬರು ದೇವೇಗೌಡರು, ಮತ್ತು ಇಲ್ಲಿ ಅವರೇ ಬೇರೆಯಾಗುತ್ತಾರೆಯೋ ಆದರೆ ಗೊತ್ತಾಗುವುದಿಲ್ಲ. ಲಾಸ್ಟ್ ಟೈಮ್‌ನಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ೩೦ ಕೋಟಿ ರೂಪಾಯಿ ವಿತ್‌ಡ್ರಾ ಮಾಡಿಕೊಂಡು ನಿಮಗೆ ಬೇಕಾದವರಿಗೆ ಕೊಟ್ಟಿದ್ದೀರಿ. ಅದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಸುಮ್ಮನೆ ಹೇಳುವುದು ಬೇಡ. ನಿಮಗೆ ಏನು ಹೇಳಿದರೂ ಗೊತ್ತಾಗುವುದಿಲ್ಲ. ನೀವು ಕಿವುಡರು, ಕುರುಡರು ಇದ್ದೀರಿ. ನಿಮಗೆ ಏನು ಹೇಳಿದರೂ ಪ್ರಯೋಜನ ಇಲ್ಲ. ಕಲ್ಲು ಇದ್ದ ಹಾಗೆ ಇದ್ದೀರಿ.

ಅಧ್ಯಕ್ಷರು.—ಮತ್ತೆ ಏತಕ್ಕೆ ಹೇಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ—ತಮ್ಮ ಗಮನಕ್ಕಾದರೂ ತರಬೇಕಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಇವರು ಕಿವುಡರು, ಕುರುಡರು ಅಂದ ಮೇಲೆ ಎರಡು ಗಂಟೆಯಿಂದ ಭಾಷಣವನ್ನು ಏಕೆ ಮಾಡುತ್ತಾ ಇದ್ದಾರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರಿಯಲ್ಲ, ಬಿಟ್ಟುಬಿಡುತ್ತೇನೆ. ನಿಮ್ಮಷ್ಟು ಬಹಳವಾದ ಭಾಷೆ ಇಲ್ಲ, ಆದರೆ ನಾವು ಕೆಲವು ಫ್ಯಾಕ್ಟ್ಸ್‌ಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ. ತಮ್ಮಷ್ಟು ಸರಿಯಾಗಿ ನನಗೆ ಕನ್ನಡ ಮಾತನಾಡಲು ಬರುತ್ತಿಲ್ಲ ಆದರೂ ಮಾತನಾಡುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರ ಕಿವುಡಾದರೂ, ಕುರುಡಾದರೂ ರಾಜ್ಯದ ಜನತೆಗೆ ಇಲ್ಲಿ ಆಗುತ್ತಿರುವ ವಿದ್ಯಮಾನಗಳ ಬಗ್ಗೆ ಗೊತ್ತಾಗಬೇಕು.

ಶ್ರೀ ಎಸ್. ಬಂಗಾರಪ್ಪ.—ಇವರಿಗೆ ದೊಡ್ಡ ಕಲ್ಲಪ್ಪ, ಸಣ್ಣ ಕಲ್ಲಪ್ಪ ಎಂದು ಹೆಸರು ಇಡಿ.

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲರೂ ಬಂಗಾರಪ್ಪ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ತಮ್ಮ ಗಮನಕ್ಕೆ ತರುತ್ತಿರುವುದು ಇಷ್ಟೇ. ಇವೊತ್ತಿನ ದಿವಸ ಬರತಕ್ಕಂಥ, ರಿಸೋರ್ಸಸ್ ಅವೈಲಬಲ್ ಇದ್ದರೂ, ಅರಿಯರ್ಸ್ ಇದ್ದರೂ ಕೂಡಿ ಎಲ್ಲಿ ಕಲೆಕ್ಟ್ ಮಾಡಬೇಕೋ ಅಲ್ಲಿ ಮಾಡುತ್ತಾ ಇಲ್ಲ. ಎಲ್ಲಿ ಮಾಡಬಾರದು ಅಲ್ಲಿ ತೊಂದರೆ ಕೊಡುತ್ತಿದ್ದಾರೆ. ಒಟ್ಟಿನಲ್ಲಿ ಹೇಳಬೇಕಾದರೆ ಸುಮಾರು ೧,೫೮,೫೨೫ ಲಕ್ಷ ಆದಾಯ ತೆರಿಗೆ ಟೋಟಲ್ ಐಟಮ್ ೧ ರಿಂದ ೧೨ ಇದರಲ್ಲಿ ಒಂದು ಲಕ್ಷ ೫೨ ಸಾವಿರ ರೂಪಾಯಿಗಳು. ಇಲ್ಲಿಯವರೆಗೆ ಡಿಸೆಂಬರ್ ಎಂಡ್ ವರೆಗೆ ಕಲೆಕ್ಟ್ ಆಗಿರುವುದು ಎಷ್ಟು ಅಂದರೆ ೪೨೭ ಲಕ್ಷ ರೂಪಾಯಿಗಳು.

ಅಧ್ಯಕ್ಷರು.—ನಿಮ್ಮ ಡಿಪಾರ್ಟ್‌ಮೆಂಟ್‌ನಿಂದ ತರಿಸಿಕೊಟ್ಟಿದ್ದೇವೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ—ಇಷ್ಟು ಕಲೆಕ್ಟ್ ಆಗತಕ್ಕದ್ದು ಇದೆ, ಏಕೆ ಕಲೆಕ್ಟ್ ಆಗಿಲ್ಲ, ಅದಕ್ಕೆ ಏನು ತೊಂದರೆ ಇದೆ. ಇದರಲ್ಲಿ ಮುಖ್ಯವಾಗಿ ಇರತಕ್ಕದ್ದು ಇದು. ತದನಂತರ ಐಟಮ್ ನಂಬರ್ ೧೪, ಇದರಲ್ಲಿ ಸರಿಯಾಗಿ ಪ್ರಿಂಟ್ ಆಗಿಲ್ಲ. ಬಡ್ಡಿಗಳ ಜಮಾ ಇದರಲ್ಲಿ ೨,೨೪,೭೫ ಲಕ್ಷ ರೂಪಾಯಿಗಳು. ಇದರಲ್ಲಿ ೪೬೦ ಲಕ್ಷ ರೂಪಾಯಿಗಳು. ಆ ಮೇಲೆ ಲೋಕೋಪಯೋಗಿ ಕಾಮಗಾರಿಗಳು. ಇದರಲ್ಲಿ ೪೫೦ ಲಕ್ಷ ರೂಪಾಯಿ ಇದ್ದರೆ, ಬಂದಿದ್ದು ಎಷ್ಟು. ೧೫೩ ಲಕ್ಷ ಮಾತ್ರ, ಇತರ ಆಡಳಿತ ಸೇವೆಯಲ್ಲಿ ೫೩೩ ಲಕ ಇದ್ದರೆ ೩೮೩ ಲಕ್ಷ ಮಾತ್ರ ರೆಕವರಿ ಆಗಿದೆ. ಇದು ನಿಮ್ಮ ಕಲೆಕ್ಷನ್ ಪದ್ಧತಿ. ನಂತರ ಅರಣ್ಯ ಮತ್ತು ಪ್ರಾಣಿ ಜೀವನ ಇಲಾಖೆಯಲ್ಲಿ ಕೂಡ ೬೦೧೦ ಲಕ್ಷ ರೂಪಾಯಿಯಲ್ಲಿ ಬಂದಿದ್ದು ಎಷ್ಟು ಅಂದರೆ ೩,೬೧೮. ಇಷ್ಟು ಮಾತ್ರ ರೆಕವರಿ ಆಗಿದೆ. ಉಳಿದಿದ್ದು ಇಲ್ಲ. ಎಕ್ಸ್‌ಪೆಂಡಿಚರ್ ಎಷ್ಟು ಆಗಿದೆ. ಅಷ್ಟು ಆಗಿದೆ, ಇಷ್ಟು ಆಗಿದೆ ಎಂದು ಹೇಳಿಕೊಳ್ಳುತ್ತಾ

ಇದ್ದೀರಿ. ಇದರ ಬಗ್ಗೆ ಅಂಕಿಅಂಶಗಳನ್ನು ಮುಂದಿಡುತ್ತಿದ್ದೇನೆ. ಇದರಲ್ಲಿ ಕೂಡ ಗಮನಾರ್ಹವಾದ ಎಕ್ಸ್‌ಪೆಂಡಿಚರ್ ತಾವು ಮಾಡಿಲ್ಲ. ಈಗ ಗ್ರಾಮೀಣಾಭಿವೃದ್ಧಿ ಬಗ್ಗೆ ಎಷ್ಟೆಲ್ಲಾ ಹೇಳುತ್ತೀರಿ. ಅಷ್ಟು ಮಾಡುತ್ತೇವೆ, ಇಷ್ಟು ಮಾಡುತ್ತೇವೆ, ಎಂದು ನಜೀರ್ ಸಾಬ್‌ರವರು ಎಲ್ಲ ಕಡೆ ಹೇಳಿದ್ರೂ ಹೇಳಿದ್ದೆ. ೨೮೫೩ ಲಕ್ಷ ವಿಶೇಷ ಗ್ರಾಮಾಭಿವೃದ್ಧಿಗೆ ಡಿಸೆಂಬರ್ ಎಂಡ್‌ವರೆಗೆ ಇರುವುದು. ಆದರೆ ಖರ್ಚು ಆಗಿರುವುದು ೧೫೭೬ ಲಕ್ಷ ರೂಪಾಯಿಗಳು. ನಂತರ ಗ್ರಾಮ ಉದ್ದಿಮೆಗಳಿಗೆ ೪೭೧೬ ಲಕ್ಷ ರೂಪಾಯಿ ಅಂದಾಜು ಇದ್ದರೆ ೪೨೫೭ ಲಕ್ಷ ರೂಪಾಯಿ ಖರ್ಚು ಆಗಿದೆ. ಭೂ ಸುಧಾರಣೆ ಕಾನೂನು ೪೩೭ ಲಕ್ಷ ಕೊಟ್ಟಿರುವುದು ಆದರೆ ಖರ್ಚು ಆಗಿರುವುದು ೨೪೪. ಇದು ಕೂಡ ಸರಿಯಾಗಿ ಇಂಪ್ಲಿಮೆಂಟ್ ಆಗಿತ. ಆಗಿಲ್ಲ, ಮಾಡುವ ಆಸಕ್ತಿ ಇಲ್ಲವೆಂದು ತೋರುತ್ತದೆ. ಇವೊತ್ತು ೩೨ ಸಾವಿರ ಕೇಸ್‌ಗಳು ಪೆಂಡಿಂಗ್ ಇವೆ. ಇದರಲ್ಲಿ ಸುಮಾರು ೮ ಲಕ್ಷಕ್ಕಿಂತ ಹೆಚ್ಚು ಗೇಣಿದಾರರು ನಮ್ಮ ರಾಜ್ಯದಲ್ಲಿದ್ದಾರೆ. ೩೨,೮೬೬ ಕೇಸ್‌ಗಳು ಪೆಂಡಿಂಗ್ ಇರತಕ್ಕದ್ದು ಮತ್ತು ಟೋಟಲ್ ಡಿಸ್ಪೋಸ್ ಆಗಿದಂಥ ಕೇಸ್‌ಗಳು ಅಂದರೆ ಟೆನೆಂಟ್ ಫೇವರ್ ಆಗಿದ್ದು ಸುಮಾರು ೫ ಲಕ್ಷ ೩೬ ಸಾವಿರದ ೧೬೫ ಟೆನಂಟ್ ವಿರೋಧವಾಗಿ ಆಗಿದ್ದು ಕೇಸ್‌ಗಳು ೩,೭೯,೬೩೭ ಲಕ್ಷ ಕೇಸ್‌ಗಳು ಮಿಕ್ಕವು ಪೆಂಡಿಂಗ್ ಆಗಿಯೇ ಉಳಿದಿವೆ.

ಇದು ಒಂದು ಕಡೆಯಾದರೆ, ಮತ್ತೊಂದು ಕಡೆ ಹೆಚ್ಚುವರಿ ಜಮೀನನ್ನು ಸ್ವಾಧೀನಪಡಿಸಿ ಕೊಂಡು ಅದನ್ನು ಬಡ ಜನರಿಗೆ ಹಂಚುವ ಕೆಲಸವನ್ನು ಸಹ ಇವರು ಸರಿಯಾಗಿ ಮಾಡಿಲ್ಲ. ಈ ಹೆಚ್ಚುವರಿ ಜಮೀನನ್ನು ಹಂಚುವ ವಿಚಾರದಲ್ಲಿ. ಇವರು ಯಾವ ರೀತಿ ನಡೆದುಕೊಂಡಿದ್ದಾರೆಂಬುದನ್ನು ನೋಡಿದಾಗ, ಗುಲ್ಬರ್ಗದಲ್ಲಿ ೧೯೮೬-೮೭ರಲ್ಲಿ ಹೆಚ್ಚುವರಿ ಜಮೀನನ್ನು ವಶಪಡಿಸಿ ಕೊಂಡಿಲ್ಲ, ೧೯೮೭-೮೮ ರಲ್ಲಿ ೩೭ ಎಕರೆಗಳನ್ನು ವಶಪಡಿಸಿಕೊಂಡಿದ್ದಾರೆ. ಬೀದರ್‌ನಲ್ಲಿ ೧೯೮೬-೮೭ರಲ್ಲಿ ಹೆಚ್ಚುವರಿ ಜಮೀನನ್ನು ವಶಪಡಿಸಿಕೊಂಡಿಲ್ಲ, ೧೯೮೭-೮೮ರಲ್ಲಿ ೧೦೯ ಎಕರೆಗಳನ್ನು ಮಾತ್ರ ವಶಪಡಿಸಿಕೊಂಡಿದ್ದಾರೆ. ಈ ರೀತಿ ಆದರೆ ಇದಕ್ಕಾಗಿ ಇಟ್ಟ ಹಣ ಇನ್ನು ಯಾವ ರೀತಿ ಖರ್ಚಾಗುತ್ತದೆ ? ಭೂಸುಧಾರಣಾ ಕಾನೂನನ್ನು ಜಾರಿಗೆ ತರುತ್ತೇವೆ, ಬಡವರಿಗೆ ಸಹಾಯ ಮಾಡುತ್ತೇವೆ, ಜಮೀನು ಬಿಟ್ಟುಕೊಟ್ಟವರಿಗೆ ಹಣ ಕೊಡುತ್ತೇವೆ ಎಂದೆಲ್ಲಾ ಇಲ್ಲಿ ಹೇಳುತ್ತಾರೆ. ಆದರೆ ಕಾರ್ಯತ; ಯಾವ ಪ್ರಗತಿಯೂ ಆಗಿಲ್ಲ. ಬಡವರಿಗಾಗಿ ಇಟ್ಟಂತಹ ಹಣವನ್ನೂ ಸಹ ಇವರು ಸರಿಯಾಗಿ ಖರ್ಚು ಮಾಡಿಲ್ಲ. ಇಂತಹ ಹತ್ತಾರು ಉದಾಹರಣೆಗಳನ್ನು ಬೇಕಾದರೆ ಕೊಡ ಬಹುದು. ಭೂಸುಧಾರಣೆ ಕಾನೂನು ಕೆಳಗೆ ಇವರು ಮೀಸಲಾಗಿಟ್ಟಿದ್ದ ಹಣದ ಪೈಕಿ ಅರ್ಧಕ್ಕಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡದೆ ಹಾಗೆಯೇ ಇಟ್ಟುಕೊಂಡಿದ್ದಾರೆ. ಸಣ್ಣ ಮಧ್ಯಮ ಮತ್ತು ಭಾರಿ ನೀರಾವರಿ ಯೋಜನೆಗಳ ವಿಚಾರದಲ್ಲಿ ಸಹ ಇದೇರೀತಿ ಆಗಿದೆ ಯಾವ ಅಭಿವೃದ್ಧಿ ಕೆಲಸಗಳೂ ಸಹ, ಯಾವ ವೆಲ್‌ಫೇರ್ ಸ್ಕೀಮುಗಳೂ ಸಹ ಸರಿಯಾಗಿ ಜಾರಿ ಆಗಿಲ್ಲ. ಹಿಂದುಳಿದ ಜಿಲ್ಲೆಗಳಲ್ಲಿ ಯಾರಾದರೂ ಹೊಸದಾಗಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ, ಅಂತಹವರಿಗೆ ಸಾಲ ಮತ್ತು ಸಬ್ಸಿಡಿ ಕೊಡಲು ಹಣದ ಕೊರತೆ ಇದೆ ಎಂದು ಹೇಳಿದ್ದಾರೆ. ಬಡವರ ಸಲುವಾಗಿ ಇವರು ಈ ಸಲ ಯಾವುದೇ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಕಳೆದ ಬಜೆಟ್‌ನಲ್ಲಿ ಇವರು ಹೆಚ್ಚಿನ ತೆರಿಗೆಯನ್ನು ಏನು ಹಾಕಿದರು, ಅದರಿಂದ ಬಂದಂಥ ವರಮಾನವನ್ನು ರಾಜ್ಯದ ಹಿಂದುಳಿದ ಭಾಗಗಳಿಗೆ ಖರ್ಚು ಮಾಡುವಂತಹ ಕಾರ್ಯಕ್ರಮವನ್ನು ಇವರು ಹಾಕಿಕೊಂಡಿಲ್ಲ. ರಾಜ್ಯದ ಹಿಂದುಳಿದ ಭಾಗಗಳ ಅಭಿವೃದ್ಧಿ ಕಡೆಗೆ ಇವರು ಯಾವ ತರಹದ ಗಮನವನ್ನು ಸಹ ಕೊಟ್ಟಿಲ್ಲ ಇದರ ಜೊತೆಗೆ ಹಿಂದುಳಿದ ಪ್ರದೇಶಗಳಿಗೆ ಕೊಡಬೇಕಾಗಿದ್ದ ಹಣವನ್ನು ಸಹ ಕೊಡದೆ, ಅದನ್ನು ಸಹ ಕಡಿಮೆ ಮಾಡುವುದರ ಮೂಲಕ ಆ ಭಾಗದ ಜನರನ್ನು ರೊಚ್ಚಿಗೆಬ್ಬಿಸುವಂತಹ ಕೆಲಸವನ್ನು ಮಾಡಿದ್ದಾರೆ. ರೈತರ ಬೆಂಬಲ ದಿಂದ ಅಧಿಕಾರಕ್ಕೆ ಬಂದಿದ್ದೇವೆ, ಇನ್ನು ಮೇಲೆ ರೈತರ ಪರವಾಗಿ ಕೆಲಸ ಮಾಡುತ್ತೇವೆಂದು ಹೇಳುತ್ತಿದ್ದ ಇವರು ಈಗ ಬೆಟರ್‌ಮೆಂಟ್ ಲೆವಿಯನ್ನು ಪುನಃ ಹಾಕುತ್ತೇವೆಂದು ಹೇಳಿದ್ದಾರೆ. ಇದನ್ನು ಈ ಸಲದ ಬಜೆಟ್ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಈಗ ಅರ್ಧವಾಗಿರುವಂತಹ ಯೋಜನೆಗಳ ಕೆಲಸಗಳನ್ನು ಮುಗಿಸಬೇಕಾದರೆ ಬೆಟರ್‌ಮೆಂಟ್ ಲೆವಿ ಹಾಕಬೇಕಾಗುತ್ತದೆಂದು ತಿಳಿಸಿದ್ದಾರೆ. ಇದರ ಅರ್ಥವಾದರೂ ಏನು ? ಇವರು ಅಧಿಕಾರಕ್ಕೆ ಬರಲು ಯಾರು ಯಾರು ಬೆಂಬಲ ಕೊಟ್ಟರು, ಆ ಜನರನ್ನೇ ತುಳಿಯಲು ಹೊರಟಿರುವಂತಹ ಬಜೆಟ್ ಇದಾಗಿದೆ ಇವರು ಬಜೆಟ್ ಮಂಡನೆ ಮಾಡಿದ ದಿವಸ ಆರ್ಥಿಕ ಇಲಾಖೆ ಸೆಕ್ರೆಟರಿಯವರು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆಂದರೆ, ಈ ಸಲದ ಬಜೆಟ್‌ನಲ್ಲಿ ಕೇವಲ ೨೮ ಕೋಟಿ ರೂಪಾಯಿಗಳಷ್ಟು ಹೊಸ ತೆರಿಗೆಯನ್ನು ಹಾಕಲಾಗಿದೆ ಆದರೆ

ಇನ್ನೂ ಹೆಚ್ಚಿಗೆ ಸಂಪನ್ಮೂಲವನ್ನು ಶೇಖರಣೆ ಮಾಡಬೇಕಾಗುತ್ತದೆ. ಆದ್ದರಿಂದ ಅಡಿಷನಲ್ ಟ್ಯಾಕ್ಸ್ ಬಂದೇ ಬರುತ್ತದೆ ಎಂಬತಕ್ಕಂಥ ಸೂಚನೆಯನ್ನು ಅವರು ಈಗಾಗಲೇ ಕೊಟ್ಟಿದ್ದಾರೆ. ಚೀಫ್ ಪಾಪ್ಯುಲಾರಿಟಿಗೋಸ್ಕರವಾಗಿ ಇವರು ಈ ಸಲ ಜನತೆಯ ಮೇಲೆ ಹೊಸ ತೆರಿಗೆಗಳನ್ನು ಹಾಕಿಲ್ಲ ಎಂದು ಬಜೆಟ್‌ನಲ್ಲಿ ಹೇಳಿದ್ದರೂ ಸಹ, ಮುಂದೆ ಹೆವಿ ಟ್ಯಾಕ್ಸನ್ನು ಹಾಕುತ್ತೇವೆ, ಮತ್ತೊಂದು ಡೋಸ್ ಕೊಡುತ್ತೇವೆ ಎನ್ನುವಂಥ ಮಾತನ್ನು ಫೈನಾನ್ಸ್ ಸೆಕ್ರೆಟರಿ ಅವರು ಸರ್ಕಾರದ ಪರವಾಗಿ ಸ್ಪಷ್ಟ ಪಡಿಸಿರುವುದು ಪತ್ರಿಕೆಗಳಲ್ಲಿ ವರದಿ ಆಗಿದೆ. ಅದಕ್ಕೆ ಇಂತಹ ಒಂದು ಬಜೆಟ್‌ನ್ನು ನಾನು ಖಂಡಿಸುತ್ತೇನೆ, ಅವರು ಹೋದಸಲ ಹೇಳಿದಂಥ ಅನೇಕ ಕಾರ್ಯಕ್ರಮಗಳನ್ನು ಪುನಃ ಇದರಲ್ಲಿ ಪುನರುಚ್ಚಾರ ಮಾಡಿದ್ದಾರೆ. ಯಾವ ಹೊಸ ಕಾರ್ಯಕ್ರಮಗಳನ್ನೂ ಹೇಳಲಿಲ್ಲ. ಹೋದ ಬಜೆಟ್‌ನಲ್ಲಿ ಹೇಳಿದಂಥ ಕಾರ್ಯಕ್ರಮಗಳನ್ನು ಮಾಡಿಲ್ಲ ಮತ್ತು ಹಿಂದುಳಿದ ಭಾಗಕ್ಕೂ ಕೂಡ ಯಾವ ಗಮನವನ್ನೂ ಹರಿಸಿಲ್ಲ. ಅದಕ್ಕೂ ಕೂಡ ಅನ್ಯಾಯ ಮಾಡಿದ್ದಾರೆ. ಆದುದರಿಂದ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಈ ಆಯವ್ಯಯವನ್ನು ಕೇಂದ್ರದಲ್ಲಾಗಲಿ, ರಾಜ್ಯದಲ್ಲಾಗಲಿ ಮಂಡಿಸಿದಾಗ ಈ ಸಮಾಜದ ವಿವಿಧ ವರ್ಗಗಳು ಏನಿವೆ, ಅವರು ಕೈಗಾರಿಕೋದ್ಯಮಿಗಳು ಆಗಿರಬಹುದು ಅಥವಾ ಕಾರ್ಮಿಕರು ಆಗಿರಬಹುದು. ಸರ್ಕಾರಿ ನೌಕರರು ಆಗಿರಬಹುದು ಅಥವಾ ಸಮಾಜದ ವಿವಿಧ ಕ್ಷೇತ್ರಗಳಿಗೆ ಸೇರಿದ ಯಾವುದೇ ವರ್ಗ ಆಗಿರಬಹುದು ಅವರು ಬಹು ಕಾತುರತೆಯಿಂದ ನೋಡುತ್ತಿರುತ್ತಾರೆ. ಅದಕ್ಕೆ ಮುಖ್ಯ ಕಾರಣ, ಈ ಆಯವ್ಯಯದಿಂದ ತನ್ನ ಮೇಲೆ ಯಾವುದಾದರೂ ಹೊರೆ ಬೀಳುತ್ತದೆಯೋ ಇಲ್ಲವೇ ಈ ಆಯವ್ಯಯದಿಂದ ತನಗೆ ಏನಾದರೂ ಅನುಕೂಲವಾಗುತ್ತದೆಯೋ ಎಂದು ಈ ಎರಡು ದೃಷ್ಟಿಯಿಂದ ಸಮಾಜದ ಎಲ್ಲಾ ವರ್ಗಗಳೂ ಕೂಡ ಕೇಂದ್ರವಾಗಲಿ, ರಾಜ್ಯವಾಗಲಿ ಆಯವ್ಯಯವನ್ನು ಮಂಡನೆ ಮಾಡಿದಾಗ ಅದನ್ನು ತೀಕ್ಷ್ಣವಾಗಿ ನೋಡತಕ್ಕಂಥ ಒಂದು ವ್ಯವಸ್ಥೆಯನ್ನು ನಾವು ನೋಡಿಕೊಂಡು ಬಂದಿದ್ದೇವೆ. ಆಯವ್ಯಯವನ್ನು ಮಂಡನೆ-ಮಾಡಿದಾಗ ನಾವು ಈ ಸದನದಲ್ಲಿ ನಮ್ಮ ಸಾಧನೆ, ನಮ್ಮ ವಿಫಲತೆ ಎಲ್ಲದರ ಬಗ್ಗೆಯೂ ಕೂಡ ಇಲ್ಲಿ ತರ್ಕ ಮಾಡುತ್ತೇವೆ, ತುಲನೆ ಮಾಡುತ್ತೇವೆ. ಇಲ್ಲಿ ಮಾಡತಕ್ಕಂಥ ಚರ್ಚೆ ಏನಿದೆ, ಮಾಡತಕ್ಕಂಥ ವ್ಯವಸ್ಥೆ ಏನಿದೆ, ಕೆಲಸ ಏನಿದೆ ಇದರ ಬಗ್ಗೆ ತೀರ್ಮಾನವನ್ನು ಕೊಡತಕ್ಕಂಥ ಜನ ಯಾರು ಎಂದರೆ ನಮ್ಮನ್ನು ಚುನಾಯಿಸಿ ಇಲ್ಲಿಗೆ ಯಾರು ಕಳಿಸಿದ್ದಾರೆ ಆ ಜನ ತೀರ್ಮಾನ ಮಾಡತಕ್ಕವರು ಈ ಸದನದಲ್ಲಿ ಇದೇ ಅರ್ಥ ಸಚಿವರು ಆಯವ್ಯಯವನ್ನು ಮಂಡಿಸಿದ್ದಾರೆ. ಅಷ್ಟೇ ಕಟುವಾಗಿ ವಿರೋಧಪಕ್ಷದವರು ಟೀಕೆ ಮಾಡಿದ್ದಾರೆ. ನಾವು ಪ್ರಗತಿಯ ವಿಚಾರದಲ್ಲಿ ಯಾವ ರೀತಿ ಮಾತನಾಡಿದ್ದೇವೆ ಅದೇ ಧಾಟಿಯಲ್ಲಿ ಅವರು ಮಾತನಾಡಿದ್ದಾರೆ. ಆದರೆ ಆಯವ್ಯಯ ಮಂಡಿಸಿದ ಮೇಲೆ ನಾವು ಜನರ ಬಳಿಗೆ ಹೋಗಿದ್ದೇವೆ. ಚುನಾವಣೆಯನ್ನು ಎದುರಿಸಿದ್ದೇವೆ, ಜನ ನಮ್ಮ ಪರವಾಗಿ ತೀರ್ಪನ್ನು ಕೊಟ್ಟಿದ್ದಾರೆ. ಈ ಜನತಾ ಸರ್ಕಾರ ಎಷ್ಟರಮಟ್ಟಿಗೆ ಮುನ್ನಡೆ ಸಾಗಿದೆ ಎನ್ನುವುದಕ್ಕೆ ಜನತೆ ಉತ್ತರ ಕೊಟ್ಟಿದ್ದಾರೆ. ಸ್ವಾಮಿ, ಈ ಆಯವ್ಯಯ ಮಂಡನೆ ಆದಮೇಲೆ ವಿರೋಧ ಪಕ್ಷಗಳಿಗೆ ಒಂದು ಅವಕಾಶ ಇದೆ ಆಡಳಿತ ಪಕ್ಷವನ್ನು ಅದರಲ್ಲಿ ಏನಾದರೂ ವಿಚಾರ ಸಿಕ್ಕಿದರೆ ಆಡಳಿತ ಪಕ್ಷವನ್ನು ಟೀಕೆ ಮಾಡಿ ಅವರನ್ನು ಬಯಲಿಗೆ ಎಳೆಯತಕ್ಕಂಥ ಒಂದು ಅವಕಾಶ ಈಗ ಕೇಂದ್ರದ ಅರ್ಥ ಸಚಿವರು ಆಯವ್ಯಯವನ್ನು ಇಟ್ಟಾಗ ಆ ಆಯವ್ಯಯದಲ್ಲಿ ಸಾಮಾನ್ಯವಾಗಿ ಯಾರಿಗೂ ಹೊರೆ ಇಲ್ಲದೇ ಇರತಕ್ಕಂಥ ಆಯವ್ಯಯವನ್ನು ತೋರಿಸಿದರು. ಆದರೆ ಆ ಆಯವ್ಯಯವನ್ನು ಮಂಡಿಸುವುದಕ್ಕೆ ೨-೩ ತಿಂಗಳ ಮುಂಚೆ ಸಾಮಾನ್ಯ ಜನರ ಮೇಲೆ ಯಾವ ಯಾವ ಹೊರೆಯನ್ನು ಹಾಕಬೇಕೋ, ಪೆಟ್ರೋಲ್ ಆಗಲಿ, ಸಿಮೆಂಟ್ ಆಗಲಿ, ಆ ಎಲ್ಲಾ ಹೊರೆಯನ್ನು ಹಾಕಿದರು. ಆಯವ್ಯಯವನ್ನು ಮಂಡಿಸಿದಾಗ ಜನರಿಗೆ ಹೊರೆ ಯಾವುದನ್ನೂ ತೋರಿಸಿಲ್ಲ. ಕೇಂದ್ರ ಅರ್ಥ ಸಚಿವರು ನಾವು ಚಾಪೆ ಅಡಿ ತೂರುತ್ತಾ ಇದ್ದೇವೆ ಆಯವ್ಯಯದಲ್ಲಿ ಯಾವ ಒಂದು ತೆರಿಗೆಯನ್ನೂ ಜನರ ಮೇಲೆ ಹಾಕಿಲ್ಲ, ನಮ್ಮದು ಬಹಳ ಬುದ್ಧಿವಂತಿಕೆ ಎಂದು ಅವರು ತಿಳಿದುಕೊಂಡರು ನಮ್ಮ ಅರ್ಥ ಸಚಿವರನ್ನೂ ಮೆಚ್ಚುತ್ತೇನೆ. ಅವರು ಚಾಪೆ ಅಡಿ ತೂರಿದರೆ ನಮ್ಮ ಅರ್ಥ ಸಚಿವರು ರಂಗೋಲಿ ಕೆಳಗೆ ತೂರಿ ಸಾರ್ವಜನಿಕರು ಮೆಚ್ಚುವಂಥ ಆಯವ್ಯಯವನ್ನು ಮಂಡಿಸಿದ್ದಾರೆಂದು ನಾನು ಸಮರ್ಥನೆ ಮಾಡುತ್ತಾ ಇದ್ದೇನೆ. ನಮ್ಮ ಪ್ರಗತಿಯ ಹೆಜ್ಜೆಯ ಅವಲೋಕನವನ್ನು ನಾವು ಮಾಡಬೇಕು. ಸ್ವಾಮಿ, ೩೫

ವರ್ಷಗಳ ಕಾಲ ಆ ಜನ ಈ ದೇಶವನ್ನು, ಕರ್ನಾಟಕವನ್ನು ಆಳಿದರು, ಸ್ವಾಮಿ, ೨೭ ವರ್ಷಗಳು ಸಂದಿದ್ದರೂ ಈ ಕರ್ನಾಟಕದ ೨೬ ಸಾವಿರ ಹಳ್ಳಿಗಳಲ್ಲಿ ನೀರಿನ ವ್ಯವಸ್ಥೆ ಇರಲಿಲ್ಲ. ೨೬ ಸಾವಿರ ಹಳ್ಳಿಗಳಿಗೆ ೩೬ ವರ್ಷಗಳಲ್ಲಿ ನೀರಿನ ವ್ಯವಸ್ಥೆ ಇರಲಿಲ್ಲ. ೩೫ ವರ್ಷಗಳಲ್ಲಿ ಕಾಂಗ್ರೆಸ್‌ನವರು ತೆಗೆದ ಕೊಳವೆ ಬಾವಿಗಳ ಸಂಖ್ಯೆ ೫೦ ಸಾವಿರ. ಆದರೆ ಜನತಾ ಸರ್ಕಾರ ೫ ವರ್ಷಗಳಲ್ಲಿ ೫೦ ಸಾವಿರ ಕೊಳವೆ ಬಾವಿಗಳನ್ನು ತೆಗೆಸಿದ್ದಾರೆ.

೨-೩೦ ಪಿ.ಎಂ.

೫ ವರ್ಷಗಳ ಅವಧಿಯಲ್ಲಿ ಸುಮಾರು ೫೦ ಸಾವಿರ ಕೊಳವೆ ಬಾವಿಗಳನ್ನು ತೆಗೆಸಿದ್ದೇವೆ. ಇದಕ್ಕಾಗಿ ೧೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಜನತಾ ಸರ್ಕಾರ ಗ್ರಾಮಾಭಿವೃದ್ಧಿಗಾಗಿ ಗ್ರಾಮೀಣ ರೈತರ ಬಗ್ಗೆ ಮತ್ತು ಗ್ರಾಮೀಣ ಮಹಿಳೆಯವರ ಬಗ್ಗೆ ಯಾವ ರೀತಿಯಲ್ಲಿ ಚಿಂತನೆ ಮಾಡಿದೆ ಎನ್ನುವುದಕ್ಕೆ ಇದು ಒಂದು ನಿದರ್ಶನ.

ಶ್ರೀ ಎಂ ರಾಮಪ್ಪ.—ಮಾನ್ಯ ರಾಮಕೃಷ್ಣ ಹೆಗಡೆಯವರು ಕಾಂಗ್ರೆಸ್ ಸರ್ಕಾರದಲ್ಲಿ ಎಷ್ಟು ವರ್ಷಗಳು ಇದ್ದರು ಎನ್ನುವುದನ್ನು ತಾವು ಹೇಳಬೇಕು ?

ಅಧ್ಯಕ್ಷರು.—ಆಮೇಲೆ ತಾವು ಮಾತನಾಡಿ, ಈಗ ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆಮ್ಮಿಗೆ.—ನೀವು ಹೇಳಿದ್ದೆಲ್ಲಾ ಸತ್ಯ ಎನ್ನುವುದರ ಬಗ್ಗೆ ಜನ ತೀರ್ಮಾನ ಮಾಡಿದ್ದಾರೆ. ನಾವು ಹೇಳಿದ್ದು ಸತ್ಯವೋ ಅಸತ್ಯವೋ ಎನ್ನುವುದರ ಬಗ್ಗೆಯೂ ಕೂಡ ಜನ ತೀರ್ಮಾನ ಮಾಡುತ್ತಾರೆ. ಈ ಸದನದಲ್ಲಿ ೨೨೪ ಜನ ಇದ್ದೇವೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಮಾಜದಲ್ಲಿ ತುಳಿತಕ್ಕೆ ಒಳಗಾದಂಥ ಮಹಿಳೆಯರಿಗೆ ಎಷ್ಟು ಕೆಲಸ ಮಾಡಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಕಾಂಗ್ರೆಸ್ ಸರ್ಕಾರ ಯಾವುದೇ ರೀತಿಯಲ್ಲಿಯೂ ಮಹಿಳೆಯರಿಗೆ ರಾಜಕೀಯ ಸ್ಥಾನಮಾನ ಕೊಟ್ಟಿರಲಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳಲ್ಲಿ ಮಹಿಳೆಯರಿಗಾಗಿ ೨೫ ಪರ್ಸೆಂಟ್ ಮೀಸಲಾತಿಯನ್ನು ಇಡಲಾಗಿದೆ. ೮೦೦ ಜನ ಜಿಲ್ಲಾ ಪರಿಷತ್ ಸದಸ್ಯರುಗಳ ಪೈಕಿ ಸುಮಾರು ೨೦೦ ಜನ ಮಹಿಳೆಯರು ಗೆದ್ದು ಬಂದು, ಅಧಿಕಾರ ಸೂತ್ರವನ್ನು ಹಿಡಿದಿದ್ದಾರೆ. ಮಂಡಲ ಪಂಚಾಯಿತ್ತಿಗಳಲ್ಲಿ ೫೬,೦೦೦ ಸದಸ್ಯರುಗಳ ಪೈಕಿ ಸುಮಾರು ೧೪,೦೦೦ ಮಹಿಳೆಯರು ಇವತ್ತು ಗೆದ್ದು ಬಂದು ಅಧಿಕಾರ ಸೂತ್ರವನ್ನು ಹಿಡಿದಿದ್ದಾರೆ. ಈ ಕೆಲಸವನ್ನು ೩೫ ವರ್ಷಗಳ ಕಾಲ ಅಧಿಕಾರ ಸೂತ್ರ ಹಿಡಿದಿದ್ದಂಥ ಕಾಂಗ್ರೆಸ್ ಸರ್ಕಾರ ಮಾಡಲಿಲ್ಲ. ಮಹಿಳೆಯೇ ಪ್ರಧಾನ ಮಂತ್ರಿಯಾಗಿದ್ದರೂ ಅವರ ಕಾಲದಲ್ಲಿ ಮಹಿಳೆಯರಿಗೆ ಕೊಡದಿದ್ದ ಪ್ರಾತಿನಿಧ್ಯವನ್ನು ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕರ್ನಾಟಕದಲ್ಲಿ ಕೊಟ್ಟಿದೆ, ಸ್ವಾಮಿ. ಇವತ್ತು ದಲಿತರ ಬಗ್ಗೆ ಮಾನ್ಯ ಸ್ನೇಹಿತರುಗಳು ಮಾತನಾಡುತ್ತಾರೆ, ಇವತ್ತು ಮಂಡಲ್ ಪಂಚಾಯಿತಿ, ಜಿಲ್ಲಾ ಪರಿಷತ್ ಚುನಾವಣೆಗಳು ಆದ ಮೇಲೆ ರಾಜ್ಯದಲ್ಲಿ ೧೪,೦೦೦ ಜನ ದಲಿತ ಪ್ರತಿನಿಧಿಗಳು ಅಧಿಕಾರ ಸ್ಥಾನದಲ್ಲಿದ್ದಾರೆ. ಯಾವ ಜನ ಶೋಷಣೆಗೆ ಒಳಗಾಗಿದ್ದರು, ಸಮಾಜದಲ್ಲಿ ತುಳಿತಕ್ಕೆ ಒಳಗಾಗಿದ್ದರು ಆ ಜನರ ಬಗ್ಗೆ ಚಿಂತನೆ ಮಾಡತಕ್ಕ ಸರ್ಕಾರ ಇದೆ ಎಂಬುದನ್ನು ಸಾಮಾನ್ಯ ಜನ ತಿಳಿದುಕೊಂಡಿದ್ದಾರೆ. ಇದರ ಬಗ್ಗೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿ ಚುನಾವಣೆಗಳಲ್ಲಿ ಜನ ತಮ್ಮ ಅಭಿಪ್ರಾಯವನ್ನು ಕೊಡುವುದರ ಮೂಲಕ ತಿಳಿಸಿದ್ದಾರೆ. ರೈತರಿಗೆ ಸಹಾಯ ಮಾಡುವುದರ ಮೂಲಕ ಕೋಟಿಗಟ್ಟಲೆ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಡವರನ್ನು ಗುರುತಿಸಿ ಅವರಿಗೆ ಸಹಾಯ ಮಾಡುವ ಚಿಂತನೆಯನ್ನು ಮಾಡಿತು. ಅದರ ಮೇರೆಗೆ ರಾಜ್ಯದಲ್ಲಿ ಸುಮಾರು ೩೧.೧೩ ಲಕ್ಷ ಜನರಿಗೆ ಹಸಿರು ಕಾರ್ಡುಗಳನ್ನು ಹಂಚಲಾಯಿತು, ಇದರಲ್ಲಿ ೧೨ ಲಕ್ಷ ಸಣ್ಣ ರೈತರು, ೧೨ ಲಕ್ಷ ಭೂಹೀನ ಕೃಷಿ ಕಾರ್ಮಿಕರು, ಒಂದೂವರೆ ಲಕ್ಷ ಗ್ರಾಮೀಣ ಕುಶಲ ಕರ್ಮಿಗಳು, ಎಲ್ಲದಕ್ಕಿಂತ ಮಿಗಿಲಾಗಿ ೧೬ ಲಕ್ಷ ಹರಿಜನ ಗಿರಿಜನರು ಸೇರಿದ್ದಾರೆ. ನಮ್ಮ ಸರ್ಕಾರಕ್ಕೆ ಹರಿಜನ ಗಿರಿಜನರ ಬಗ್ಗೆ ಮಮತೆ, ಮಮಕಾರ ಇದೆ ಎನ್ನುವುದನ್ನು ನಮ್ಮ ಸ್ನೇಹಿತರುಗಳು ಅರ್ಥ ಮಾಡಿಕೊಳ್ಳಬೇಕು.

ಇನ್ನು ನಮ್ಮ ಸ್ನೇಹಿತರು ಹೇಳುತ್ತಿದ್ದರು. ೫ ವರ್ಷಗಳ ಕಾಲ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರಿಗೆ ಹೇಳುತ್ತಿದ್ದೀರಿ ?......

ಶ್ರೀ ವೇದಾಂತ ಹೆಮ್ಮಿಗೆ.—ನಮ್ಮ ಸ್ನೇಹಿತರು ಎಂದು ನಿಮ್ಮನ್ನು ನಾನು ಕರೆಯುತ್ತಿದ್ದೇನೆ. ಅದನ್ನು ಬೇಡವೆಂದು ಹೇಳುವುದಾದರೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ. ತಾವು ಭಾಷಣ ಮಾಡುವಾಗ ಹೇಳಿದ್ದೀರಿ. ತಾವು ತಮ್ಮ ಅಚೀವ್‌ಮೆಂಟ್‌ನ್ನು ನೋಡಿದ್ದೀರಾ ?

ಅಧ್ಯಕ್ಷರು.—ಅವರು ಯಾವಾಗಲೂ ಅದನ್ನೇ ಹೇಳುತ್ತಿರುತ್ತಾರೆ, ನೀವು ಇದನ್ನೇ ಹೇಳುತ್ತಿರುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ತಮ್ಮ ಸರ್ಕಾರದ ಸಾಧನೆಯನ್ನು ಹೇಳಿದರು. ಏಕೆಂದರೆ ಹಿಂದೆ ತಾವು ಬಹಳ ಕಟುವಾಗಿ ಟೀಕೆ ಮಾಡಿ ತಮ್ಮ ಬೆನ್ನನ್ನು ತಾವೇ ಈಗ ಚಪ್ಪರಿಸಿ ಕೊಂಡಿರಿ. ಇಲ್ಲಿ ನೋಡಿ ಟೇಬಲ್ ನಂ. ೨೫, ಪೇಜ್ ನಂಬರ್ ೫೫, ನೀವು ಹೇಳಿದಿರಿ ೫ ವರ್ಷದಲ್ಲಿ ನಾವೇ ಎಲ್ಲಾ ಬೋರ್‌ವೆಲ್‌ಗಳನ್ನೂ ಮಾಡಿದೆವು, ಹಿಂದಿನ ಸರ್ಕಾರ ಏನೂ ಮಾಡಲಿಲ್ಲ ಎಂದು. ೧೯೭೮–೭೯ ರಿಂದ ೧೯೮೩ರವರೆಗೆ ಎಂದರೆ ೫ ವರ್ಷದಲ್ಲಿ ೩೫ ೯೬೦ ಬೋರ್‌ವೆಲ್‌ಗಳನ್ನು ತೆಗೆಸಿದ್ದು ನೀವು ೫ ವರ್ಷದಲ್ಲಿ ಮಾಡಿದ್ದು ೫೩ ಸಾವಿರ ಬೋರ್‌ವೆಲ್‌ಗಳು. ಅಂದರೆ ೧೭ ಸಾವಿರ ನಿಮ್ಮ ಸಾಧನೆ ಅಷ್ಟೇ ಹೊರತು ನೀವು ಸುಮ್ಮನೆ ಹೇಳಿಕೊಂಡು ನಾವೇ ಎಲ್ಲವನ್ನೂ ಮಾಡಿದ್ದೇವೆಂದು ಹೇಳುವುದಕ್ಕೆ ಹೋಗಬೇಡಿ. ಇದನ್ನೂ ಸೇರಿಸಿಕೊಳ್ಳಿ.

ಶ್ರೀ ಎಂ. ರಾಮಪ್ಪ.—೧೯೭೭ ರಿಂದ ಎಲ್ಲವನ್ನೂ ಸೇರಿಸಿಕೊಂಡೇ ಅವರು ಹೇಳುವುದು.

ಅಧ್ಯಕ್ಷರು.—ಮಾನ್ಯ ರಾಮಪ್ಪನವರೇ ನೀವೂ ಪಾಯಿಂಟ್‌ಗಳನ್ನು ನೋಟ್ ಮಾಡಿಕೊಂಡು ನಿಮ್ಮ ಭಾಷಣದ ಸಮಯದಲ್ಲಿ ಹೇಳಿ.

ಶ್ರೀ ವೇದಾಂತ ಹೆಮ್ಮಿಗೆ.—ನಾವು ೯೮೭ ಕೋಟಿ ರೂಪಾಯಿಗಳನ್ನು ಸಹಾಯ ಕೊಡಬೇಕೆಂದು ಕೇಂದ್ರದವರನ್ನು ಕೇಳಿದ್ದೆವು. ಆದರೆ ನಮಗೆ ಕೇಂದ್ರದಿಂದ ದೊರೆತದ್ದಾದರೂ ಎಷ್ಟು ? ೫ ವರ್ಷಗಳ ಕಾಲ ನಮ್ಮ ಕರ್ನಾಟಕವನ್ನು ಪ್ರಕೃತಿ ಪೀಡಿಸಿತು. ಮಳೆ ಬರಲಿಲ್ಲ. ಅಂಥ ಸಂದರ್ಭದಲ್ಲಿ ನಾವು ಕೇಂದ್ರದ ಸಹಾಯವನ್ನು ಕೇಳಿದಾಗ ಕೇಂದ್ರದವರು ಕೊಟ್ಟಿದ್ದು ೨೦೫ ೫೭ ಕೋಟಿ ರೂಪಾಯಿಗಳು ಮಾತ್ರ. ಆದರೆ ೫ ವರ್ಷಗಳ ಬರಗಾಲದಲ್ಲಿ ೬೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ನಮ್ಮ ಸರ್ಕಾರ ಬಡ ಜನರಿಗೆ, ರೈತರಿಗೆ ಖರ್ಚು ಮಾಡಿದೆ. ನಾನು ತಮ್ಮನ್ನು ಕೇಳುತ್ತೇನೆ, ಕೇಂದ್ರದಲ್ಲಿ ಯಾವ ಸರ್ಕಾರವೇ ಬರಲಿ, ಬಡ ರೈತರ ಬಗ್ಗೆ ಚಿಂತನೆ ಮಾಡುತ್ತದೆಂದು ಹೇಳುತ್ತೀರೋ? ರೈತರ ಬಗ್ಗೆ ನೀವು ಹೇಳಿದಂತೆ ನಡೆದುಕೊಳ್ಳುತ್ತಿದ್ದೀರಾ ? ಬರಗಾಲ ಬಂದರೆ ಬೆಂಗಳೂರಿನ ಜನರಿಗೆ ಏನೂ ತೊಂದರೆಯಾಗುವುದಿಲ್ಲ, ಮೈಸೂರು ನಗರದ ಜನರಿಗೇನೂ ತೊಂದರೆಯಾಗುವುದಿಲ್ಲ. ಪಟ್ಟಣದಲ್ಲಿ ವಾಸ ಮಾಡತಕ್ಕ ಜನರಿಗೇನೂ ತೊಂದರೆಯಾಗುವುದಿಲ್ಲ. ಬರಗಾಲ ಬಂದಾಗ ಈ ಬರಗಾಲದ ಬಿಸಿಗೆ ಒಳಗಾಗತಕ್ಕ ವ್ಯಕ್ತಿ ಯಾರು ಎಂದರೆ, ಯಾವನು ಬಿಸಿಲಿನಲ್ಲಿ ನೇಗಿಲನ್ನು ಹಿಡಿದುಕೊಂಡು ಜಮೀನನ್ನು ಉಳುತ್ತಾನೋ ಅವನಿಗೆ ಇದರ ಬಿಸಿ ತಟ್ಟುತ್ತದೆ. ಅವನಿಗೋಸ್ಕರ ಹಣವನ್ನು ಸಹಾಯ ಮಾಡಿ ಎಂದು ನಾವು ಕೇಳಿದಾಗ ಕೇಂದ್ರ ಸರ್ಕಾರ ಮಾಡಲಿಲ್ಲ. ಆದರೆ ನಮ್ಮ ಸರ್ಕಾರ ಈ ಕೆಲಸವನ್ನು ಮಾಡಿದೆ. ಇದು ನಮ್ಮ ಸರ್ಕಾರದ ಸಾಧನೆ. ಕೇಂದ್ರ ಸರ್ಕಾರಕ್ಕೆ ಬರತಕ್ಕ ನಿವ್ವಳ ಆದಾಯ ೬೧೫ ಕೋಟಿ ರೂಪಾಯಿಗಳಲ್ಲಿ ನಮ್ಮ ರಾಜ್ಯಗಳಿಗೆ ಕೊಡತಕ್ಕದ್ದು ೨೮ ಕೋಟಿ ರೂಪಾಯಿಗಳು ಎಂದರೆ ಅವರು ಈ ರಾಜ್ಯ ಸರ್ಕಾರಗಳನ್ನು ಯಾವ ಅರ್ಥ ವ್ಯವಸ್ಥೆಯಲ್ಲಿ ಇವರು ನೋಡುತ್ತಿದ್ದಾರೆಂಬುದಕ್ಕೆ ಇದೊಂದು ಉದಾಹರಣೆ.

ಸ್ವಾಮಿ, ಇನ್ನೊಂದು ಉದಾಹರಣೆ ಕೊಡುವುದಾದರೆ, ನಾವು ಭಾಗ್ಯ ಜ್ಯೋತಿ ಯೋಜನೆಯನ್ನು ಹಾಕಿದೆವು, ಗಂಗಾ ಕಲ್ಯಾಣ ಯೋಜನೆಯನ್ನು ಹಾಕಿದೆವು. ಇದು ಬಡವರ ಕಲ್ಯಾಣಕ್ಕಾಗಿ ಹಾಕಿದ್ದುದು. ಆದರೆ ನಮಗೆ ಸಾಲ ಕೊಡತಕ್ಕ ಸಚಿವರ ಖಾತೆ ಬದಲಾವಣೆ ಆದ ಮೇಲೆ ಅಂದರೆ ಅವರು ಗ್ರಾಮೀಣ ಸಚಿವರಾದ ಮೇಲೆ ನಮ್ಮ ರಾಜ್ಯದ ಮಿತಿಗೆ ಸೇರಿದಂಥ ಕೆಲಸವನ್ನು ನಾವು ಏನು ಮಾಡುತ್ತಿದ್ದೇವೆ, ಆ ಜಲಗಾರ ಮತ್ತು ಕುಟೀರ ಜ್ಯೋತಿ, ಇವುಗಳನ್ನು ಅವರು ಒಪ್ಪಿಕೊಂಡಿದ್ದಾರೆ. ನಮ್ಮ ಕಾರ್ಯಕ್ರಮಗಳನ್ನು ಅವರು ಒಪ್ಪಿಕೊಂಡಿರುವುದಕ್ಕೆ ಅವರಿಗೆ ನಾನು ಶಹಭಾಸ್‌ಗಿರಿಯನ್ನು ಕೊಡುತ್ತೇನೆ. ನಾವು ಒಳ್ಳೆಯ ಕೆಲಸವನ್ನು ಮಾಡಿದ್ದೇವೆ ಎಂದು ಅವರು ಒಪ್ಪಿಕೊಂಡಿದ್ದಾರೆ.

ಆದರೆ ನಮ್ಮ ರಾಜ್ಯ ಸರ್ಕಾರ ಮಾಡಿದಂಥ ಕೆಲಸಕ್ಕೆ ಅವರು ಪ್ರವೇಶ ಮಾಡತಕ್ಕದ್ದು ಸರಿಯಲ್ಲ. ಈ ಕೆಲಸವನ್ನು ಅವರು ಮಾಡಬಾರದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸ್ವಾಮಿ ಇವೊತ್ತು ವಿದ್ಯುತ್ ಉತ್ಪಾದನೆಯ ಬಗ್ಗೆ, ರಾಯಚೂರು, ಶರಾವತಿ ಯೋಜನೆ, ಬಂಧಿತ ಡೀಸಲ್ ವಿದ್ಯುತ್ ಜನಕಗಳು, ಯಲಹಂಕ ಗ್ಯಾಸ್ ಟರ್ಬೈನ್ ಡೀಸಲ್ ಯೋಜನೆ, ಬೃಂದಾವನ ಕಿರು ಜಲವಿದ್ಯುತ್ ಯೋಜನೆ ಇದರ ಬಗ್ಗೆ ಯೋಜನೆಗಳನ್ನು ಹಾಕಿಕೊಂಡು ತ್ವರಿತವಾಗಿ ಮುಂದೆ ಹೋಗುತ್ತಿದ್ದೇವೆ. We are not self-sufficient so far as electricity is concerned. You cannot blame us now. You were for the past 35 years. What were you doing for the development of electricity in this State ? ತಾವು ಈ ದಿಸೆಯಲ್ಲಿ ಯಾವ ಯೋಜನೆಗಳನ್ನು ಹಾಕಿದ್ದಿರಿ ? ಇವೊತ್ತು ನಮ್ಮ ಬಗ್ಗೆ ದೂರುವುದು ಅಲ್ಲ, ಇವೊತ್ತು ನಾವು ಈ ಯೋಜನೆಗಳನ್ನು ಹಾಕಿದ್ದೇವೆ. ವಿದ್ಯುಚ್ಛಕ್ತಿ unless we are going to be self-sufficient ಆರ್ಥಿಕವಾಗಿ ಉತ್ಪಾದನಾ ಕ್ಷೇತ್ರದಲ್ಲಿ ಹಾಗೂ ಉದ್ಯೋಗವನ್ನು ಒದಗಿಸುವ ದಿಸೆಯಲ್ಲೂ ಕೂಡ ನಾವು ಮುಂದೆ ಸಾಗಲಿಕ್ಕೆ ಸಾಧ್ಯವಾಗುವುದಿಲ್ಲ. ಈಗ ಈ ಯೋಜನೆಯನ್ನು ನಮ್ಮ ಬಜೆಟ್‌ನಲ್ಲಿ ಹಾಕಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಾಮಿ, ಬೆಂಗಳೂರು ಪ್ರಾಧಿಕಾರದಲ್ಲಿ ನಿವೇಶನಗಳನ್ನು ಹಂಚಿರುವ ಪ್ರಗತಿಯ ಬಗ್ಗೆ ಆಯವ್ಯಯದಲ್ಲಿ ಒಂದು ಮಾತು ಹೇಳಿದ್ದಾರೆ. ೧೯೮೭-೮೮ರಲ್ಲಿ ೧೬,೪೮೫ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ ಈ ನಿವೇಶನಗಳನ್ನು ಹಂಚುವಾಗ ಸಾಕಷ್ಟು ಮಟ್ಟಿಗೆ ಬಡ ಜನ, ಮಧ್ಯಮ ವರ್ಗದವರು ಯಾರು ಇದ್ದಾರೆ, ಅವರಿಗೆ ಸುಲಭವಾದ ರೀತಿಯಲ್ಲಿ ಮನೆಗಳು, ನಿವೇಶನಗಳನ್ನು ಹಂಚುವ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಪ್ರಯೋಗವನ್ನು ಮೈಸೂರಿನಲ್ಲಿ ಮಾಡುತ್ತಿದ್ದೇವೆ, ಆಶ್ರಯ ಮಂದಿರ ಎಂದು ಸೈಟುಗಳನ್ನು ಮತ್ತು ಮನೆಗಳನ್ನು ಕೊಡುತ್ತಿದ್ದೇವೆ. ಹೆಚ್. ಯು. ಡಿ. ಯಿಂದ ಅವರಿಗೆ ಸಾಲ ಕೊಡಿಸತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಸೈಟು ಕೊಟ್ಟವರಿಗೆ

ಬ್ಯಾಂಕ್‌ನಿಂದ ಸಾಲ ಕೊಡಿಸತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ಬೆಂಗಳೂರಿನಲ್ಲಿಯೂ ಸಹ ಯಾರು ಈ ಬಡವರು, ಕಾರ್ಮಿಕರು, ಮಧ್ಯಮ ವರ್ಗದವರು ಇದ್ದಾರೆ ಅವರಿಗೆ ನಿವೇಶನ ಒದಗಿಸಿಕೊಟ್ಟು ಅವರಿಗೆ ಮನೆ ಕಟ್ಟಲಿಕ್ಕೆ ಸಾಲದ ವ್ಯವಸ್ಥೆಯನ್ನು ಮಾಡಿಕೊಡಬೇಕು. ಇವೊತ್ತು ಸರ್ಕಾರಿ ನೌಕರರಿಗೆ ದೊಡ್ಡವರಿಗೆ, ನಿವೇಶನಗಳನ್ನು ಕೊಡುತ್ತಿದ್ದೀರಿ. ಸರ್ಕಾರಿ ನೌಕರರಿಗೆ ಸಾಲ ಸಿಕ್ಕುತ್ತದೆ. ಕೈಗಾರಿಕೋದ್ಯಮಿಗಳು ತಮ್ಮ ಹಣದಲ್ಲಿ ಮನೆಯನ್ನು ಕಟ್ಟಿಕೊಳ್ಳುತ್ತಾರೆ ಇವೊತ್ತು ಬಡ ಜನರು ಯಾರು ಉದ್ಯೋಗ ಇಲ್ಲದೇ ಕೂಲಿ ಕೆಲಸವನ್ನು ಮಾಡುತ್ತಾರೆ ಅಂತಹವರಿಗೆ ನಿವೇಶನ ಕೊಟ್ಟು ವಸತಿಸೌಲಭ್ಯ ಒದಗಿಸಲಿಕ್ಕೆ ತಾವು ಯೋಜನೆಯನ್ನು ರೂಪಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ

ಇನ್ನು ವಿಶ್ವವಿದ್ಯಾನಿಲಯಗಳ ಬಗೆ ಶಿಕ್ಷಣ ಸುಧಾರಣೆ ಬಗ್ಗೆ ತಾವು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ನನ್ನ ದೃಷ್ಟಿಯಲ್ಲಿ ಎಲ್ಲಿಯತನಕ ಈ ಶಿಕ್ಷಣ ಕ್ರಾಂತಿ ಪ್ರಾಥಮಿಕ ಹಂತದಲ್ಲಿ ಆಗುವುದಿಲ್ಲ, ಅಲ್ಲಿಯತನಕ ಈ ದೇಶದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಪ್ರಗತಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶ್ವವಿದ್ಯಾನಿಲಯ, ಶಾಲಾ ಹೈಸ್ಕೂಲುಗಳು, ಕಾಲೇಜು ಟೆಕ್ನಿಕಲ್ ಎಜುಕೇಷನ್, ಇವೆಲ್ಲಕ್ಕಿಂತಲೂ ಜಾಸ್ತಿಯಾಗಿ ಇವೊತ್ತು ಯಾವರೀತಿ ಪ್ರತಿ ಒಂದು ಹಳ್ಳಿಗೆ ಒಂದು ಬಾವಿ ಬೇಕೆಂದು ಹೇಳುತ್ತೇವೆ. ಅದೇ ರೀತಿ ಪ್ರತಿಯೊಂದು ಹಳ್ಳಿಗೂ ಕೂಡ ಒಂದು ನರ್ಸರಿ ಸ್ಕೂಲು, ಕೊಡತಕ್ಕಂಥ ವ್ಯವಸ್ಥೆ ಒಂದು ಪ್ರಾಥಮಿಕ ಶಾಲೆ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಸ್ವಾಮಿ, ಈ ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ನಾನು ಬಹಳ ನೋವಿನಿಂದ ಹೇಳಬೇಕಾಗಿದೆ. ೬ ರಿಂದ ೧೪ ವರ್ಷದವರೆಗೆ ನಾವು ಈ ದೇಶದಲ್ಲಿ ವಿದ್ಯಾಭ್ಯಾಸ ಕೊಡುತ್ತೇವೆಂದು ಹೇಳಿ ರಾಜ್ಯಾಂಗದಲ್ಲಿ ಮಾತು ಕೊಟ್ಟಿದ್ದೇವೆ, ನಾವು ಎಲ್ಲರಿಗೂ ವಿದ್ಯಾಭ್ಯಾಸ ಕೊಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಇದನ್ನು ನೋಡಿದಾಗ ನನಗನ್ನಿಸುತ್ತದೆ, ತಾವು ೩೫ ವರ್ಷಗಳಕಾಲ ಅಧಿಕಾರದಲ್ಲಿದ್ದಿರಿ ನಾವು ಈಗ ಅಧಿಕಾರದಲ್ಲಿದ್ದೇವೆ...... Have you not violated the Directive Principle of the Constitution ?

ಮೂವತ್ತೈದು ವರ್ಷಗಳಲ್ಲಿ ಆರರಿಂದ ಹದಿನಾಲ್ಕು ವರ್ಷದವರೆವಿಗೂ ಇರುವ ಎಲ್ಲರಿಗೂ ಶಿಕ್ಷಣವನ್ನು ಕೊಡುತ್ತೇವೆಂದು ಹೇಳಿದ್ದೀರಿ, ಕಳೆದ ೩೫ ವರ್ಷಗಳಲ್ಲಿ ಈಗ ಇಂಥ ಒಂದು ಹೊಸ ಶಿಕ್ಷಣ ಪದ್ಧತಿಯ ಕ್ರಮವನ್ನು ಜಾರಿಗೆ ತರಬೇಕೆಂದು ಪ್ರಯತ್ನ ಮಾಡಿದ್ದೀರಿ. ಈ ರಾಜ್ಯಾಂಗ ಜಾರಿಗೆ ಬಂದಮೇಲೆ ಈ ದೇಶದಲ್ಲಿ ಅನಕ್ಷರಸ್ಥರಾಗಿರತಕ್ಕಂಥವರ ಸಂಖ್ಯೆ ೧೩ ಕೋಟಿಯಾಗಿದೆ. ರಾಜ್ಯಾಂಗ ಜಾರಿಗೆ ಬಂದು ೩೫ ವರ್ಷಗಳಲ್ಲಿ ೧೩ ಕೋಟಿ ನಿರಕ್ಷರಸ್ಥರು ಇರಬೇಕಾದರೆ ಇನ್ನು ಎರಡು ಸಾವಿರದ ವರ್ಷಕ್ಕೆ ಈ ದೇಶದಲ್ಲಿ ೫೦ ಕೋಟಿಗೆ ಈ ನಿರಕ್ಷರಸ್ಥರ ಸಂಖ್ಯೆ ಏರುತ್ತದೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಣ ಕೊಡಲು ಎಷ್ಟು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದಾರೋ ಅಷ್ಟೇ ಪ್ರಾಮಾಣಿಕವಾದ ಪ್ರಯತ್ನವನ್ನು ಶಾಲಾ ಕಾಲೇಜುಗಳಲ್ಲಿ ಮಾಡಬೇಕು ಮತ್ತು ಪ್ರತಿಯೊಂದು ಹಳ್ಳಿಗಳಿಗೂ ಒಂದು ಪ್ರಾಥಮಿಕ ಶಾಲೆಯನ್ನು ಒಂದು ನರ್ಸರಿ ಶಾಲೆಯನ್ನು ತೆಗೆಯತಕ್ಕ ಕೆಲಸವನ್ನು ಮಾಡಬೇಕು. ಸೆಂಟ್ರಲ್ ಬೋರ್ಡ್‌ನವರು ಒಂದು ಹೊಸ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಿರುತ್ತಾರೆ. ಅದೇರೀತಿಯಲ್ಲಿ ಹಳ್ಳಿ ಹಳ್ಳಿಗಳಲ್ಲಿ ವಾಸ ಮಾಡತಕ್ಕ ಮಹಿಳೆಯರಿಗೆ ಅಲ್ಲಿಯೇ ಶಿಕ್ಷಣ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಪ್ರತಿಯೊಂದು ಹಳ್ಳಿಗೂ ಕೂಡ ದಯವಿಟ್ಟು ಪ್ರಾಥಮಿಕ ಶಾಲೆಯನ್ನು ಕೊಟ್ಟು ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ರೇಸ್ ಕೋರ್ಸ್ ಬಗ್ಗೆ ಕೆಲವು ಮಾತನ್ನು ಹೇಳುತ್ತೇನೆ. ಅದನ್ನು ತೆಗೆದು ಬೇರೆ ಜಾಗದಲ್ಲಿ ಹಾಕುವುದಾಗಿ ತಿಳಿಸಿರುತ್ತೀರಿ. ಇದನ್ನು ಇಲ್ಲಿಂದ ತೆಗೆಯಬೇಕೆಂದು ನಾನು ಕೂಡ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಮತ್ತೆ ಈ ರೇಸ್‌ನ್ನು ರಾಷ್ಟ್ರೀಕರಣ ಮಾಡಬೇಕೆಂದೂ ಕೂಡ ಒತ್ತಾಯ ಮಾಡುತ್ತೇನೆ. ಯಾರು ಸಿರಿವಂತರು, ಮಾಲೀಕರು ಇದ್ದಾರೋ ಅವರು ಏಜೆಂಟ್ಸ್ ಯಾರು ಇದ್ದಾರೋ ಅವರುಗಳಿಂದ ಕಾರ್ಮಿಕರು ಮತ್ತು ಬಡವರ ಶೋಷಣೆ ಮಾಡತಕ್ಕಂಥ ಒಂದು ವ್ಯವಸ್ಥೆ ಇದಾಗಿದೆ. ಆದ್ದರಿಂದ ಈ ರೇಸ್‌ನ್ನು ಪೂರ್ಣವಾಗಿ ರದ್ದು ಮಾಡಬೇಕು ಇಲ್ಲ ಇದನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತಾ ಇದನ್ನು ಬೇರೆ ಜಾಗಕ್ಕೆ ವರ್ಗಾಯಿಸತಕ್ಕಂಥ ವ್ಯವಸ್ಥೆಯನ್ನು ಏನು ಮಾಡಿರುತ್ತೀರಿ ಇದನ್ನು ನಾನು ಸ್ವಾಗತಿಸುತ್ತೇನೆ.

ಇನ್ನು ಚಲನಚಿತ್ರದ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಸಬ್‌ಸಿಡಿ ಕೊಡುವ ವ್ಯವಸ್ಥೆ ಮತ್ತು ತೆರಿಗೆಯನ್ನು ರಿಯಾಯತಿ ಕೊಡುವ ವ್ಯವಸ್ಥೆ. ಸ್ವಾಮಿ ಕನ್ನಡದಲ್ಲಿ ತೆಗೆಯುವ ಎಲ್ಲಾ ಚಿತ್ರಗಳಿಗೂ ಕೂಡ ಸಬ್‌ಸಿಡಿ ಮತ್ತು ತೆರಿಗೆಯನ್ನು ರಿಯಾಯತಿ ಕೊಟ್ಟರೆ ಅದರಿಂದ ಭಾಷೆಯಾಗಲಿ ಅಥವಾ ಕಲೆಯಾಗಲಿ ಉದ್ಧಾರವಾಗುತ್ತದೆ ಎನ್ನುವ ಭಾವನೆ ಇದ್ದರೆ ಅದು ತಪ್ಪಾಗುತ್ತದೆ. ಆ ವ್ಯವಸ್ಥೆಯನ್ನು ನಾನು ಒಪ್ಪುವುದಿಲ್ಲ. ಎಲ್ಲಿ ಸಾಹಿತ್ಯ ಅಡಕವಾಗಿರುತ್ತದೆಯೋ, ಎಲ್ಲಿ ಕಲೆ ಅಡಕವಾಗಿರುತ್ತದೆಯೋ. ಎಲ್ಲಿ ನಮ್ಮ ನಾಡಿನ ಸಂಸ್ಕೃತಿ ಅಡಕವಾಗಿರುತ್ತದೆಯೋ ಅಂಥ ಚಿತ್ರಗಳಿಗೆ ಎಷ್ಟೇ ಹಣಬೇಕಾದರೂ ಸಹಾಯ ಮಾಡಿ ಬೇಡವೆಂದು ಹೇಳುವುದಿಲ್ಲ. ಆದರೆ ಬರೀ ಯಾವುದೋ ಚಿತ್ರವನ್ನು ತಯಾರು ಮಾಡಿ ಬಡವರ ಹಣವನ್ನು ಪಡೆಯುತ್ತೇವೆಂದು ತೆಗೆಯುವ ಚಿತ್ರಕ್ಕೆ ಯಾವವಿಧವಾದ ಉತ್ತೇಜನವನ್ನು ಕೊಡಬೇಡಿ. ನಮ್ಮ ಸಂಸ್ಕೃತಿಗೆ ನಮ್ಮ ಸಾಹಿತ್ಯಕ್ಕೆ ಇತಿಹಾಸ ಪರಂಪರೆ ಇದೆ. ಇವುಗಳನ್ನು ಒಳಗೊಂಡಂತೆ ಈ ದೇಶವನ್ನು ಕಟ್ಟಿರತಕ್ಕಂಥ ಮಹಾಜನರು ಇದ್ದಾರೆ. ಅವರ ಬಗ್ಗೆ, ಕರ್ನಾಟಕದ ಇತಿಹಾಸದ ಬಗ್ಗೆ ಚಿತ್ರವನ್ನು ತೆಗೆದು ಜನರಿಗೆ ತಿಳುವಳಿಕೆಯನ್ನು ಕೊಡುವ, ಕನ್ನಡದ ಅಭಿಮಾನವನ್ನು ಉಳಿಸಿ ಸಾಹಿತ್ಯವನ್ನು ಉಳಿಸಿ ಬೆಳೆಸತಕ್ಕಥ ಚಿತ್ರಗಳಿಗೆ ಉತ್ತೇಜನವನ್ನು ಕೊಡಿ. ಕನ್ನಡದಲ್ಲಿ ಯಾರೋ ಚಿತ್ರವನ್ನು ತೆಗೆದರು ಎಂದು ಹೇಳಿ ಸಬ್‌ಸಿಡಿಯನ್ನು ಮತ್ತು ರಿಯಾಯತಿಯನ್ನು ಕೊಡುವುದರಿಂದ ಸಾಹಿತ್ಯವಾಗಲಿ, ಭಾಷೆಯಾಗಲಿ ಉದ್ಧಾರವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಅಬ್ಕಾರಿ ವಿಷಯದ ಬಗ್ಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತಿನದಿವಸ ಅಬ್ಕಾರಿ ತೆರಿಗೆಯನ್ನು ಹಾಕಬೇಕು, ಯಾರು ಶ್ರೀಮಂತರು ಕುಡಿಯತಕ್ಕಂಥ ಮದ್ಯ ಇರುತ್ತದೆಯೋ ಅದರಮೇಲೆ ಎಷ್ಟೇ ತೆರಿಗೆಯನ್ನು ಹಾಕಿದರೂ ಅವರು ಕುಡಿದೇ ಕುಡಿಯುತ್ತಾರೆ. ಇದರಿಂದ ಬರುವ ವರಮಾನವನ್ನು ಬಡವರಿಗೆ, ಹಳ್ಳಿಗಾಡಿನಲ್ಲಿ ವಾಸಮಾಡುವ ಜನರಿಗೆ ಮತ್ತು ಈ ದೇಶದ ಪ್ರಗತಿಯ ಕಾರ್ಯಕ್ರಮಗಳಿಗೆ ಉಪಯೋಗಿಸಬೇಕು. ಮದ್ಯವನ್ನು

ಕುಡಿಯುವ ಜನರಿಗೆ ಯಾವರೀತಿಯಾದ ರಿಯಾಯತಿಯನ್ನು ಕೊಡುವ ಕೆಲಸ ಮಾಡಬಾರದು. ತೆರಿಗೆಯನ್ನು ಹಾಕಿ ಹಣವನ್ನು ವಸೂಲುಮಾಡಿ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಖಾಲಿ ನಿವೇಶನಗಳ ಮೇಲೆ ತೆರಿಗೆ ಹಾಕಿದ್ದೀರಿ. ಖಾಲಿ ಜಮೀನನ್ನು ಒಂದು ಸೈಟು ಮಾಡುವುದೇ ಕೆಲವರ ಉದ್ದೇಶ ನೀವು ಬೇಕಾದರೆ ೨೫–೩೦ ವರ್ಷಗಳ ಸರ್ವೆ ಮಾಡಿಕೊಂಡು ಬನ್ನಿ ಶ್ರೀಮಂತರು, ಪಟ್ಟಣಗಳಲ್ಲಿ ವಾಸಿಸುವವರು ಯಾರಿದ್ದಾರೆ ಅವರೆಲ್ಲ ಪಟ್ಟಣಗಳಲ್ಲಿ ಖಾಲಿ ನಿವೇಶನಗಳನ್ನು ಪಡೆದಿದ್ದಾರೆ, ೨೫ ವರ್ಷವಾದರೂ ಕಟ್ಟಡ ಕಟ್ಟಿಲ್ಲ. ಉದಾಹರಣೆಗೆ ಮೈಸೂರು ನಗರವನ್ನು ಸರ್ವೆ ಮಾಡಿದರೆ ಒಂದು ಸಾವಿರಕ್ಕಿಂತ ಜಾಸ್ತಿ ಖಾಲಿ ನಿವೇಶನಗಳು ಸಿಗುತ್ತವೆ ಇದರ ಮೂಲೋದ್ದೇಶ ಇಷ್ಟೆ. ೨೦ ವರ್ಷಗಳ ಹಿಂದೆ ೫ ಸಾವಿರ ರೂಪಾಯಿಗಳಿಗೆ ಖಾಲಿ ನಿವೇಶನವನ್ನು ಪಡೆದಿದ್ದರೆ ಅದರ ಬೆಲೆ ಇವತ್ತು ಮೈಸೂರು ನಗರದಲ್ಲಿ ೨ ಲಕ್ಷ ರೂಪಾಯಿ ಆಗುತ್ತದೆ. ಮೈಸೂರಿನ ಜಯನಗರ ತೊಣಚಿಕೊಪ್ಪಲು ಮುಂತಾದ ಕಡೆ ೬೦×೪೦ ಅಳತೆಯ ನಿವೇಶನವನ್ನು ಹತ್ತು ವರ್ಷಗಳ ಹಿಂದೆ ೫ ಸಾವಿರ ರೂಪಾಯಿಗಳಿಗೆ ಕೊಂಡಿದ್ದರೆ ಇವತ್ತು ಅದು ೨ ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ಇದೇ ಉದ್ದೇಶವನ್ನು ಇಟ್ಟುಕೊಂಡು ಅನೇಕರು ಸೈಟುಗಳನ್ನು ಮಾಡಿದ್ದಾರೆ. ನೀವು ಏನು ತೆರಿಗೆ ಹಾಕುತ್ತೇವೆಂದು ಹೇಳುತ್ತಿದ್ದೀರಿ ಅದಕ್ಕೆ ಬದಲಾಗಿ ಒಂದು ಕಾನೂನು ಮಾಡಿ, ಯಾರು ಹತ್ತು ವರ್ಷಗಳಿಂದ ಮನೆ ಕಟ್ಟಿಲ್ಲ. ಯಾರು ೨-೩-೪–೫ ಸೈಟುಗಳನ್ನು ಇಟ್ಟುಕೊಂಡಿದ್ದಾರೆ ಅಂಥ ಸೈಟುಗಳನ್ನು ನಗರಾಭಿವೃದ್ಧಿ ಸಮಿತಿಯು ವಾಪಸ್ಸು ತೆಗೆದುಕೊಂಡು ಯಾರಿಗೆ ನಿವೇಶನ ಇಲ್ಲ, ಯಾರು ಬಡವರಿದ್ದಾರೆ ಅಂಥವರಿಗೆ ಹಂಚತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ ತೆರಿಗೆ ಹಾಕುವುದರಿಂದ ಸರ್ಕಾರಕ್ಕೆ ೨ ಕೋಟಿ ರೂಪಾಯಿ ಬರಬಹುದು. ಆ ಹಣ ಬರುವುದರಿಂದ ಏನಾದರೂ ಸಾಧನೆ ಮಾಡುತ್ತೇವೆಂದರೆ ಅದನ್ನು ನಾನು ಒಪ್ಪುವುದಿಲ್ಲ ಅಂಥವರಿಂದ ನಿವೇಶನಗಳನ್ನು ವಾಪಸ್ಸು ಪಡೆದು ನಿವೇಶನ ಇಲ್ಲದವರಿಗೆ ಹಂಚತಕ್ಕ ವ್ಯವಸ್ಥೆ ಮಾಡಬೇಕು, ಇಲ್ಲದಿದ್ದರೆ ಅವರು ೫ ಅಲ್ಲ ೧೦ ವರ್ಷವಾದರೂ ತೆರಿಗೆ ಕೊಡುತ್ತಾರೆ. ಅವರಿಗೆ ನಾಳೆ ನಿವೇಶನದ ಮೌಲ್ಯ ಏನಾಗುತ್ತದೆಂದು ಗೊತ್ತು, ಆದ್ದರಿಂದ ಖಾಲಿ ನಿವೇಶನಗಳು ಏನಿವೆ ಅವನ್ನು ಸರ್ಕಾರ ವಾಪಸ್ಸು ತೆಗೆದುಕೊಂಡು ಯಾರಿಗೆ ನಿವೇಶನ ಇಲ್ಲ, ಯಾರು ಬಡವರಿದ್ದಾರೆ ಅಂಥವರಿಗೆ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಬರೀ ತೆರಿಗೆ ವಿಧಿಸುವುದರಿಂದ ಪ್ರಯೋಜನವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸ್ಟೈಪೆಂಡರಿ ಪದವೀಧರರಿಗೆ ಇವತ್ತು ೫೦ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೇವೆಂದು ಹೇಳಿದ್ದೀರಿ. ಕೇವಲ ೫೦ ರೂಪಾಯಿಗಳನ್ನು ಜಾಸ್ತಿ ಮಾಡುವುದರಿಂದ ಆ ಜನರಿಗೆ ಜೀವನದಲ್ಲಿ ರಕ್ಷಣೆ ಕೊಟ್ಟ ಹಾಗೆ ಆಗುತ್ತದೆಂದು ನಾನು ನಂಬುವುದಿಲ್ಲ. ಸುಮಾರು ೧೦–೧೫ ವರ್ಷಗಳಿಂದ ಅವರು ದುಡಿಯುತ್ತಿದ್ದಾರೆ, ಮದುವೆಯಾಗಿದೆ, ಮಕ್ಕಳಿವೆ, ಮೊಮ್ಮಕ್ಕಳೂ ಇರಬಹುದು, ಅಂಥವರಿಗೆ ನೀವು ಸೆಕ್ಯೂರಿಟಿ ಆಫ್ ಜಾಬ್ ಅಂಡ್ ಸ್ಯಾಲರಿ ಕೊಡದೆ ಕೇವಲ ೫೦ ರೂಪಾಯಿಗಳನ್ನು ಜಾಸ್ತಿ ಮಾಡಿದ್ದರಿಂದ ಅವರಿಗೆ ರಕ್ಷಣೆ ಕೊಟ್ಟ ಹಾಗೆ ಆಗುವುದಿಲ್ಲ. ದಯವಿಟ್ಟು ಸರ್ಕಾರ ಮನಸ್ಸು ಮಾಡಿ ಸ್ಟೈಪೆಂಡರಿ ಪದವೀಧರರು ಏನಿದ್ದಾರೆ ಅವರ ಉದ್ಯೋಗದಲ್ಲಿ ರಕ್ಷಣೆ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ನಾಳೆ ಅವರು ನಿವೃತ್ತರಾದಾಗ ಅವರ ಮನೆಯಲ್ಲಿ ಒಂದು ಹೊತ್ತು ಅನ್ನವನ್ನಾದರೂ ತಿನ್ನತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಮಾತ್ರ ಸ್ಟೈಪೆಂಡರಿ ಪದವೀಧರರಿಗೆ ನ್ಯಾಯ ದೊರಕಿಸಿಕೊಟ್ಟ ಹಾಗೆ ಆಗುತ್ತದೆ ೫೦ ರೂಪಾಯಿ ಜಾಸ್ತಿ ಕೊಡುವುದರಿಂದ ಅವರಿಗೆ ಅನುಕೂಲವಾಗುತ್ತದೆಂದು ಅರ್ಥವಿಲ್ಲ. ಅವರಿಗೆ ಜಾಬ್ ಸೆಕ್ಯುರಿಟಿ ಕೊಡಬೇಕು, ರಕ್ಷಣೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಕೊನೆಯದಾಗಿ. ಸಾಲಗಳನ್ನು ಮನ್ನಾ ಮಾಡಿದ್ದೇವೆಂದು ಹೇಳಿದ್ದೀರಿ. ಹಸು ಕುರಿ, ಟ್ರ್ಯಾಕ್ಟರ್ ಇತ್ಯಾದಿ ಸಾಲಗಳನ್ನು ಮನ್ನಾ ಮಾಡಿರುವುದಾಗಿ ಹೇಳಿದ್ದೀರಿ. ಅದೇ ರೀತಿ ಇಲಿಗಳನ್ನು ಹಿಡಿಯುವುದಕ್ಕೆ ಕೊಟ್ಟ ೭.೯ ಲಕ್ಷ ರೂಪಾಯಿಗಳನ್ನು ಮನ್ನಾ ಮಾಡಿದ್ದೇವೆಂದು ಹೇಳಿದ್ದೀರಿ ಇದು ನನಗೆ ಅರ್ಥವಾಗಲಿಲ್ಲ. ಇಲಿ ಹಿಡಿಯುವುದಕ್ಕೆ ಯಾರು ಸಾಲ ತೆಗೆದುಕೊಂಡರು ಎಂದು ಗೊತ್ತಾಗಲಿಲ್ಲ. ಇಲಿ ಹಿಡಿಯುವುದಕ್ಕೆ ಸರ್ಕಾರದಿಂದ ಸಾಲ ತೆಗೆದುಕೊಂಡಿರಬೇಕಾದರೆ ಅವರು ಬಹಳ ಬುದ್ಧಿವಂತರು ಇರಬೇಕು. ನಾಳೆ ದಿವಸ ಇಲಿ ಹಿಡಿಯುವುದಕ್ಕೆ ಬೆಕ್ಕನ್ನು ಸಾಕುತ್ತೇವೆಂದು ಸಾಲ ಕೇಳಿದರೆ ಅದಕ್ಕೂ

ಸರ್ಕಾರ ಸಾಲ ಕೊಡುತ್ತದೋ ಏನೋ ಗೊತ್ತಿಲ್ಲ. ಸರ್ಕಾರ ಇಲಿ ಹಿಡಿಯುವುದಕ್ಕೆ ಕೊಟ್ಟಿರತಕ್ಕ ೭.೯ ಲಕ್ಷ ರೂಪಾಯಿಗಳನ್ನು ಸಾಲವನ್ನು ಮನ್ನಾ ಮಾಡಿದ್ದೇವೆಂದು ಹೇಳಿರುವುದು ಒಪ್ಪತಕ್ಕದ್ದಲ್ಲ. ಇನ್ನು ಮುಂದೆ ಇಂಥ ಸಾಲಗಳನ್ನು ಕೊಡಬೇಡಿ.

ಶ್ರೀ ಎಂ. ಮಲ್ಲಪ್ಪ —ಇಲಿ ಅಂದರೆ ಮನೆಯಲ್ಲಿರುವ ಇಲಿ ಅಲ್ಲ. ಹೊಲದಲ್ಲಿ ಇರುವ ಇಲಿ.

ಶ್ರೀ ವೇದಾಂತ ಹೆಮ್ಮಿಗೆ.—ಹೊಲದಲ್ಲಿ ಇಲಿ ಇರುತ್ತದೆ. ಅದು ಭತ್ತ ತಿನ್ನುತ್ತದೆ, ನಮ್ಮ ಕಡೆ ಅದಕ್ಕೆ ತೋಡ ಎಂದು ಕರೆಯುತ್ತಾರೆ. ದೊಡ್ಡ ಹೆಗ್ಗಣಗಳಿಗೆ ತೋಡ ಎಂದು ಕರೆಯುತ್ತಾರೆ. ರೈತರೇ ಅದನ್ನು ಹಿಡಿಯುತ್ತಾರೆ. ಸರ್ಕಾರದ ಹಣವನ್ನು ಅದಕ್ಕೆ ಯಾರೂ ಕೇಳುವುದಿಲ್ಲ. ಯಾರೋ ಬುದ್ಧಿವಂತರು ಇದಕ್ಕೆ ಸಾಲ ಕೇಳಿದ್ದಾರೆ. ದಯವಿಟ್ಟು ಈ ರೀತಿ ಇಲಿ ಹಿಡಿಯುವುದಕ್ಕೆ, ಬೆಕ್ಕು ಹಿಡಿಯುವುದಕ್ಕೆ ಸಾಲ ಕೊಟ್ಟು ನಂತರ ಮನ್ನಾ ಮಾಡುವ ವ್ಯವಸ್ಥೆ ಬೇಡ ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಆಯವ್ಯಯವನ್ನು ಏನು ಸಭೆಯ ಮುಂದೆ ಮಂಡಿಸಿದ್ದಾರೆ ಅದನ್ನು ಸಮರ್ಥನೆ ಮಾಡುತ್ತಾ ಕಳೆದ ಐದು ವರ್ಷಗಳಲ್ಲಿ ಪ್ರಗತಿಯ ಹೆಜ್ಜೆಯಲ್ಲಿ ರಾಜ್ಯದ ಜನರ ಪ್ರೀತಿ ಮತ್ತು ವಿಶ್ವಾಸವನ್ನು ತಾವೇನು ಸಂಪಾದನೆ ಮಾಡುವುದಕ್ಕೆ ಹೊರಟಿದ್ದೀರಿ ಅದೇ ರೀತಿ ಬರುವ ವರ್ಷ ಕೂಡ ಮಾಡತಕ್ಕ ಕಾರ್ಯ ಕ್ರಮಗಳನ್ನು ಜಾರಿಗೆ ತರಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ —ಈಗ ಯಾವ ರೀತಿ ನಡೆಯುತ್ತಿದೆಯೋ ಅದೇ ರೀತಿಯೇ ?

ಶ್ರೀ ವೇದಾಂತ ಹೆಮ್ಮಿಗೆ,—ನೀವು ಹೇಳುವುದನ್ನು ನೀವು ಹೇಳಿ, ನಾವು ಹೇಳುವುದನ್ನು ನಾವು ಹೇಳುತ್ತೇವೆ. ಜನ ತೀರ್ಮಾನ ಮಾಡುತ್ತಾರೆ.

ಅಧ್ಯಕ್ಷರು.— ನೀವು ಆ ಕಡೆ ನೋಡಬೇಡಿ.

ಶ್ರೀ ವೇದಾಂತ ಹೆಮ್ಮಿಗೆ.—ನಮ್ಮನ್ನು ಅವರು ಕುರುಡರು, ಕಿವುಡರು, ಮೂಗರು, ಬಂಡೆ ಎಂದು ಕರೆಯುತ್ತಾರೆ. ಜನ ಕಿವುಡರು ಮೂಗರು ಮತ್ತು ಬಂಡೆಯನ್ನು ಆರಿಸುತ್ತಾರೆ. ನೀವು ಎಷ್ಟೇ ಕೂಗಿದರೂ ಜನ ನಿಮ್ಮೊಬ್ಬರನ್ನು ಆರಿಸುತ್ತಾರಷ್ಟೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದು ನಿಮಿಷ........

ಅಧ್ಯಕ್ಷರು,—ನೀವು ಮಧ್ಯೆ ಏತಕ್ಕೆ ಮಾತನಾಡುತ್ತೀರಿ ? ಅವರು ಮುಕ್ತಾಯದ ಹಂತಕ್ಕೆ ಬಂದಿದ್ದಾರೆ. ಮುಗಿಸಲಿ ಬಿಡಿ.

ಶ್ರೀ ವೇದಾಂತ ಹೆಮ್ಮಿಗೆ.—ಕಳೆದ ವರ್ಷಗಳಲ್ಲಿ ನಾವು ಏನು ಸಾಧನೆಗಳನ್ನು

ಮಾಡಿದ್ದೇವೆ ಆ ಸಾಧನೆಗಳಿಗಿಂತ ಹೆಚ್ಚಾಗಿ ಸಾಧನೆ ಮಾಡಬೇಕು. ಈ ಆಯವ್ಯಯದಲ್ಲಿ ಜನರ ಹತ್ತಿರ ಹೋಗತಕ್ಕ ಕಾರ್ಯಕ್ರಮಗಳನ್ನು ಏನು ರೂಪಿಸಿಕೊಂಡಿದ್ದೇವೆ ಅದನ್ನು ಅನುಷ್ಠಾನಕ್ಕೆ ತಂದು ಜನರ ಮೆಚ್ಚುಗೆಯನ್ನು ಪಡೆಯಬೇಕು ಎಂದು ಹೇಳಿ ಈ ಆಯವ್ಯಯವನ್ನು ಮಂಡಿಸಿದ ಅರ್ಥಸಚಿವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು). -- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಓಟ್ ಆನ್ ಅಕೌಂಟ್ ಬದಲು ಬಜೆಟ್ ಪ್ರೆಸೆಂಟ್ ಮಾಡಿದ್ದರೆ ಚೆನ್ನಾಗಿತ್ತು. ಏಕೆಂದರೆ ಅವರು ಹೊಸದಾಗಿ ಏನೂ ಮಂತ್ರಿಮಂಡಲ ಸ್ಥಾಪನೆ ಮಾಡಲಿಲ್ಲ. ಯಾವ ಎಮರ್ಜೆನ್ಸಿ ಕೂಡ ಇಲ್ಲ. ಯಾವ ಎಲೆಕ್ಷನ್ನೂ ಇಲ್ಲ. ಯಾವುದೂ ಅಡ್ಡ ಬರಲಿಲ್ಲ. ಆದರೂ ಕೂಡ ಈ ಒಂದು ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಪ್ರೆಸೆಂಟ್ ಮಾಡಿದ್ದಾರೆ. ಇದರಲ್ಲಿ ಮೂರು ತಿಂಗಳಿಗೆ ಮಾತ್ರ ಖರ್ಚು ಮಾಡುವುದಕ್ಕೆ ಅಧಿಕಾರ ಪಡೆಯಬೇಕು ಎಂದು ಹೇಳಿದ್ದಾರೆ. ಆದರೆ ಇಲ್ಲಿ ನೋಡಿದರೆ ಪೂರ್ಣ ಪ್ರಮಾಣದ ಬಜೆಟ್ ಪ್ರೆಸೆಂಟ್ ಮಾಡಿದ್ದಾರೆ. ಇದನ್ನು ಪ್ರೆಸೆಂಟ್ ಮಾಡಿದಾಗ ನಾವು ನೋಡುವುದು ಏನು? ಎಷ್ಟು ಕಂದಾಯ ವಸೂಲು ಮಾಡಿದ್ದಾರೆ. ಎಷ್ಟು ಖರ್ಚು ಮಾಡುತ್ತಾರೆ, ನಮಗೆ ಮಾಡಿಕೊಡುವ ಅನುಕೂಲಗಳು ಏನು ಎಂಬುದನ್ನು ನಾವು ನೋಡುತ್ತೇವೆ. ಒಂದು ಕ್ಷೇತ್ರಕ್ಕೆ ನಾವು ಪ್ರತಿನಿಧಿಗಳಾಗಿ ಹೋದಾಗ ನೋಡಪ್ಪ ಇಷ್ಟು ವಸೂಲಿ ಇದ್ದರೂ ಡೆವಲಪ್‌ಮೆಂಟ್ ಸೈಡ್‌ನಲ್ಲಿ ಇಷ್ಟು ಕಾಲೇಜು ಕೊಟ್ಟಿದ್ದೇವೆ, ಇಷ್ಟು ಹೈಸ್ಕೂಲುಗಳನ್ನು ಕೊಟ್ಟಿದ್ದೇವೆ, ಇಷ್ಟು ವೆಟರ್ನರಿ ಹಾಸ್ಪಿಟಲ್

ಕೊಟ್ಟಿದ್ದೇವೆ. ಕರ್ನಾಟಕದ ಅಭಿವೃದ್ಧಿಗೆ ನಾವು ಅನುಕೂಲ ಮಾಡಿಕೊಟ್ಟಿದ್ದೇವೆ. ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದು ಬಿಟ್ಟು ಏನೋ ವಸೂಲು ಮಾಡಿದರು, ಸಂಬಳಕ್ಕೇ ಹಣ ಖರ್ಚಾಯಿತು, ನಮ್ಮ ಹತ್ತಿರ ಏನೂ ಇಲ್ಲ, ಫೈನಾನ್ಷಿಯಲ್ ಸ್ಟ್ರಿಂಜೆನ್ಸಿ ಮುಂದೆ ಕೂಡ ಇದೆ, ಇದೇ ಪರಿಸ್ಥಿತಿ ಕಂಟಿನ್ಯೂ ಆಗುತ್ತದೆ ಎಂದು ಹೇಳಿದರೆ ಏನೂ ಪ್ರಯೋಜನ ವಾಗುವುದಿಲ್ಲ. ಆದರಿಂದ ಉಪಯೋಗ ಕೂಡ ಆಗುವುದಿಲ್ಲ. ಆ ದೃಷ್ಟಿಯಿಂದ ರಿಸೋರ್ಸ್ ಮೊಬಿಲೈಸ್ ಮಾಡುವುದಕ್ಕೆ ನಿಜವಾಗಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆಯೋ ಎಂದರೆ 'ಇಲ್ಲ' ಎಂದು ಹೇಳ ಬೇಕಾಗುತ್ತದೆ. ಎಲ್ಲಿ ನೋಡಿದರೂ ವಿಪರೀತ ಟ್ಯಾಕ್ಸ್ ಇವೇಷನ್ ಆಗುತ್ತಿದೆ. ಎಕ್ಸೈಜ್‌ನವರು ಸೆಕೆಂಡ್ಸ್ ಎಂದು ಲೆಕ್ಕಹಾಕಿ ಕೋಟಿಗಟ್ಟಲೆ ಹಣ ಲೂಟಿ ಮಾಡುತ್ತಿದ್ದಾರೆ.

೩-೦೦ ಪಿ.ಎಂ.

ಅವರ ಮೇಲೆ ನಿಮ್ಮ ಕಂಟ್ರೋಲ್ ಇಲ್ಲ. ಹಾಗೆಯೇ ಅವರು ಬಿಟ್ಟಿದ್ದಾರೆ. ಮೊದಲಿನಿಂದಲೂ ಇವರ ಟ್ಯಾಕ್ಸನ್ನು ಇವೇಡ್ ಮಾಡಿಕೊಂಡೇ ಬರುತ್ತಿದ್ದಾರೆ. ಅದೇ ರೀತಿ ಕಮರ್ಷಿಯಲ್ ಟ್ಯಾಕ್ಸ್ ಕೊಡುವ ವಿಚಾರದಲ್ಲೂ ಕೂಡ ಎಲ್ಲಾ ಊರುಗಳಲ್ಲೂ ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಕೊಡದೆ ನುಂಗಿದ್ದಾರೆ. ಅವರ ಮೇಲೆ ಸರ್ಕಾರದ ಕಂಟ್ರೋಲ್ ಇಲ್ಲ. ಅಡ್ಮಿನಿಸ್ಟ್ರೇಷನ್ ಮೆಷನರಿ ಏನು ಇದೆ ಈ ಮೆಷನರಿ ಗಲಾಟೆ ಮಾಡಿ ವಸೂಲು ಮಾಡುವಂತಹ ಧೈರ್ಯ ಅವರಿಗೆ ಕುಗ್ಗಿ ಹೋಗಿದೆ, ಅವರಿಂದ ವಸೂಲು ಮಾಡುವುದನ್ನೇ ಬಿಟ್ಟು ಬಿಟ್ಟಿದ್ದಾರೆ. ತಾವು ಕೂಡ ನಮಗೆ ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೀರಿ. ಅದನ್ನು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ ಇನ್ನೂ ೩ ತಿಂಗಳಾಗಿದ್ದರೆ ಸ್ಪಷ್ಟವಾದ ವಿಚಾರ ಸಿಕ್ಕುತ್ತಿತ್ತು ಶ್ರೀಮಾನ್ ಖರ್ಗೆಯವರೂ ಕೂಡ ಬಹಳ ವಿವರವಾಗಿ ಹೇಳಿದರು. ಮೊದಲನೆ ಪುಟ ಐಟಂ ಸಂ. ೧ರಿಂದ ಪ್ರಾರಂಭವಾಗುತ್ತದೆ, ೪-೫ ಐಟಂ ಭೂ ಕಂದಾಯ, ೯ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಬೇಕಾಗಿತ್ತು ರೈತರು ಅವರ ಹತ್ತಿರ ಜಬರ್‌ದಸ್ತು ಮಾಡಿದರೆ ಹೆದರಿಕೊಳ್ಳುತ್ತಾರೆ. ಅವರಿಂದ ೧೫ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಅದೇ ಅಬ್ಕಾರಿ ತೆರಿಗೆ ೨೬೧ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಬೇಕಾಗಿದ್ದರೆ, ೧೮೦ ಕೋಟಿ ರೂಪಾಯಿಗಳನ್ನು ಮಾತ್ರ ವಸೂಲಿ ಮಾಡಿದ್ದಾರೆ; ಇನ್ನೂ ೮೦ ಕೋಟಿ ರೂಪಾಯಿ ಗಳನ್ನು ವಸೂಲಿ ಮಾಡುವುದಕ್ಕಾಗಿಲ್ಲ. ಅದೇ ರೀತಿ ಮಾರಾಟ ತೆರಿಗೆ ಅವರು ಬಡವರೇ, ಅವರಿಂದ ವಸೂಲಿ ಮಾಡುವುದಕ್ಕಾಗಲಿಲ್ಲ. ೨೯೬.೧೯ ಕೋಟಿ ರೂಪಾಯಿಗಳನ್ನು ಮಾತ್ರ ವಸೂಲಿ ಮಾಡಿದ್ದಾರೆ. ಅದೇ ರೀತಿ (ವಾಹನ ತೆರಿಗೆ ೬೩.೮೪ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಅದೇ ರೀತಿ ಸರಕು ಮತ್ತು ಪ್ರಯಾಣಿಕರ ಮೇಲೆ ತೆರಿಗೆ ಬಾಬ್ತು ೨೪.೪ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ, ವಿದ್ಯುಚ್ಛಕ್ತಿ ತೆರಿಗೆ ಶುಲ್ಕದ ಬಾಬ್ತು ೩೯.೨೪ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಇದಕ್ಕಿಂತ ಹೆಚ್ಚು ಹಣವನ್ನು ವಸೂಲಿ ಮಾಡುವುದಕ್ಕಾ ಗಲಿಲ್ಲ. ಇನ್ನೂ ೩ ತಿಂಗಳು ಇದೆ. ಇದು ಆದ ಮೇಲೆ ತೆರಿಗೆ ರಹಿತ ಆದಾಯಗಳಲ್ಲಿ ೨೨೪ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಬೇಕಾಗಿದ್ದರೆ, ವಸೂಲಿ ಮಾಡಿರುವಂತಹದ್ದು ೪.೬೦ ಕೋಟಿ ರೂಪಾಯಿಗಳು ಮಾತ್ರ. ಲಾಭಾಂಶ ೧೨೦ ಕೋಟಿ ರೂಪಾಯಿಗಳನ್ನು ವಸೂಲು ಮಾಡಬೇಕಾಗಿದ್ದರೆ ವಸೂಲಿ ಮಾಡಿರುವಂತಹದ್ದು ೫೧ ಕೋಟಿ ರೂಪಾಯಿಗಳು ಮಾತ್ರ. ಈ ರೀತಿ ಪ್ರತಿಯೊಂದನ್ನೂ ಕೂಡ ನೋಡಿದರೆ ವಸೂಲಿ ಮಾಡುವಂತಹ ಮನಸ್ಸು ಈ ಮೆಷನರಿಗೆ ಇಲ್ಲವೆಂದು ಅರ್ಥವಾಗುತ್ತದೆ. ಅವರ ಮನಸ್ಸಿನಲ್ಲಿ ಏನೋ ತಪ್ಪು ಮಾಡಿದ್ದಾರೆ. ಧೈರ್ಯವಾಗಿ ಅವರಿಂದ ವಸೂಲು ಮಾಡುವ ಹಾಗೆ ಕಾಣಿಸುತ್ತಿಲ್ಲ. ಯಾವಾಗಲೂ ನೋಡಿದರೂ ಫೈನಾನ್ಷಿಯಲ್ ಕ್ರೈಸಿಸ್ ಇದನ್ನು ನೋಡಿದರೆ ಸರ್ಕಾರ ಇದೆಯೋ ಎಂದು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ನಮಗೆ ಒಂದು ಕಾಮನ್‌ಸೆನ್ಸ್ ಇದೆ. ನಾವು ಕೊಟ್ಟಂತಹ ಚೆಕ್ಕು ಬೌನ್ಸ್ ಆದರೆ, ಅಂತಹ ವ್ಯಕ್ತಿಗೆ ಕ್ರೆಡಿಟ್ ವರ್ದಿನೆಸ್ ಇಲ್ಲ ಎಂದು ಹೇಳುತ್ತೇವೆ. ಆದರೆ ಸರ್ಕಾರದ ಸಾವಿರಾರು ಚೆಕ್ಕುಗಳು ಕ್ಯಾಷ್ ಆಗದೆ ಇವೆ. ೫೦ ರೂಪಾಯಿಗಳ ಚೆಕ್ಕು ಕೂಡ ಕ್ಯಾಷ್ ಆಗದೆ ಬೌನ್ಸ್ ಆಗುತ್ತಿವೆ. ಮಾನ ಮರ್ಯಾದೆ ಇಲ್ಲ. ಸಾಮಾನ್ಯ ಪ್ರಜೆ ೧೦೦ ರೂಪಾಯಿಗಳ ಸರ್ಕಾರಿ ಚೆಕ್ಕು ಇದ್ದರೂ ಟ್ರಜರಿ ಆಫೀಸರ್ ಹತ್ತಿರ ೪-೪ ಸಾರಿ ಸುತ್ತಬೇಕು. ಟ್ರಜರಿ ಆಫೀಸರನ್ನು ಕೇಳಿದರೆ, ಅದು ಸೀಕ್ರೆಟ್. ಅದನ್ನೆಲ್ಲಾ ಹೇಳುವುದಕ್ಕಾಗುವು ದಿಲ್ಲವೆಂದು ಹೇಳುತ್ತಾರೆ, ಟೆಲೆಕ್ಸ್ ಮೆಸೇಜ್ ಬಂದಿದೆ, ಆದರಿಂದಾಗಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ೨೫ ಸಾವಿರಕ್ಕಿಂತ ಮೇಲೆ ಚೆಕ್ಕು ಇದ್ದರೆ ಅಂತಹ ಚೆಕ್ಕು ಕ್ಯಾಷ್ ಆಗುವುದಿಲ್ಲ

ಎಂಬುದಾಗಿ ಆರ್ಡರ್ ಬರುತ್ತದೆ. ಈ ರೀತಿಯಾಗಿ ಸರ್ಕಾರದ ಕ್ರೆಡಿಟ್ ವರ್ದಿನೆಸ್ ಪೂರ್ತಿಯಾಗಿ ಸತ್ತು ಹೋಗಿದೆ, ಈ ರೀತಿಯಾದರೆ ನಮ್ಮ ಗತಿಯೇನು? ಇದಕ್ಕೆ ಕಾರಣವೇನೆಂದರೆ ಸರ್ಕಾರ ನಿಜವಾಗಿಯೂ ಯಾವುದಕ್ಕೆ ಖರ್ಚು ಮಾಡಬೇಕೋ ಅದಕ್ಕೆ ಖರ್ಚು ಮಾಡದೆ ಅನಾವಶ್ಯಕ ಖರ್ಚು ಜಾಸ್ತಿಯಾಗಿರುವುದೇ ಇದಕ್ಕೆ ಕಾರಣವಾಗಿದೆ. ಅಭಿವೃದ್ಧಿ ಕಾರ್ಯಗಳಿಗೆ ಸ್ವಲ್ಪವಾದರೂ ಖರ್ಚು ಮಾಡಿದ್ದಾರೆಂದು ನೋಡುವುದಾದರೆ, ಅದಕ್ಕಾಗಿ ಖರ್ಚು ಮಾಡಿರುವುದು ಇಲ್ಲವೇ ಇಲ್ಲ, ಸರ್ಕಾರದಲ್ಲಿ ದುಂದು ವೆಚ್ಚವಾಗುತ್ತಿದೆ. ಯಾವ ರೀತಿ ಅಧಿಕಾರಿಗಳು ಖರ್ಚು ಹಾಕುತ್ತಾರೆಂಬುದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ೨ ಅಂತಸ್ತಿನ ಕಟ್ಟಡ ಒಂದು ಇದೆ. ಮೂರನೆಯ ಮಹಡಿಯಿಂದ ಕೆಳಗೆ ಒಂದು ಪೆಟ್ಟಿಗೆಯನ್ನು ಇಳಿಸುವುದಕ್ಕೆ ೧೨೦ ರೂಪಾಯಿಗಳ ವೋಚರ್‌ನ್ನು ಹಾಕಿದ್ದಾರೆ. ಇಂತಹ ಉದಾಹರಣೆಗಳು ಬೇಕಾದಷ್ಟು ಇವೆ. ಅದನ್ನು ಆ ಕಟ್ಟಡದಿಂದ ಬೆಂಗಳೂರು ನಗರ ಬಸ್ ನಿಲ್ದಾಣಕ್ಕೆ ತೆಗೆದುಕೊಂಡು ಹೋಗುವುದಕ್ಕೆ ೬೦ ರೂಪಾಯಿಗಳ ಖರ್ಚನ್ನು ಹಾಕಿದ್ದಾರೆ ಅದರ ಬಗ್ಗೆ ಬರೆದು ಕೊಟ್ಟರೂ ಕೂಡ ಅದನ್ನು ನೋಡುವವರು ಯಾರೂ ಇಲ್ಲ. ಅದನ್ನು ಸಂಬಧಪಟ್ಟ ಮಂತ್ರಿಗಳಾದ ಡಾ. ಜೀವರಾಜ ಆಳ್ವರವರಿಗೆ ತಿಳಿಸೋಣವೆಂದರೆ, ಅವರು ಇಲ್ಲಿ ಇರುವುದೇ ಇಲ್ಲ ಅವರು ಊರಿನಲ್ಲಿ ಇದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಅವರು ಅಧಿವೇಶನ ಪ್ರಾರಂಭವಾದಾಗಿನಿಂದಲೂ ಸದನದಲ್ಲಿ ಇಲ್ಲವೇ ಇಲ್ಲ. ಅವರು ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ. ಇದರ ವಿವರಗಳನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ.

ಇಂತಹ ದುಂದು ವೆಚ್ಚವನ್ನು ಮಾಡಿದರೆ ಸರ್ಕಾರ ಹೇಗೆ ಉದ್ಧಾರವಾಗುತ್ತದೆ? ಒಂದು ರೀತಿಯದು ಅಲ್ಲ, ನೂರಾರು ರೀತಿಯದು. ಹೀಗೆಲ್ಲಾ ಮಾಡಿ ಸರ್ಕಾರದಲ್ಲಿ ದುಡ್ಡಿಲ್ಲ ಎಂದರೆ ಏನು ಮಾಡುವುದಕ್ಕಾಗುತ್ತದೆ? ಎಲ್ಲರೂ ಹೇಳಿದರು, ದಾಸಪ್ಪ ಅಂಡ್ ಕಂಪೆನಿಯದು ೧೫ ಕೋಟಿ ರೂಪಾಯಿ ಬರಬೇಕು ಎಕ್ಸೈಸ್ ಸಾಲ ವಸೂಲಿ ಮಾಡಬೇಕೆಂದು ಎಂದು ಇವರು ವಸೂಲಿ ಮಾಡುವುದಕ್ಕೆ ಹೋಗುವುದಿಲ್ಲ, ಅವರು ಏನು ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಎಕ್ಸೈಸ್ ಮಿನಿಸ್ಟರಿಗೆ ಎಕ್ಸೈಸ್ ಕಮಿಷನರ್‌ಗೆ ಇಲ್ಲದಿದ್ದರೆ ಇನ್ನು ಯಾರಿಗೆ ಎಷ್ಟು ಕೊಟ್ಟಿದ್ದಾರೋ ಏನೋ ನಮಗೆ ಗೊತ್ತಿಲ್ಲ. ಈ ರೀತಿಯಾದರೆ ಈ ಸರ್ಕಾರ ಹೇಗೆ ನಡೆಯುತ್ತದೆ? ನಮ್ಮ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಬ್ರೈಟ್ ಫ್ಯೂಚರ್ ಇದೆ ಎಂದು ಹೇಳುತ್ತಾರೆ. ೪ ವರ್ಷಗಳಿಂದ ಸತತವಾಗಿ ಬರಗಾಲ ಪರಿಸ್ಥಿತಿ ಇದ್ದರೂ ಕೂಡಾ ನಮ್ಮ ಪರಿಸ್ಥಿತಿ ಬಹಳ ಚೆನ್ನಾಗಿ ಇದೆ ಎಂದು ಹೇಳುತ್ತಾರೆ. ಆದರೆ ಅವರದೇ ಆದ ಆರ್ಥಿಕ ಸಮೀಕ್ಷೆ ೧೯೮೭-೮೮ರ ಪುಸ್ತಕದಲ್ಲಿ ಅವರು ಕೊಟ್ಟಿರುವ ವಿವರಗಳನ್ನು ನೋಡಿದರೆ ನಮ್ಮ ರಾಜ್ಯ ಯಾವ ದಿಕ್ಕಿನಲ್ಲಿ ಹೋಗುತ್ತಿದೆ. ಎಂಬುದು ಗೊತ್ತಾಗುತ್ತದೆ. ಅದರಲ್ಲಿ....

> "ಪ್ರಸಕ್ತ ವರ್ಷದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯು ತೀವ್ರ ಪ್ರತಿರೋಧವನ್ನು ಎದುರಿಸುತ್ತಿದೆ. ಉತ್ಪಾದನೆ, ಆದಾಯ, ಉದ್ಯೋಗ ಬೆಲೆಗಳು, ಬಂಡವಾಳಗಳು ಮತ್ತು ಮೂಲಭೂತ ಸಾಧನ ಸೌಲಭ್ಯಗಳ ದೃಷ್ಟಿಯಿಂದ ರಾಜ್ಯದ ಆರ್ಥಿಕ ನಿರ್ವಹಣೆಯು ನಿರೀಕ್ಷೆಗಿಂತಲೂ ಮಂದಗತಿಯಾಗಿದೆ. ಆದಾಯ, ಉತ್ಪಾದನೆ ಮತ್ತು ಉದ್ಯೋಗಗಳಿಗೆ ಅನಾವೃಷ್ಟಿ ಮತ್ತು ಅದರ ಪ್ರಭಾವಗಳ ಪ್ರಬಲ ಕಾರಣವಾದರೂ ಸಹ, ಏರಿರುತ್ತಿರುವ ಬೆಲೆಗಳು, ಬಂಡವಾಳ ಹೂಡಿಕೆಯಲ್ಲಿನ ನಿಧಾನ ರೀತಿಯಲ್ಲಿ ಬೆಳವಣಿಗೆ ಮತ್ತು ಮೂಲಭೂತ ಸಾಧನಗಳಲ್ಲಿನ ಏರುಪೇರುಗಳಿಗೆ ರಾಷ್ಟ್ರದಲ್ಲಿಯ ಆರ್ಥಿಕ ಶಕ್ತಿಗಳು ಮತ್ತು ರಾಷ್ಟ್ರದ ಹಣಕಾಸು ನಡುವೆ ನಡೆಯುಲಾದ ಪರಸ್ಪರ ಪ್ರಭಾವಗಳೂ ಕಾರಣವೆನ್ನಬಹುದು.

ಇನ್ನು ರೈತರ ಬಗ್ಗೆ ಹೇಳುತ್ತಾ ......

> "ಈ ವರ್ಷದಲ್ಲಿ ಕೃಷಿ ಬೆಲೆಗಳ ಉತ್ಪಾದನೆಯಲ್ಲಿ ಗಣನೀಯವಾದ ಇಳಿತವನ್ನು ಅಂದಾಜು ಮಾಡಲಾಗಿದೆ"

ನಮ್ಮ ರಾಜ್ಯದಲ್ಲಿ ನೂರಕ್ಕೆ ಎಂಭತ್ತು ಭಾಗ ರೈತರು, ರೈತ ಕಾರ್ಮಿಕರೇ ಇದ್ದಾರೆ. ಇವತ್ತು ಎಲ್ಲಾ ವಸ್ತುಗಳ ಬೆಲೆಗಳು ಗಗನಕ್ಕೆ ಹೋಗುತ್ತಿವೆ. ಆದರೆ ಕೃಷಿ ಬೆಲೆಗಳ ಉತ್ಪಾದನೆಯಲ್ಲಿ ಇಳಿತವನ್ನು ಕಾಣುತ್ತಿದ್ದೇವೆ. ಆದರೆ ಇದರ ಲಾಭ ಮಾತ್ರ ಕನ್‌ಸ್ಯೂಮರ್ಸ್‌ಗೆ ಮುಟ್ಟುತ್ತಿಲ್ಲ.

> ''ಮುಂಗಾರು ಬೆಳೆಗಳ ಉತ್ಪಾದನೆಯಲ್ಲಿ ಗಣನೀಯ ಇಳಿದಿದೆ. ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಬೇಸಿಗೆ ಬೆಳೆಗಳ ನಿರೀಕ್ಷೆಯೂ ಸಹಾ ಆಶಾದಾಯಕವಾಗಿಲ್ಲ''

ಇನ್ನು ಈ ಜಿಲ್ಲಾಪರಿಷತ್ತುಗಳು ಸ್ವಾಮಿ. ಇವು ನಮ್ಮ ಅನುಕೂಲಕ್ಕಾಗಿ ಬಂದಿವೆಯೋ, ಅನಾನುಕೂಲಕ್ಕಾಗಿ ಬಂದಿವೆಯೋ ಗೊತ್ತಿಲ್ಲ. ಇವು ಬಂದು ೯೬೦ ಕೋಟಿ ರೂಪಾಯಿಗಳನ್ನು ನುಂಗಿವೆ. ಹಳ್ಳಿಗಳಲ್ಲಿ ಅಣ್ಣತಮ್ಮಂದಿರಲ್ಲಿ ವ್ಯಾಜ್ಯ ತಂದಿವೆ. ಊರು ಊರುಗಳಲ್ಲಿ ಪಾರ್ಟಿ ತಂದು ಪೋಲೀಸ್ ಸಂಖ್ಯೆಯನ್ನು ಹೆಚ್ಚಿಸಲು ಸಹಾಯಕವಾಗಿವೆ. ಬೇಕಾದಷ್ಟು ಪೋಲೀಸರಿಗೆ ಕೆಲಸ ಸಿಕ್ಕಿತೇ ಹೊರತು ಇವುಗಳಿಂದ ಉದ್ಧಾರ ಏನೂ ಇಲ್ಲ.

> ''ಜಿಲ್ಲಾ ಪರಿಷತ್ತುಗಳು ವಿಶೇಷ ಆರ್ಥಿಕ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುತ್ತಿವೆ''

ಏನೂ ಮಾಡಿಲ್ಲ ಸ್ವಾಮಿ. ನಮ್ಮ ಕಡೆ ಲೈಟ್ ಕೂಡಾ ಕೊಟ್ಟಿಲ್ಲ. ಅವರ ಅಂಕಿಸಂಖ್ಯೆಗಳನ್ನು ಪರಿಶೀಲಿಸಿ ನೋಡಬೇಕು. ಪುಟ ೯ರಲ್ಲಿ ಈ ರೀತಿ ಇದೆ.

### ಆದಾಯ, ಉಳಿತಾಯ ಮತ್ತು ಬಂಡವಾಳ ಹೂಡಿಕೆ :

**ತಲಾವಾರು ಆದಾಯ :** ತಲಾವಾರು ಆದಾಯವು ೧೯೮೬—೮೭ರಲ್ಲಿದ್ದ ರೂ. ೭೯೮.೭೯ ರಿಂದ ೧೯೮೭—೮೮ರಲ್ಲಿ ರೂ. ೭೭೨.೪ಕ್ಕೆ ಇಳಿಯುವ ನಿರೀಕ್ಷೆ ಇದೆ.

ಎಂದರೆ ಮೈನಸ್ ೨೬.೫೫ ಆಯಿತು. ಈ ಬೆಳೆಗಳ ತಲಾವಾರು ಆದಾಯ ಜಾಸ್ತಿ ಆಗಿಲ್ಲ. ಅವು ಕಡಿಮೆ ಆಗಿವೆ. ಈಗ ನಾವು ಖರ್ಚು ಮಾಡಿರುವುದನ್ನು ನೋಡೋಣ. ಪುಟ ೧೪ರಲ್ಲಿ ಕರ್ನಾಟಕದಲ್ಲಿ ಬೆಲೆ ಪ್ರವೃತ್ತಿಗಳ ಪಕ್ಷಿನೋಟ'' ಕೊಟ್ಟಿದ್ದಾರೆ. ಇದರ ಪ್ರಕಾರ ಸೂಚ್ಯಂಕ ೧ರ ಪ್ರಕಾರ, ಕರ್ನಾಟಕದ ಕೃಷಿ ಸರಕುಗಳ ಸಗಟು ಬೆಲೆ ಸೂಚ್ಯಂಕ (೧೯೫೨—೫೩—೧೦೦)ರಲ್ಲಿ ಶೇಕಡಾ ವ್ಯತ್ಯಾಸ ಮೈನಸ್ ೮.೫೦. ಮತ್ತೆ ೨ನೇ ಸೂಚ್ಯಂಕದ ಪ್ರಕಾರ ''ಔದ್ಯಮಿಕ ಕಾರ್ಮಿಕರ, ಗ್ರಾಹಕ ಬೆಲೆ ಸೂಚ್ಯಂಕ (೧೯೬೦—೬೧—೧೦೦)'' ಪ್ರಕಾರ ಶೇಕಡಾವಾರು ವ್ಯತ್ಯಾಸ ೪.೬೩ ಇದ್ದದ್ದು ೧೨.೫೯ ಆಗಿದೆ. ಎಂದರೆ ಕೊಂಡುಕೊಳ್ಳುವ ಬೆಲೆ ಜಾಸ್ತಿ ಆಯಿತು. ಆದರೆ ರೈತರ ಬೆಲೆ ಮೈನಸ್ ಆಗಿದೆ. ಕೃಷಿ ಕಾರ್ಮಿಕರ ಗ್ರಾಹಕರ ಬೆಲೆ ಸೂಚ್ಯಂಕ ಪ್ರಕಾರ ಅಖಿಲ ಭಾರತದ ಶೇಕಡಾವಾರು ವ್ಯತ್ಯಾಸ ೧೩.೯೭ ಆಗಿದೆ.

ಮತ್ತೆ ನಮ್ಮ ರಾಜ್ಯ ಕಂದಾಯ ವಸೂಲು ಮಾಡುವ ವಿಷಯದಲ್ಲಿ ಎರಡನೆಯ ಸ್ಥಾನದಲ್ಲಿ ಇದೆ ತೆರಿಗೆ ಪ್ರಯತ್ನ (ತಲಾವಾರು ಆದಾಯದಲ್ಲಿ ರಾಜ್ಯದ ತಲಾವರು ತೆರಿಗೆ ಶೇಕಡಾವಾರು) ಆಂಧ್ರ ಪ್ರದೇಶದ್ದು ೧೭.೩೪ ಇದ್ದರೆ ಕರ್ನಾಟಕದ್ದು ೧೭.೦೬ ಇದೆ. ತಲವಾರು ಅಭಿವೃದ್ಧಿ ವೆಚ್ಚಗಳಲ್ಲಿ ನಾವು ಏಳನೇ ಸ್ಥಾನದಲ್ಲಿದ್ದೇವೆ. ವಸೂಲಿ ಮಾಡುವುದರಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ. ಅಭಿವೃದ್ಧಿ ಕೆಲಸಕಾರ್ಯಗಳಲ್ಲಿ ಖರ್ಚು ಮಾಡುವುದರಲ್ಲಿ ನಾವು ೭ನೇ ಸ್ಥಾನ. ಕರ್ನಾಟಕ ರಾಜ್ಯದ ಈ ಒಂದು ವ್ಯವಸ್ಥೆಯನ್ನು ನೋಡಿದಾಗ, ಇದನ್ನು ಯೋಚನೆ ಮಾಡಿ ನಾವೇನಾದರೂ ಅಭಿವೃದ್ಧಿ ಪಥದಲ್ಲಿದ್ದೇವೆಯೇ ಇಲ್ಲವೇ ಎಂಬುದರ ಬಗ್ಗೆ, ಅವರೇ ಹಿಂದೆ ಹೋಗುತ್ತಿದ್ದೇವೆಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ನಾವು ಹಿಂದೆ ಹೋಗುತ್ತಿದ್ದೇವೆ ಮುಂದೆ ಹೋಗುತ್ತಿಲ್ಲವೆಂದು ಆಯವ್ಯಯ ಪತ್ರದಲ್ಲಿ ಪ್ರಗತಿಪಥದಲ್ಲಿ ಇಲ್ಲದೇ ಇರುವುದು ಕಾಣುತ್ತದೆ. ರಾಜ್ಯಪಾಲರ ಭಾಷಣದಲ್ಲಿ ರೈತರ ಸಾಲಗಳ ಬಗ್ಗೆ ಹೇಳುತ್ತಾ, ರೈತರ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಯಾರು ದಿನಾಂಕ ೩೦-೬-೧೯೮೮ರೊಳಗೆ ಅಸಲನ್ನು ಕಟ್ಟುತ್ತಾರೆ ಅವರಿಗೆ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಇವರಿಗೆ ರಾಜ್ಯಪಾಲರ ಭಾಷಣದ ಬಗ್ಗೆ ಗೌರವ ಮತ್ತು ಬೆಲೆ ಇದೆಯೋ ಏನೋ ಗೊತ್ತಿಲ್ಲ. ರಾಜ್ಯಪಾಲರೇ ಭಾಷಣವನ್ನು ತಯಾರು ಮಾಡಿಕೊಂಡು ಬಂದಿದ್ದಾರೋ ಏನೋ ಗೊತ್ತಿಲ್ಲ. ಇವರು ಈಗ ಏನು ಹೇಳುತ್ತಾರೆಂದರೆ ದಿನಾಂಕ ೩೦-೩-೧೯೮೮ರೊಳಗೆ ಯಾರು ಅಸಲನ್ನು ಕಟ್ಟುತ್ತಾರೆ ಅಂತಹವರಿಗೆ ಮಾತ್ರ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ

ರೈತರು ಸಾಲವನ್ನು ಕಟ್ಟುವ ಅವಧಿಯನ್ನು ೩೦—೬—೧೯೮೮ಕ್ಕೆ ದಯಾವಿಟ್ಟು ಎಕ್ಸ್‌ಟೆಂಡ್ ಮಾಡಬೇಕು. ನೀವು ರೈತರಿಗೆ ಕೊಟ್ಟಿರುವುದು ಏನೂ ಇಲ್ಲ. ನಾನ್ ಕಾಂಗ್ರೆಸ್ ಗೌರ್ನ್‌ಮೆಂಟ್ ಇರತಕ್ಕ ಹರಿಯಾಣದಲ್ಲಿ ರೈತರ ಸಾಲಗಳನ್ನು ಪೂರ್ತಿ ರದ್ದು ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ನೀವು ಕೊಟ್ಟಿರುವುದನ್ನು ಕೂಡ ಕಿತ್ತುಕೊಳ್ಳುತ್ತಿದ್ದೀರಿ, ರಾಜ್ಯಪಾಲರ ಭಾಷಣದಲ್ಲಿ ರೂರಲ್ ಹೌಸಿಂಗ್ ಕಾರ್ಪೊರೇಷನ್ ಮಾಡುತ್ತೇವೆಂದು ಹೇಳಿ, ಈಗ ಅದನ್ನು ಕೈಬಿಟ್ಟಿದ್ದಾರೆ. ಹರಿಜನ ಕೇರಿಗಳಲ್ಲಿ ರಸ್ತೆಗಳನ್ನು ಮಾಡುತ್ತೇವೆ, ಲೈಟುಗಳನ್ನು ಹಾಕುತ್ತೇವೆಂದು ಹೇಳಿದ್ದೀರಿ. ನೀವು ರಾಜ್ಯಪಾಲರ ಭಾಷಣವನ್ನು ಧಿಕ್ಕರಿಸಿದ್ದೀರಿ. ನಿಜವಾಗಿಯೂ ರಾಜ್ಯಪಾಲರ ಭಾಷಣಕ್ಕೆ ಏನು ಗೌರವ ಕೊಡಬೇಕಾಗಿತ್ತೊ, ಅದನ್ನು ಕೊಟ್ಟಿಲ್ಲ. ಪಾಲಿಸಿ ಸ್ಟೇಟ್‌ಮೆಂಟ್ ಅದನ್ನು ಸಹ ಮರೆತಿದ್ದೀರಿ. ಇದು ನಡೆಯಬಾರದೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಹೊಸದಾಗಿ ಯಾವುದೇ ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿಲ್ಲ. ಸ್ಟೇಟ್‌ಮೆಂಟ್ ಆಫ್ ಫ್ಯಾಕ್ಟ್ಸ್‌ನಲ್ಲಿ ದೆಪ್ತ್ ಇಲ್ಲ. ಕರ್ನಾಟಕ ರಾಜ್ಯ ಇಂದು ಪ್ರಗತಿಪಥದಲ್ಲಿಲ್ಲ. ಪ್ರಗತಿಪಥದಲ್ಲಿದ್ದರೆ ವೋಟ್ ಆನ್ ಅಕೌಂಟ್ ತೆಗೆದುಕೊಳ್ಳುತ್ತಿರಲಿಲ್ಲ. ಡೆಕ್ಕನ್ ಹೆರಾಲ್ಡ್ ಎಡಿಟೋರಿಯಲ್‌ನಲ್ಲಿ ಈ ರೀತಿ ಬರೆದಿದ್ದಾರೆ.

> "NOTHING NEW"-The Karnataka Budget for 1988-89 comes at the end of a year which saw a reduction in the State's Plan outlay by as much as Rs. 150 crore. The reduced outlay in 1987-88, it now appears, was p rtly due to lower revenue (tax and non-tax) receipts and partly due to less-than-budgeted loan receipts from the Central Government. A pertinent question now is how prevent the same fate from befalling the agreed plan outlay of Rs. 900 crore for 1988-89, which, incidentally, in real terms is smaller the original estimates for 1987-88."

ನಾವು ಹೋಗುತ್ತಾ ಹೋಗುತ್ತಾ ಎರಡೂವರೆ ಪರ್ಸೆಂಟ್ ಇನ್‌ಫ್ಲೇಷನ್ ಎಂದು ಇಟ್ಟುಕೊಂಡರೆ ೧೫೦ ಕೋಟಿ ರೂಪಾಯಿಗಳು ಕಡಿಮೆಯಾದರೆ ಕರ್ನಾಟಕ ರಾಜ್ಯ ಪ್ರಗತಿಯನ್ನು ಏನು ಎಕ್ಸ್‌ಪೆಕ್ಟ್ ಮಾಡುವುದಕ್ಕೆ ಆಗುತ್ತದೆ ? ಪ್ರಜಾವಾಣಿ ಎಡಿಟೋರಿಯಲ್ ಕಾಲಂನಲ್ಲಿ ಈ ರೀತಿ ಬಂದಿದೆ.

'ಯಥಾಸ್ಥಿತಿ ವಿಚಾರಧಾರೆ'

> "ಹಣಕಾಸು ಸಚಿವರೂ ಆಗಿರುವ ರಾಜ್ಯದ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆ ಯವರು ೧೯೮೮-೮೯ರ ಆಯವ್ಯಯ ಪತ್ರವನ್ನು ರೂಪಿಸುವಾಗ ಆರ್ಥಿಕ ಆರೋಗ್ಯ ಕ್ಕಿಂಥ ರಾಜಕೀಯ ಸ್ಥಿತಿಗಳಿಗೇ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿರುವಂತಿದೆ. ಎಂದು ಇದೆ.

ಇನ್ನು ರೈತರ ಬಗ್ಗೆ ವಿಚಾರ ಮಾಡೋಣ. ಜನತೆಯ ಸೇವೆಯಲ್ಲಿ ಐದು ವರ್ಷಗಳು ಎಂದು ಒಂದು ಪುಸ್ತಕವನ್ನು ಪಬ್ಲಿಷ್ ಮಾಡಿದ್ದಾರೆ. ಅದರಲ್ಲಿ ನಮ್ಮ ರೈತರ ಬಗ್ಗೆ ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ.

> "ವ್ಯವಸಾಯವಿಲ್ಲದೆ ಜನ ಉಳಿಯುವಂತಿಲ್ಲ. ರೈತ ನಾಡಿನ ಬೆನ್ನೆಲುಬು. ಸರ್ಕಾರ ರೈತರಿಗೆ ತನ್ನ ಶಕ್ತಿಮೀರಿ ನೆರವು ಕೊಡಲು ಪ್ರಯತ್ನಿಸುತ್ತಿದೆ. ನಿಜವಾಗಿಯೂ ಇದು ನೆರವು ಅಲ್ಲ. ರೈತರಿಗೆ ಎಷ್ಟು ಸೌಲಭ್ಯಗಳನ್ನು ಒದಗಿಸಿದರೂ ಸಾಲದು ಎನ್ನುವ ಅರಿವು ಸರ್ಕಾರಕ್ಕೆ ಇದೆ. ನಾಲ್ಕು ವರ್ಷಕ್ಕೆ ಮೀರಿದ ಅವಧಿಯ ಕ್ಷಾಮದಿಂದ ತೀರ ಕಷ್ಟಪಟ್ಟವರು ಎಂದರೆ ರೈತರು."

ರೈತರ ಬಗ್ಗೆ ನಿಜವಾಗಿಯೂ ಒಳ್ಳೆಯ ಮಾತನ್ನು ಹೇಳಿದ್ದಾರೆ. ರೈತರಿಗೆ ಆಯವ್ಯಯದಲ್ಲಿ ಏನು ಕೊಟ್ಟಿದ್ದಾರೆಂದರೆ '0' ಜೀರೋ ಕೊಟ್ಟಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಮಿಸ್ಟೇಕ್ ಆಗಿ ಏನೋ

ಸ್ವಲ್ಪ ಕೊಡುತ್ತೇವೆಂದು ಹೇಳಿದರು. ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದರು.

ಇದನ್ನು ಒಂದು ಕೈಯಲ್ಲಿ ಕೊಟ್ಟು ಇನ್ನೊಂದು ಕೈಯಲ್ಲಿ ಕಿತ್ತುಕೊಂಡಿದ್ದಾರೆ. ಅರ್ಥಪೂರ್ಣ ಆಡಳಿತಕ್ಕೆ ಒಂದು ಗುರಿ ಬೇಕು ಎಂದು ಹೇಳಿದ್ದಾರೆ.

> ''...ಅರ್ಥಪೂರ್ಣ ಆಡಳಿತಕ್ಕೆ ಒಂದು ಗುರಿ ಬೇಕು. ಒಂದು ಯೋಜನೆ ಬೇಕು ಮತ್ತು ಯೋಜನೆಯು ಕಾರ್ಯಗತವಾಗಬೇಕು. ಆಡಳಿತ ಮಾಡುವ ಎಲ್ಲಾ ಕೆಲಸದ ಹಿಂದೆ ಒಂದು ಗುರಿ ಇರಬೇಕು'' ಎಂದು ಹೇಳಿದ್ದಾರೆ. ನಾನು ಹೇಳುವುದು ಏನೆಂದರೆ, ಈ ಸರ್ಕಾರಕ್ಕೆ ಒಂದು ಗುರಿ ಇದೆಯೇ ? ಅರ್ಥಪೂರ್ಣವಾದ ವ್ಯವಸ್ಥೆ ಏನಾದರೂ ಮಾಡಿದ್ದೀರಾ ? ನಮ್ಮ ಕರ್ನಾಟಕ ಯಾವರೀತಿ ಹೋದರೆ ನಿಜವಾಗಿ ಅರ್ಥಪೂರ್ಣವಾಗಿ ಮುಂದಕ್ಕೆ ಹೋಗುತ್ತದೆ ಎಂದು ಯೋಚನೆ ಮಾಡಿದ್ದೀರಾ ಎಂದರೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಂತಹ ಯೋಚನೆಯನ್ನೇ ನೀವು ಮಾಡಿಲ್ಲ. ಹೇಳುವುದು ಒಂದು, ಮಾಡುವುದು ಒಂದು. ಇಂತಹ ಒಂದು ಪರಿಸ್ಥಿತಿ ಆಗಿದೆ. ಆಮೇಲೆ ಅವರು ಹೇಳುತ್ತಾರೆ ಸರ್ಕಾರ ಇದುವರೆಗೆ ೨೭ ಕೆಲಸಗಳಿಗೆ ಒಪ್ಪಿಗೆ ಕೊಟ್ಟಿದೆ. ಹಳ್ಳಿಗಳ ಎಲ್ಲೆಯೊಳಗೆ ಜಲ್ಲಿ ರಸ್ತೆಗಳನ್ನು ಮಾಡಲು ಹೊಸದೊಂದು ಯೋಜನೆಯನ್ನು ೧೯೮೬-೮೭ರಲ್ಲಿ ಪ್ರಾರಂಭ ಮಾಡಲಾಯಿತು. ಈ ಯೋಜನೆಯಲ್ಲಿ ೧೭೫ ಕೆಲಸಗಳಿಗೆ ಒಪ್ಪಿಗೆ ಕೊಡಲಾಗಿದೆ''.

ನಾನು ಹೇಳುವುದೇನೆಂದರೆ ಇದೆಲ್ಲವೂ ಕೂಡ ಪೇಪರ್‌ನಲ್ಲಿ ಇವೆ. ಇವರು ಹೇಳುವುದು ಒಂದಾದರೆ ಮಾಡುವುದು ಇನ್ನೊಂದು. ಹೇಳುವುದು ಮಾಡುವುದಕ್ಕೋಸ್ಕರ ಅಲ್ಲ. ಸುಮ್ಮನೆ ನಮ್ಮ ರೈತರನ್ನು ವಂಚನೆ ಮಾಡುವುದಕ್ಕೆ ಪ್ರಯತ್ನ ಇದೆಯೇ ಹೊರತು ಅವರಿಗೆ ಅನುಕೂಲ ಮಾಡಬೇಕು ಎಂದು ಯೋಜನೆ ಇಲ್ಲ, ಆದ್ದರಿಂದ ಇದೇನು ಬಜೆಟ್ ಇದೆ, ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಇದು ಸರಿಯಲ್ಲ. ಇನ್ನೊಂದು ಕೇಂದ್ರ ಸರ್ಕಾರದ ಬಗ್ಗೆ ಸ್ಪಷ್ಟವಾಗಿ ಸರ್ಕಾರಿಯಾ ಕಮೀಷನ್ ಮತ್ತು ಎಲ್ಲಾ ವಿಷಯಗಳಲ್ಲೂ ಸ್ಪಷ್ಟವಾಗಿ ಪ್ರಸ್ತಾಪ ಮಾಡಿದ್ದಾರೆ ಅದನ್ನು ನಾನು ಓದುತ್ತೇನೆ. ಏಕೆಂದರೆ ಕೇಂದ್ರ ಸರ್ಕಾರದವರು ನಮಗೆ ಎಷ್ಟು ಕೊಡಬೇಕಿತ್ತು ಮತ್ತು ಕೊಟ್ಟಿರುವುದು ಎಷ್ಟು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ೨ನೇ ಪುಟದಲ್ಲಿದೆ. 'ಕೇಂದ್ರ ಸರ್ಕಾರದ ಸಹಾಯಧನ ಜಮಾ' ಇದರಲ್ಲಿ ಕೊಡಬೇಕಾಗಿರುವುದು ಅಂದಾಜು ೨೬೪ ಕೋಟಿ ೬೬ ಲಕ್ಷ ೧೪ ಸಾವಿರ, ಕೊಟ್ಟಿರುವುದು ೧೧೩ ಕೋಟಿ ೮೯ ಲಕ್ಷ ೬೦ ಸಾವಿರ. ಇದೇ ರೀತಿ ಕೇಂದ್ರ ಸರ್ಕಾರದಿಂದ ಒಟ್ಟು ಬರಬೇಕಾಗಿರುವುದು ಇನ್ನು ಎಷ್ಟು ಎಂದರೆ ೫೮೭ ಕೋಟಿ, ಆದರೆ ಕೊಟ್ಟಿರುವುದು ೨೮೯ ಕೋಟಿ ಇದು ಎಲ್ಲಾ ಕಾಂಗ್ರೆಸ್ಸೇತರ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಮಾಡುತ್ತಿರುವ ಒಂದು ಅನ್ಯಾಯ ನಮಗೆ ಗೊತ್ತು ಪ್ರತಿಸಲವೂ ಕೂಡ, ಅವರು ಅಡ್ಮಿನಿಸ್ಟ್ರೇಟಿವ್ ಪ್ರೈಸ್ ಎಂದು ಪೆಟ್ರೋಲ್ ಬೆಲೆಯನ್ನು ಹೆಚ್ಚಿಸಿದರು. ಎಕ್ಸೈಸ್ ಎಂದು ಹೇಳಿದ್ದರೆ ನಮ್ಮ ಪಾಲು ನಮಗೆ ಬರುತ್ತಿತ್ತು. ಆದರೆ ಅವರು ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ಕೊಡುವಾಗ. ಅದನ್ನು ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳು ಮುಖ್ಯವಾಗಿ ಕಾಂಗ್ರೆಸ್ಸೇತರ ರಾಜ್ಯಗಳ ಮುಖ್ಯಮಂತ್ರಿಗಳು, ಕಾಂಗ್ರೆಸ್ ಮುಖ್ಯ ಮಂತ್ರಿಗಳು ಕೂಡ ಏಕೆಂದರೆ, ಶ್ರೀ ಎಸ್.ಬಿ. ಚವಾಣರು ಕೂಡ ಕೇಂದ್ರದ ನೀತಿ ಏನಿದೆ ಅದನ್ನು ಪ್ರತಿಭಟನೆ ಮಾಡಿದ್ದಾರೆ. ಕೇಂದ್ರ ಪ್ರತಿಸಲವೂ ಕೂಡ ನಮಗೆ ಕೊಡಬೇಕಾದುದ್ದನ್ನು ಮೊಟಕು ಮಾಡಲು ಪ್ರಯತ್ನ ಮಾಡುತ್ತಿದೆ. ಇದು ತುಂಬಾ ಅನ್ಯಾಯ ಎಂದು ಕೇರಳ ರಾಜ್ಯದ ಮುಖ್ಯಮಂತ್ರಿ ಶ್ರೀ ಕರುಣಾಕರನ್ ಕೂಡ ಹೇಳಿದ್ದಾರೆ ಆದರೆ ಅವರು ಅನ್ಯಾಯದ ನೀತಿಯನ್ನು ಅನುಸರಿಸಿಕೊಂಡೇ ಹೋಗುತ್ತಿದ್ದಾರೆ.

ಮಾನ್ಯ ವೇದಾಂತ ಹೆಮ್ಮಿಗೆಯವರು ಹೇಳಿದಂತೆ. ಕರ್ನಾಟಕಕ್ಕೆ ಎಷ್ಟು ಪಾಲು ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ. ಉತ್ತರ ಪ್ರದೇಶ ಮತ್ತಿತರ ಕಡೆ ಕೊಟ್ಟಿದ್ದಾರೆ. ಇದರ ಬಗ್ಗೆ ನಾವು ಸಂತೋಷಪಡಬೇಕು. ಕೇಂದ್ರ ಈ ರೀತಿ ನಡೆದುಕೊಳ್ಳುತ್ತಿರುವುದು ಸರಿಯಲ್ಲ ಎಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಬಾರಿ ಕಣ್ತೆರೆದು ಹೇಳಿದ್ದಾರೆ ಸುಮಾರು ೧೨ ಪುಟಗಳಲ್ಲಿ ಕೇಂದ್ರ ಮಾಡಿರುವ ಅನ್ಯಾಯವನ್ನು ಹೇಳಿದ್ದಾರೆ. ಇದು ಒಂದು ರಾಜಕೀಯ ಪ್ರಶ್ನೆ ಅಲ್ಲ. ಇದು ಕರ್ನಾಟಕ ರಾಜ್ಯದ ಪ್ರಶ್ನೆ. ನಮ್ಮ ಕಾಂಗ್ರೆಸ್ ಸ್ನೇಹಿತರೂ, ನಾವು ಒಗ್ಗಟ್ಟಾಗಿ, ನ್ಯಾಯವಾಗಿ

ಕೇಂದ್ರದಿಂದ ಬರಬೇಕಾದ ಬೇಡಿಕೆಗಳು ಏನಿವೆಯೋ ಅವುಗಳನ್ನು ಕೊಡಬೇಕೆಂದು ಒತ್ತಾಯ ಮಾಡೋಣ. ಇನ್ನು ಬೆಲೆಗಳ ಬಗ್ಗೆ ಯೋಚನೆ ಮಾಡುವಾಗ, ದಿನವಿಡೀ ಬೆಲೆಗಳು ತುಂಬಾ ಜಾಸ್ತಿಯಾಗುತ್ತಿವೆ. ನಾನು ಇಲ್ಲಿ ಒಂದು ವಿಷಯವನ್ನು ಹೇಳಿದರೆ ಅನೇನೂ ಅಸಮಂಜಸವಾಗುವುದಿಲ್ಲ. ರಷ್ಯಾದಲ್ಲಿ ೧೯೩೫ರಲ್ಲಿ ಏನು ಬೆಲೆಗಳು ಇತ್ತು, ಈಗಲೂ ಅದೇ ಬೆಲೆಗಳು ಇವೆ. ಆಹಾರ ಸಿಮೆಂಟ್ ಮುಂತಾದ ಜನಗಳಿಗೆ ಅಗತ್ಯವಾಗಿ ಬೇಕಾದ ವಸ್ತುಗಳು ದಿನವಿಡೀ ಹೆಚ್ಚಾಗುತ್ತಿವೆ. ವರ್ಷೇ ವರ್ಷೇ ಸಿಮೆಂಟ್ ಬೆಲೆ ಜಾಸ್ತಿಯಾಗುತ್ತಿದೆ. ಒಬ್ಬ ಬಡವ ಮನೆ ಕಟ್ಟಿಕೊಳ್ಳಬೇಕೆಂದರೆ ಸಾಧ್ಯವಾಗುತ್ತಿಲ್ಲ. ಈ ಬೆಲೆ ಏರಿಕೆಯ ಬಗ್ಗೆ ಒಂದು ಕಂಟ್ರೋಲ್ ಇಲ್ಲ, ನಮ್ಮ ಸರ್ಕಾರ ಈ ಬೆಲೆಗಳ ಬಗ್ಗೆ ಏನಾದರೂ ಕಂಟ್ರೋಲ್ ಇಡಬೇಕು, ಅದನ್ನು ಮಾಡುತ್ತಾ ಇಲ್ಲ. ನಮಗೆ ಅನುಕೂಲ ಮಾಡಿಕೊಟ್ಟಿರುವುದು ಏನು ಎಂದರೆ, ಈ ಸಾರಿ ಅರ್ಬನ್ ಪ್ರದೇಶದ ಬಡವರಿಗೆ ಹಸಿರು ಕಾರ್ಡ್ ಕೊಡುವುದಾಗಿ ಹೇಳಿದ್ದಾರೆ. ಇನ್ನೊಂದು ಕೊಡಬೇಕಾಗಿತ್ತು, ಅದನ್ನು ಮರೆತಿದ್ದಾರೆ. ಸಬ್ಸಿಡೈಸ್ಡ್ ಕ್ಲಾತ್ ಕೊಡಬೇಕಾಗಿತ್ತು. ಇದನ್ನು, ಇಲ್ಲಿ ಅಳವಡಿಸುತ್ತಾರೋ ಇಲ್ಲವೋ ಅನುಮಾನ. ಹಸಿರು ಕಾರ್ಡ್ ಹಳ್ಳಿಗಳಲ್ಲಿರುವಂತೆ ಪಟ್ಟಣಗಳಿಗೂ ವಿಸ್ತರಿಸಬೇಕು. ಹಸಿರು ಕಾರ್ಡ್ ಸರ್ವೆ ಮಾಡುವಾಗ ಯಾರೋ ಕೆಲವರು ಲಂಚರೂಪವಾಗಿ ತೆಗೆದುಕೊಳ್ಳುವವರು ಬಡವರನ್ನು ಬಿಟ್ಟು, ದೊಡ್ಡ ದೊಡ್ಡ ಸ್ಥಿತಿವಂತರನ್ನು ಈ ಹಸಿರು ಕಾರ್ಡ್ ಲಿಸ್ಟ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದು ತಪ್ಪಬೇಕು. ಹಸಿರು ಕಾರ್ಡ್‌ನ್ನು ಈಗಲೂ ಹಳ್ಳಿಗಳಲ್ಲಿ ಹೆಚ್ಚಿಗೆ ಕೊಟ್ಟಿಲ್ಲ. ಈ ಸ್ಕೀಮ್ ಜಾರಿಗೆ ಬಂದಾಗಿನಿಂದ, ಹಳ್ಳಿಗಳಲ್ಲಿ ಸರಿಯಾಗಿ ಕೊಡುತ್ತಿಲ್ಲ. ಆದ್ದರಿಂದ ಈಗಲಾದರೂ ಸರಿಯಾಗಿ ಹಸಿರು ಕಾರ್ಡ್ ಕೊಡಿ ಎಂದು ಕೇಳುತ್ತಿದ್ದೇನೆ. ಇನ್ನು ಖಾಲಿ ಸೈಟುಗಳಿಗೆ, ೫೦ ಮೀಟರಿಗಿಂತ ಜಾಸ್ತಿ ಇರುವವರಿಗೆ ತೆರಿಗೆ ಹಾಕುತ್ತೇವೆಂದು ಹೇಳಿದ್ದಾಗ, ೨೧ ಕೋಟಿ ಈ ತೆರಿಗೆ ಹಾಕಿದ್ದಾರೆ. ಮಾನ್ಯ ಬೊಮ್ಮಾಯಿಯವರು ಇವರ ಬಗ್ಗೆ ಯೋಚನೆ ಮಾಡಬೇಕು. ಈ ೫೦ ಮೀಟರ್ ಎಂಬುದನ್ನು ಜಾಸ್ತಿ ಮಾಡಬೇಕು. ೩೦ × ೪೦ರ ಸೈಟ್‌ನಲ್ಲಿ ಒಬ್ಬ ಬಡವ ಮನೆ ಕಟ್ಟಿಕೊಳ್ಳುವುದಕ್ಕೆ ಶಕ್ತಿ ಇಲ್ಲದೇ ಹಾಗೆಯೇ ಇಟ್ಟುಕೊಂಡಿರುತ್ತಾನೆ. ಇವರ ಕಣ್ಣು, ಆ ಬಡವನ ಮೇಲೆ ಬಿದ್ದಿದೆ. ಇವರು ಈಗ ಕಾರ್ಪೊರೇಷನ್ ಚುನಾವಣೆ ಬಂತು ಎಂದು, ನಗರಗಳಲ್ಲೂ ಹಸಿರು ಕಾರ್ಡ್ ಕೊಟ್ಟರೆ ಜನರ ಒಲವು ಬರುತ್ತದೆಂದು ಮಾಡಿದ್ದಾರೆ. ಈ ರೀತಿಯ ಅನುಕೂಲವನ್ನು ಇನ್ನೊಂದು ಕೈಯಲ್ಲಿ ಕಿತ್ತುಕೊಂಡಿದ್ದಾರೆ. ಈ ೩೦ × ೪೦ರ ಸೈಟಿಗೆ ಮಾಡಿರುವುದು ಬಹಳ ಕಡಿಮೆ. ಯಾರೋ ಕೆಲವರು ಸರ್ಪ್ಲಸ್ ಲ್ಯಾಂಡ್ ಇಟ್ಟುಕೊಂಡಿದ್ದಾರೆ ಅವರಿಗೆ ಹಾಕಿದರೆ ಸರಿಯಾಗುತ್ತದೆ. ಏಕೆಂದರೆ ಈಗ ಪ್ರತಿಯೊಂದು ಬೆಲೆಯೂ ಜಾಸ್ತಿಯಾಗಿದೆ. ಸಿಮೆಂಟ್ ಮೊದಲುಗೊಂಡು ಎಲ್ಲವೂ ಜಾಸ್ತಿಯಾಗಿದೆ. ಸರ್ಕಾರದವರು ಮಾಡಿರತಕ್ಕ ಈ ವೇಕೆಂಟ್ ಲ್ಯಾಂಡ್ ಟ್ಯಾಕ್ಸ್ ೨೧ ಕೋಟಿ ಏನು ಹಾಕಿದ್ದಾರೆ, ಇದನ್ನು ಬಿಟ್ಟುಬಿಡಬೇಕು. ಸರ್ಪ್ಲಸ್ ಲ್ಯಾಂಡ್ ಇಟ್ಟುಕೊಂಡಿರುವ ದೊಡ್ಡ ದೊಡ್ಡ ಸಾಹುಕಾರರು ಯಾರಿದ್ದಾರೆ ಅವರ ಮೇಲೆ ಮಾತ್ರ ಈ ತೆರಿಗೆ ಹಾಕಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ರೈತರ ವಿಷಯವನ್ನು ಹೇಳುವಾಗ. ನಾನು ಪುನಃ ಹೇಳಬೇಕಾಗಿದೆ. ನೀರು ಕಂದಾಯ ಜಾಸ್ತಿ ವಸೂಲ್ಮಾಡುತ್ತಿದ್ದಾರೆ. ೧೦ ಎಕರೆಗಿಂತ ಕಡಿಮೆ ಭೂಮಿಗೆ ಕಂದಾಯ ವಸೂಲ್ಮಾಡುವುದಿಲ್ಲವೆಂದು ಹೇಳಿದ್ದರು. ಮಾನ್ಯ ಬೊಮ್ಮಾಯಿಯವರೂ ಒಪ್ಪಿಕೊಂಡಿದ್ದರು. ಈಗಲೂ ಬಲಾತ್ಕಾರ ಮಾಡಿ ನೀರು ಕಂದಾಯ ವಸೂಲ್ಮಾಡುತ್ತಿದ್ದಾರೆ. ಈ ನೀರು ಕಂದಾಯ ಎಂದರೆ, ಎಲ್ಲಿ ನೀರು ಕೊಟ್ಟಿರುತ್ತಾರೆ, ಅಲ್ಲಿ ಮಾತ್ರ ಕಂದಾಯ ವಸೂಲ್ಮಾಡಬೇಕು. ಈಗಲೂ ನಮ್ಮ ಜಿಲ್ಲೆಯಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಬಲಾತ್ಕಾರ ಮಾಡಿ ವಸೂಲ್ಮಾಡುತ್ತಿದ್ದಾರೆ. ನಾನೂ ಇದರ ಬಗ್ಗೆ ಹೇಳಿದ್ದೇನೆ. ಅಸಿಸ್ಟೆಂಟ್ ಕಮಿಷನರ್‌ರವರು ಬಂದಿದ್ದರು. ಈಗ ನೀರು ಕಂದಾಯವನ್ನು ಅಸೆಸ್‌ಮೆಂಟ್ ಮಾಡಿ ಪ್ರತಿಯೊಂದು ಕಡೆ ಬಲಾತ್ಕಾರ ಮಾಡಿ ವಸೂಲು ಮಾಡುತ್ತಿದ್ದಾರೆ. ಮನೆಗಳಿಗೆ ನುಗ್ಗಿ ಈಗಲೂ ವಸೂಲು ಮಾಡುತ್ತಿದ್ದಾರೆ. ಮಾನ್ಯ ದೇವೇಗೌಡರೂ ರೈತರು, ಅವರು ಏತಕ್ಕೆ ಈ ರೀತಿ ಮಾಡುತ್ತಿದ್ದಾರೋ ನನಗೆ ಅರ್ಥ ಆಗುತ್ತಿಲ್ಲ. ಅವರು ಕಣ್ಣು ತೆರೆದು ನೋಡಬೇಕು. ಅವರ ಎಂಜಿನಿಯರ್‌ಗಳ ಮೇಲೆ ಕಂಟ್ರೋಲ್ ಇಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—ಈ ನೀರಿನ ಕಂದಾಯ ವಸೂಲಿ ಮಾಡುವುದು ಇದೆಯಲ್ಲ, ಇದರ ಬಗ್ಗೆ ಗೌಡರು ಆಜ್ಞೆ ಮಾಡುತ್ತಾರೆ, ಶಾನುಬೋಗರು ವಸೂಲು ಮಾಡುತ್ತಾರೆ. ಕಂದಾಯ ಇಲಾಖೆಯವರು ಬರೀ ಶಾನುಬೋಗರು,

ಪಿ.ಡಬ್ಲ್ಯೂ.ಡಿ ಇಲಾಖೆಯವರು ನೀರನ್ನು ಕೊಟ್ಟಿದ್ದೇವೆ ಇಷ್ಟು ನೀರಿನ ದರ ವಸೂಲು ಮಾಡಿ ಎಂದು ತಿಳಿಸುತ್ತಾರೆ. ಅದರ ಪ್ರಕಾರ ವಸೂಲು ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ನಾವು ಇದರ ಬಗ್ಗೆ ಮೊದಲೇ ಹೇಳಿದ್ದೇವೆ. ಮಾನ್ಯ ಬೊಮ್ಮಾಯಿಯವರು, ಗೌಡರು ಹೇಳುತ್ತಾರೆ, ಶಾನುಭೋಗರು ವಸೂಲು ಮಾಡುತ್ತಾರೆ ಎಂದು ಹೇಳಿದರು. ಅಂದರೆ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಇಷ್ಟು ವಸೂಲಿ ಮಾಡಿ ಎಂದು ಹೇಳುತ್ತಾರೆ. ನಾವು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಏನೂ ಮಾಡುವ ಹಾಗಿಲ್ಲ, ಶಾನುಭೋಗರು, ವಸೂಲು ಮಾಡುತ್ತೇವೆ ಎಂದು ಹೇಳುತ್ತಾರೆ. ನಾವು ಇದರ ಬಗ್ಗೆ ಹತ್ತಾರು ಸಾರಿ ಹೇಳಿದ್ದೇವೆ. ಇದಕ್ಕೆಲ್ಲಾ ಮೂಲಕಾರಣ ಫೈನಾನ್ಸ್ ಮಿನಿಸ್ಟರ್ ರಾಮಕೃಷ್ಣ ಹೆಗಡೆಯವರು. ನಿಮ್ಮಿಬ್ಬರಿಗೆ ಹಚ್ಚುತ್ತಾರೆ, ನೀವು ಎಚ್ಚರಿಕೆಯಿಂದ ಇರಿ ಎಂದು ಎಷ್ಟೋ ಸಲ ಹೇಳಿದರೂ ನೀವು ಕೇಳುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಎಚ್ಚರಿಕೆಯ ಅವಶ್ಯಕತೆ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದರಲ್ಲಿ ರಾಜಕೀಯದ ಬದಲಿಗೆ ವಾಸ್ತವಾಂಶವನ್ನು ಲೆಕ್ಕ ಹಾಕುವುದಾದರೆ ಈಗ ಐದು ವರ್ಷ ದಿಂದ ಈಚೆಗೆ ನೀರು ಕೊಡದೇ ಇರತಕ್ಕಂಥ ಭೂಮಿಂಗಳ ಮೇಲೆ ನೀರಿನ ತೆರಿಗೆಯನ್ನು ಹಾಕಿದ ರೆ, ಅದರ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ.

ಅದರ ಬಗ್ಗೆ ದಯವಿಟ್ಟು ತಿಳಿಸಿ. ಅದಕ್ಕಿಂತ ಹಳೆಯ ಬಾಕಿ ಇದ್ದರೆ ನಾನು ಜವಾಬ್ದಾರಿ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಈಚೆಗೆ ಐದು ವರ್ಷಗಳಲ್ಲಿ ನೀರು ಬರದೇ ಇದ್ದು ನೀರಿನ ತೆರಿಗೆಯನ್ನು ಹಾಕಿದ್ದರೆ ನೀವೇ ನನಗೆ ಬರೆಯಿರಿ, ಅದರ ಬಗ್ಗೆ ಪುನರ್ ವಿಮರ್ಶೆ ಮಾಡಿಸುತ್ತೇನೆ.

ಶ್ರೀ ರಮೇಶ್‌ಕುಮಾರ್. —ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಏನಾಗಿದೆ ಎಂದರೆ, ಕೆರೆಗಳಲ್ಲಿ ನೀರು ತುಂಬದೇ ಇದ್ದುದರಿಂದ ಕೆರೆಗಳನ್ನು ಕಂಪ್ಲೀಟ್ ಆಗಿ ಉತ್ತು ಬಿಟ್ಟಿದ್ದಾರೆ. ಕೆರೆ ತುಂಬಿದರೂ ಕೂಡಾ, ಆ ಕೆರೆಯ ಹಿಂದೆ ಎಷ್ಟು ಅಚ್ಚುಕಟ್ಟು ನಿಗದಿ ಮಾಡಿದ್ದಾರೋ ಅಷ್ಟು ಅಚ್ಚುಕಟ್ಟಿಗೆ ನೀರು ಸಾಲುವುದಿಲ್ಲ. ಕೆರೆಯಲ್ಲಿ ನೀರು ಬಂದಿದೆಯೋ ಇಲ್ಲವೇ, ಬೆಳೆ ಬೆಳೆದಿದ್ದಾರೆಯೋ ಇಲ್ಲವೇ ಎಂಬುದನ್ನು ರೆವಿನ್ಯೂ ಇಲಾಖೆಯವರು ನೋಡುವುದಿಲ್ಲ. ಅದರ ಬಗ್ಗೆ ಸ್ಪಷ್ಟವಾದ ಲೆಕ್ಕವನ್ನು ಇವರು ಇಟ್ಟುಕೊಂಡಿಲ್ಲ. ಅವರು ಏನು ಹೇಳುತ್ತಾರೆ ಎಂದರೆ, ನಮ್ಮ ವಿಲೇಜ್ ಅಕೌಂಟೆಂಟ್‌ಗಳು ಇರುವ ಕಡೆ ನೀರಿನ ತೆರಿಗೆ ವಸೂಲು ಮಾಡಬೇಕು ಎಂದು ಹೇಳುತ್ತಾರೆ, ನೀರು ಇರುವ ಕಡೆ ಬೆಳೆ ಬೆಳೆದಿರುವ ಕಡೆ ಇವರು ವಸೂಲು ಮಾಡುವುದಲ್ಲ. ನಮ್ಮ ವಿಲೇಜ್ ಅಕೌಂಟೆಂಟ್‌ಗಳು ಇರುವ ಕಡೆ ವಸೂಲು ಮಾಡಬೇಕು ಎಂದು ಟಾರ್ಗೆಟ್ ಇದೆ ಎಂದು ಹೇಳುತ್ತಾರೆ. ವಸೂಲು ಮಾಡಲೇಬೇಕೆಂದು ಹೇಳುತ್ತಾರೆ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಕೃಷ್ಣಾ ಬೇಸಿನ್ ಆದರೆ ಕಾವೇರಿ ಬೇಸಿನ್ ಆದರೆ ಹೇಮಾವತಿ ಆದರೆ, ಹಾರಂಗಿ ಆದರೆ ಪರವಾಗಿಲ್ಲ. ಆದರೆ ನಮ್ಮ ಶ್ರೀನಿವಾಸಪುರ ಮುಳಬಾಗಿಲು ಇಂತಹ ಕಡೆಗಳಲ್ಲಿ ವಾಟರ್ ಟ್ಯಾಕ್ಸ್ ಕೇಳಿದರೆ ಅದನ್ನು ಯಾವ ರೀತಿ ಕೊಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ರಮೇಶ್‌ಕುಮಾರ್ ಅವರಿಗೆ ರೈತರ ಬಗ್ಗೆ ಏನು ಕಳಕಳಿ ಇದೆ ಅದರ ಬಗ್ಗೆ ನಮ್ಮ ವಿವಾದ ಇಲ್ಲ. ಸ್ವಾಭಾವಿಕವಾಗಿ ನಮ್ಮಲ್ಲಿ ಏನು ಟೆಂಡೆನ್ಸಿ ಬೆಳೆದಿದೆ ಎಂದರೆ, ನಾನು ಪ್ರವಾಸ ಹೋದಾಗ ಕಣ್ಣು ಮುಂದೆ ಹುಲುಸಾಗಿ ಬೆಳೆದಿರುವ ಬೆಳೆ ನೋಡುತ್ತೇನೆ, ನಾನೂ ರೈತನೇ, ಬೇರೆ ಉದ್ಯೋಗ ಮಾಡಿ ನಾನು ಇಲ್ಲಿ ಬಂದಿಲ್ಲ. ಕಣ್ಣು ಮುಂದೆ ಬೆಳೆ ಇದ್ದರೂ ಕೂಡಾ, ನಾಲ್ಕು ಆಣೆ ಬೆಳೆ ಆಗಿಲ್ಲ, ನವೆಂಬರ್‌ನಲ್ಲಿ ಮಳೆ ಆಗದೆ ಬೆಳೆ ಬೆಳೆಯಲು ಆಗಿಲ್ಲ ಎಂದು ನಮ್ಮ ರೈತರು ವಾದ ಮಾಡುತ್ತಾರೆ, ಏನಯ್ಯ ಬೆಳೆ ಬೆಳೆದಿದೆಯಲ್ಲ ಎಂದು ಕೇಳಿದರೆ, ಏನು ಸ್ವಾಮಿ ನೀವು ರೈತರಾಗಿ. ಹೀಗೆ ಮಾಡುತ್ತೀರಿ ಎಂದು ಹೇಳುತ್ತಾರೆ. ಕೆಲವು ಕಡೆ ಅವರು ಹೇಳಿದಹಾಗೆ ನಿದರ್ಶನ ಗಳು ಇರಬಹುದು ಸತ್ಯ ಇರಬಹುದು, ಹೇಮಾವತಿಗೆ ನವೆಂಬರ್‌ವರೆಗೆ ನೀರೆ ಬಂದಿರಲಿಲ್ಲ, ನವೆಂಬರ್ ನಲ್ಲಿ ನೀರು ಬಂತು, ನಾವು ಬೆಳೆ ಹೋಯಿತು ಎಂದು ಲೆಕ್ಕ ಹಾಕಿದ್ದೆವು, ಆದರೆ ನೀರು ಬಂದು ಭೂಮಿ

ಯಲ್ಲಿ ಹುಲುಸಾದ ಬೆಳೆ, ಭತ್ತದ ಬೆಳೆ ಬಂದಿದೆ. ಆದರೂ ನಮ್ಮ ರೈತರು ನೀರು ತೆರಿಗೆ ಸೂಟ ಬಿಡಿ ಎಂದು ವಾದ ಮಾಡುತ್ತಾರೆ. ನೀರಾವರಿ ಇಲಾಖೆಯ ಚರ್ಚೆ ಬಂದಾಗ ಇದರ ಬಗ್ಗೆ ಮಾತನಾಡೋಣ ನಾನು ಎಲ್ಲಿಯವರೆಗೆ ನೀರಾವರಿ ಮಂತ್ರಿಯಾಗಿರುತ್ತೇನೋ ಅಲ್ಲಿಯವರೆಗೆ ನಾನು ಹೇಳಬೇಕಾದುದನ್ನು ಹೇಳುತ್ತೇನೆ. ಇದರ ಬಗ್ಗೆ ಬೇರೆ ಸಂದರ್ಭ ಬಂದಾಗ ಮಾತನಾಡೋಣ. ನಿಮಗೆ ಏನಾದರೂ ಈ ರೀತಿ ಅನಾನುಕೂಲ ಆಗಿದ್ದರೆ ಅದನ್ನು ಬರೆದು ತಿಳಿಸಿ, I will send our Officers to re-examine it.

ಶ್ರೀ ಜಿ. ಮಾದೇಗೌಡ (ಕಿರುಗಾವಲ್).—ಮಾನ್ಯ ಅಧ್ಯಕ್ಷರೇ, ಕೆ.ಆರ್.ಎಸ್. ಅಚ್ಚುಕಟ್ಟಿನಲ್ಲಿ ಈ ವರ್ಷ ತಮ್ಮ ಸೂಚನೆಯ ಮೇಲೆ ಇದು ನಡೆಯುತ್ತಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಸರಕಾರದವರು ಒಂದು ನೋಟಿಫಿಕೇಷನ್ ಹೊರಡಿಸಿದ್ದಾರೆ. ವಿ.ಸಿ. ಅಚ್ಚುಕಟ್ಟಿನಲ್ಲಿ, ಕಬ್ಬಿಗೆ, ಸೆಮಿಡ್ರೈ ಕ್ರಾಪ್‌ಗೆ ನೀರು ತೆಗೆದುಕೊಂಡರೆ ಮಾಮೂಲಿ ವಾಟರ್ ರೇಟ್ ಕೊಡುವುದು, ಇತರೆ ಯಾವುದೇ ಬೆಳೆ ಬೆಳೆದರೂ ಕೂಡಾ ಒಂದಕ್ಕೆ ಹತ್ತು ಪಟ್ಟು ಕಂದಾಯ ಹಾಕುವುದು. ಎಂಜಿನಿಯರ್‌ಗಳು ಒಂದಕ್ಕೆ ಹತ್ತು ಪಟ್ಟು ಜಾಸ್ತಿಯಾಗಿ ವಸೂಲು ಮಾಡುತ್ತಿದ್ದಾರೆ. ವಸೂಲು ಮಾಡಲು ರೆವಿನ್ಯೂ ಅವರ ಡಿಪಾರ್ಟ್‌ಮೆಂಟ್‌ನವರನ್ನು ಕಳುಹಿಸಿಕೊಡುತ್ತಿದ್ದಾರೆ. ಈ ಪದ್ಧತಿ ಎಂದೂ ಇರಲಿಲ್ಲ. ಜೌಗು ಪ್ರದೇಶದಲ್ಲಿ ಡ್ರೈ ಕ್ರಾಪ್ ಬೆಳೆಯುವುದಕ್ಕೆ ಆಗುತ್ತದೆಯೇ, ನೀವೂ ರೈತರೇ ಅಲ್ಲವೇ, ಇದು ನಿಮಗೆ ಗೊತ್ತಿಲ್ಲವೇ? ಸಾಮಾನ್ಯವಾಗಿ ಜೌಗು ಪ್ರದೇಶದಲ್ಲಿ ನೀರು ನಿಂತಿರುತ್ತದೆ, ಅಲ್ಲಿ ಭತ್ತ ಬೆಳೆದುಕೊಳ್ಳುತ್ತಾರೆ, ಅಂತಹವರಿಗೆ ೧೦ಪಟ್ಟು ಕಂದಾಯ ಹಾಕುವುದಕ್ಕೆ ಆಗುತ್ತದೆಯೇ? ಇದರಿಂದ ಅಲ್ಲಿ ದೊಡ್ಡ ಗೊಂದಲ ಆಗುತ್ತಿದೆ. ನಿಮ್ಮ ಅಧಿಕಾರಿಗಳಿಗೆ ಈ ವಿಷಯದಲ್ಲಿ ಸೂಕ್ತ ಸಲಹೆ ಕೊಡುವುದು ಒಳ್ಳೆಯದು.

ಶ್ರೀ ಹೆಚ್. ಡಿ. ದೇವೇಗೌಡ.—ಮಂಡ್ಯ ಜಿಲ್ಲೆಯಲ್ಲಿ ನಾನು ಪ್ರವಾಸ ಮಾಡಿದ್ದೇನೆ, ಅವರು ಹೇಳತಕ್ಕಂಥಾದ್ದು ಅವರ ಅನುಭವದ ಮೇಲೆ ಇರಬಹುದು. ಅಲ್ಲಿ ನೋಟಿಫೈಡ್ ಏರಿಯಾದಲ್ಲಿ ರೈತರು ಕಬ್ಬು ಬೆಳೆಯುವುದಕ್ಕೆ ಒಪ್ಪಿಕೊಂಡಿದ್ದಾರೆ. ಎಲ್ಲಿ ನೋಟಿಫೈಡ್ ಏರಿಯಾ ಇರುತ್ತದೆಯೋ ಅಲ್ಲಿ ನೀರು ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಈಗ ಅಲ್ಲಿ ಏನಾಗಿದೆ ಎಂದರೆ ಕಬ್ಬು ಬೆಳೆಯುವ ಜಾಗದಲ್ಲಿ ಭತ್ತ ಬೆಳೆಯುತ್ತಾರೆ. ಭತ್ತ ಬೆಳೆಯುವ ಜಾಗದಲ್ಲಿ ಕಬ್ಬು ಬೆಳೆಯುತ್ತಾರೆ. ಈ ರೀತಿಯಾದರೆ ನೀರು ಸಾಕಾಗುವುದಿಲ್ಲ. ಆದ್ದರಿಂದಲೇ ನಾವು ಕಬ್ಬು ಬೆಳೆಯುವುದಕ್ಕೆ ಮತ್ತು ಭತ್ತ ಬೆಳೆಯುವುದಕ್ಕೆ ಏರಿಯಾವನ್ನು ನೋಟಿಫೈ ಮಾಡಿರುವುದು. ನಾವು ನೋಟಿಫೈ ಮಾಡಿದ ರೀತಿ ಬೆಳೆ ಬೆಳೆದರೆ ನೀರು ಅಡ್ಜಸ್ಟ್ ಮಾಡಬಹುದು ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಜಿ. ಮಾದೇಗೌಡ.—ನೋಟಿಫೈಡ್ ಏರಿಯಾದಲ್ಲಿ ಕಬ್ಬು ಬೆಳೆಯತಕ್ಕಂಥಾದ್ದು ಒಂದು ವಿಷಯ...

ಶ್ರೀ ಹೆಚ್. ಡಿ. ದೇವೇಗೌಡ.—ಅಲ್ಲಿರುವಂತಹ ವಿಷಯ ಇಷ್ಟೇ. ಕಬ್ಬು ಬೆಳೆಯುವ ಕಡೆ ಭತ್ತವನ್ನು ಎರಡೆರಡು ಕ್ರಾಪ್ ಬೆಳೆಯುತ್ತಿದ್ದಾರೆ. ಎರಡು ಬೆಳೆಗೆ ನಾವು ನೀರು ಕೊಡುವುದಕ್ಕೆ ಆಗುತ್ತದೆಯೇ? ಕಬ್ಬು ಬೆಳೆದರೆ ೧೦-೧೨ ತಿಂಗಳು ನಾವು ನೀರು ಕೊಡಬೇಕಾಗುತ್ತದೆ. ಅಲ್ಲಿರುವ ಸಮಸ್ಯೆ ಇದು. ನಾನು ಮೊನ್ನೆ ಮಂಡ್ಯ ಜಿಲ್ಲೆಗೆ ಪ್ರವಾಸ ಬಂದಿದ್ದಾಗ ಅಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದೆ. ಅದು ಇವತ್ತು ಕಾಂಟ್ರವರ್ಸಿಯಾಗಿದೆ. ಈ ಬಗ್ಗೆ ನನ್ನ ಇಲಾಖೆ ಬೇಡಿಕೆಗಳು ಬಂದಾಗ ಹೇಳುತ್ತೇನೆ. ಈಗ ಏನನ್ನು ಹೇಳುವುದಿಲ್ಲ,

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ಒಂದು ನಿಮಿಷ. ಸನ್ಮಾನ್ಯ ರಾಷ್ಟ್ರಪತಿಗಳಿಗೆ ಪೌರ ಸನ್ಮಾನ ಕಾರ್ಯಕ್ರಮ ಇರುವುದರಿಂದ ಅವರ ಗೌರವಾರ್ಥ ನಾವು ಅಲ್ಲಿಗೆ ಹೋಗಬೇಕಾಗಿದೆ. ಆದ್ದರಿಂದ ನಾನು ಸಭೆಯನ್ನು ಈಗ ಮುಂದೂಡಿ ಮತ್ತೆ ೪-೩೦ಕ್ಕೆ ಸೇರೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮತ್ತೆ ಸೇರುವುದು ಬೇಡ ಅಧ್ಯಕ್ಷರೇ, ನಾಳೆ ಸೇರೋಣ.

ಅಧ್ಯಕ್ಷರು.—ಒಂದು ಗಂಟೆ ಬಿಜಿನೆಸ್ ಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈಗ ಸಭೆ ಮುಂದೂಡಿದ್ದೀರಿ, ಮತ್ತೆ ಸೇರುವುದು ಕಷ್ಟವಾಗುತ್ತದೆ. ನಾವು ಆ ಸಮಾರಂಭಕ್ಕೆ ಹೋಗುತ್ತಿದ್ದೇವೆ, ಅಲ್ಲಿ ಎಷ್ಟು ಸಮಯ ವಾಗುತ್ತದೆಯೋ ಗೊತ್ತಿಲ್ಲ ಆದ್ದರಿಂದ ಈಗ ಸಭೆಯನ್ನು ನಾಳೆಗೆ ಮುಂದೂಡಿ ನಾಳೆ ಸ್ವಲ್ಪ ಹೆಚ್ಚು ಸಮಯ ಕುಳಿತುಕೊಂಡು ಕಾರ್ಯಕಲಾಪಗಳನ್ನು ನಡೆಸೋಣ.

ಅಧ್ಯಕ್ಷರು.—ಆಯಿತು. ಸಭೆಯನ್ನು ಈಗ ಮುಂದೂಡಿ ನಾಳೆ ಮತ್ತೆ ೧೧-೦೦ ಗಂಟೆಗೆ ಸೇರುವುದು.

(ಸಭೆ ೩-೩೫ ನಿಮಿಷಕ್ಕೆ ಮುಕ್ತಾಯವಾಗಿ ನಾಳೆ ಅಂದರೆ ಗುರುವಾರ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)